ಲಂಕೇಶ್


ರಂಜನ ಬೋಧನೆ ಪ್ರಚೋದನೆ

ಡಿಸೆಂಬರ್ 17, 2008 ರೂ. 12/-

ಚೆನ್ನಿಗ ಚಿಂದಿ!

ಅನಿತಾ ಅಖಾಡಕ್ಕೆ





೩೦ ಕ್ರಿಮಿನಲ್ ಕೇಸ್‌ಗಳ ರೌಡಿ ಸಿಎಂ ಆದರೆ ಏನು ಗತಿ?

ಆಟೋಗಳಿಗೆ ಎಲ್‌ಪಿಜಿ ಕಡ್ಡಾಯ: ಅಶೋಕನ ಕಮಾಯಿ ದಂಧೆ



ಅಂಕೋಲ: ಸತೀಶ್ ಗಾಳಿಗೆ ಆಸ್ನೋಟಿಕರ್ ತರಗೆಲೆ



ಮದ್ದೂರು: ಕಲ್ಪನಾ ಸಿದ್ಧರಾಜು ಗೆಲ್ಲುವ ಕುದುರೆ!



ಮಾದಿಗರ ಮನೆಗೆ ಬರಲಿಲ್ಲ ಯಾಕೆ?

ತಾರತಮ್ಯ



ಒಲಂಪಿಕ್ ಕ್ರೀಡೆಯಲ್ಲಿ ಬಂದೂಕುಗಾರನೊಬ್ಬ ಚಿನ್ನದ ಪದಕ ಗೆಲ್ಲುತ್ತಾನೆ. ಆತನಿಗೆ ಸರ್ಕಾರ ಮೂರು ಕೋಟಿ ರೂಪಾಯಿಗಳ ಪುಸ್ತಿ ಹಣವನ್ನು ಘೋಷಿಸುತ್ತದೆ.

ಭಾರತದ ಜನರ ರಕ್ಷಣೆಗೆಂದು ಮತ್ತೊಬ್ಬ ಬಂದೂಕುಗಾರ ಭಯೋತ್ಪಾದಕರೊಂದಿಗೆ ಸೆಣೆಸಾಡುತ್ತಾ ಸಾವನ್ನಪ್ಪುತ್ತಾನೆ. ಆತನ ಸಂಸ್ಕಾರಕ್ಕೆ ಸರ್ಕಾರ ಐದು ಲಕ್ಷ ರೂಪಾಯಿಗಳ ಪರಿಹಾರ ಧನವನ್ನು ಘೋಷಿಸುತ್ತದೆ.



ಮೇರಾ ಭಾರತ್ ಮಹಾನ್!

-ಎಲ್ಲೆಡೆ ಹಬ್ಬಿದ ಎಸ್ಸೆಮ್ಮೆಸ್ ವ್ಯಂಗ್ಯ

ಕಮಾಂಡೋ ಕೆಲಸ



"ಎಲ್ಲಾ ಭಯೋತ್ಪಾದಕರೂ ಕೊನೆಗೆ ತಮ್ಮ ದೇವನನ್ನು ಭೇಟಿ ಆಗೇ ಆಗುತ್ತಾರೆ. ದೇವನೊಂದಿಗೆ ಅವರೆಲ್ಲರಿಗೆ ಒಂದು ಅಪಾಯಿಂಟ್‌ಮೆಂಟ್ ಅನ್ನು ನಿಗದಿ ಮಾಡುವುದಷ್ಟೇ ನಮ್ಮ ಕೆಲಸ."

-ಮುಂಬೈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಓರ್ವ ಕಮಾಂಡೋ

ನಾಯಕನ ಗೈರತ್ತು



"ಇಂತಹ ಪುಟ್ಟ ಘಟನೆಗಳು ದೊಡ್ಡ ನಗರಗಳಲ್ಲಿ ನಡೆಯುತ್ತವೆ. ನಾನು ಯಾಕೆ ರಾಜೀನಾಮೆ ಸಲ್ಲಿಸಬೇಕು?"

-ಈಗ ರಾಜೀನಾಮೆ ಸಲ್ಲಿಸಿರುವ ಮಹಾರಾಷ್ಟ್ರದ ಗೃಹಮಂತ್ರಿ ಆರ್.ಆರ್. ಪಾಟೀಲ್

ರಕ್ಷಣೆ ಯಾರಿಗೆ?




ಭಯೋತ್ಪಾದಕರ ದಾಳಿಯ ನಂತರ ಮುಂಬೈನ ಎರಡು ಕಟ್ಟಡಗಳಿಗೆ ಭದ್ರತೆಯನ್ನು ಹೆಚ್ಚಿಸಲಾಯಿತು.

ಒಂದು: ತಾಜ್ ಹೋಟೆಲ್‌ನಿಂದ ಇನ್ನೂರು ಮೀಟರ್ ದೂರವಿರುವ ಪೊಲೀಸ್ ಇಲಾಖೆಯ ಮುಖ್ಯ ಕಟ್ಟಡ. ಎರಡು: ಅಂಬಾನಿಗಳು ವಾಸಿಸುವ ಬಹುಮಹಡಿ ಕಟ್ಟಡ.

-ಪತ್ರಿಕಾ ವರದಿ

ಬಿಂಬ, ಪ್ರತಿಬಿಂಬ



"ಮಾಲೆಗಾಂವ್ ತನಿಖೆಯಲ್ಲಿ ಭಾಗವಹಿಸಿರುವ ಎಲ್ಲಾ ಪೊಲೀಸರ ಹೆಸರುಗಳನ್ನು ನಾವು ಬಹಿರಂಗಪಡಿಸುತ್ತೇವೆ. ಅವರೆಲ್ಲರ ವಿರುದ್ಧ ಜನರೇ ಕ್ರಮ ತೆಗೆದುಕೊಳ್ಳುತ್ತಾರೆ. ಹಿಂದೂತ್ವವಾದವನ್ನು ಅವಹೇಳನ ಮಾಡಲು ATS ತಂಡದವರು 'ಸುಪಾರಿ' ಪಡೆದಿದ್ದಾರೆ. ಇಂತಹ ಅಧಿಕಾರಿಗಳ ಮುಖಕ್ಕೆ ಜನ ಕ್ಯಾಕರಿಸಿ ಉಗಿಯಬೇಕು."

-ಶಿವಸೇನೆಯ ಮುಖವಾಣಿ 'ಸಾಮ್ನಾ' ಪತ್ರಿಕೆಯಲ್ಲಿ ಬಾಳ್‌ಠಾಕ್ರೆ ಬರೆದದ್ದು, ಇದಾದ ಒಂದು ವಾರದ ನಂತರ ಅದೇ 'ಧೀರ' ಅಧಿಕಾರಿಗಳ ಅಂತ್ಯಸಂಸ್ಕಾರದಲ್ಲಿ ಭಾಗವಹಿಸಲು ಠಾಕ್ರೆ ಪುತ್ರ ಉದ್ಧವ್‌ಗೆ 'ಅವಕಾಶ' ಸಿಗಲಿಲ್ಲ.

ಅನಾಥ ದೇಶ



ಛತ್ರಪತಿ ಶಿವಾಜಿ ಟರ್ಮಿನಸ್ ಮೇಲಿನ ದಾಳಿಯಲ್ಲಿ ಮಡಿದ 72 ಜನರಲ್ಲಿ ಇವತ್ತಿಗೂ 14 ಶವಗಳನ್ನು ಯಾರೂ ಗುರುತಿಸಿಲ್ಲ. ಪ್ರತಿದಿನ ಸಿಎಸ್‌ಟಿಯನ್ನು ಸ್ವಚ್ಛಗೊಳಿಸುತ್ತಿದ್ದ ಅದೇ ದಾಳಿಯಲ್ಲಿ ಸತ್ತ ಮಹಿಳೆಯ ಹೆಸರು ಯಾರಿಗೂ ಗೊತ್ತಿಲ್ಲ. ಹೀಗೆ ಗುರುತಿಸದೇ ಇರುವ ಶವಗಳಲ್ಲಿ ಐದು ವರ್ಷ ವಯಸ್ಸಿನ ಬಾಲಕನೂ ಒಬ್ಬ.

-ಪತ್ರಿಕಾ ವರದಿ

ರಕ್ತ ಕಣ್ಣೀರು



"ಅಲ್ಲಾ ಭಯೋತ್ಪಾದಕ ಕೃತ್ಯಗಳನ್ನು ಭಾರತೀಯ ಮುಸಲ್ಮಾನರ ಮೇಲೆ ಹೇರುತ್ತಾರಲ್ಲ, ಬಾಂಬ್ ಸ್ಫೋಟಗಳಲ್ಲಿ ಅದೆಷ್ಟು ಮುಸಲ್ಮಾನರೂ ಸತ್ತಿದ್ದಾರೆಂದು ಮಾಧ್ಯಮಗಳು ದಾಖಲಿಸಿವೆಯಾ?"

-ಮುಂಬೈ ನಗರದ ಮುಸ್ಲಿಮ್ ನಿವಾಸಿ

ಅವರಿಗೊಂದು ಇವರಿಗೊಂದು

"ನಮ್ಮ ಮಾಧ್ಯಮಗಳಿಗೆ ವರ್ಗ ತುಂಬಾ ಮುಖ್ಯ. ಆದ್ದರಿಂದಲೇ ರೈಲ್ವೇ ಅಪಘಾತ ಸಂಭವಿಸಿ ಸಾವಿರಾರು ಜನ ಸತ್ತರೆ ಮಾಧ್ಯಮಗಳಿಗೆ ಅದು ಒಂದು ಸಾಧಾರಣ ಘಟನೆಯಂತೆ ಕಾಣಿಸುತ್ತದೆ. ಆದರೆ ವಿಮಾನವೊಂದು ನೆಲಕ್ಕಪ್ಪಳಿಸಿ ನೂರಾರು ಜನ ಸತ್ತರೆ ಅದು ದೊಡ್ಡ ಅನಾಹುತದಂತೆ ಕಾಣಿಸುತ್ತದೆ. ಯಾಕೆಂದರೆ ಮಾಧ್ಯಮಗಳಿಗೆ ಸತ್ತವರ ಸಂಖ್ಯೆಗಿಂತಲೂ, ಯಾವ ವರ್ಗದವರು ಸತ್ತರು ಎಂಬುದೇ ಮುಖ್ಯವಾಗುತ್ತದೆ.



ಅಧಿಕಾರಿಗಳ ವಿಷಯಕ್ಕೆ ಬಂದರೆ ಸಾವಿನಲ್ಲೂ ಶ್ರೇಣೀಕೃತ ಭೇದವಾಗಲಿದೆ. ಆ ಕಾರಣಕ್ಕೆ ಎಲ್ಲಾ ಟಿವಿ ಚಾನೆಲ್‌ಗಳು ಆಂಟಿ ಟೆರರಿಸ್ಟ್ ಸ್ಕ್ವಾಡ್‌ನ ಮುಖ್ಯಸ್ಥ ಹೇಮಂತ್ ಕರ್ಕರೆ ಅವರ ಅಂತ್ಯಸಂಸ್ಕಾರವನ್ನು ವರದಿ ಮಾಡಿದವು. ಆದರೆ ಅದೇ ದಾಳಿಯಲ್ಲಿ ಮಡಿದ ಆರು ಪೇದೆಗಳ ಬಗ್ಗೆ ಒಂದೇ ಒಂದು ತುಣುಕನ್ನೂ ತೋರಿಸಲಿಲ್ಲ."

ಈ ಹಿಂದೆ ಅದೆಷ್ಟೋ ಗಲಭೆಗಳು ಮತ್ತು ಸರಣಿ ಬಾಂಬ್ ಸ್ಫೋಟಗಳು ಸಂಭವಿಸಿದ್ದರೂ ಯಾವ ರಾಜಕೀಯ ನಾಯಕನೂ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಿರಲಿಲ್ಲ. ಆದರೆ ಈ ದಾಳಿಯ ನಂತರ ಮುಂಬೈನ ಉನ್ನತ ವರ್ಗದವರು ಆಗ್ರಹಿಸಿದ್ದರಿಂದ ಹಲವರ ರಾಜೀನಾಮೆಗಳನ್ನು ಪಡೆಯಲಾಗಿದೆ."

-ಅಜಿತ್ ಪಿಳ್ಳೈ, ಬರಹಗಾರ

ಅಸಲಿ ದೇಶಭಕ್ತ



"ಭಯೋತ್ಪಾದಕರು-ಅವರು ಎಲ್ಲಿಂದಲೇ ಬಂದಿರಲಿ, ಯಾವ ಧರ್ಮದ ಅನುಯಾಯಿಗಳೇ ಆಗಿರಲಿ-ಅವರು ಖಂಡಿತವಾಗಿಯೂ ಮುಸಲ್ಮಾನರಲ್ಲ. ಅವರ ದೇಹಗಳನ್ನು ಮುಂಬೈನ ಕಬರಸ್ತಾನದಲ್ಲಿ ಹೂಳುವುದಕ್ಕೆ ಅನುಮತಿ ನೀಡಕೂಡದು. ಅವರು ಸಹಸ್ರಾರು ಅಮಾಯಕರ ಜೀವ ತೆಗೆದುಕೊಂಡರು, ರಕ್ತ ಹರಿಸಿದರು. ಯಾವುದೇ ಕಾರಣಕ್ಕೂ ಅವರನ್ನು ಮುಸಲ್ಮಾನರೆಂದಾಗಲೀ, ಇಸ್ಲಾಮಿನ ಅನುಯಾಯಿಗಳೆಂದಾಗಲೀ ಪರಿಗಣಿಸಲಾಗುವುದಿಲ್ಲ. ಪವಿತ್ರವಾದ ಭಾರತ ಮಾತೆಯ ಭೂಮಿಯಲ್ಲಿ ಅವರನ್ನು ಮಣ್ಣು ಮಾಡಬಾರದು ಮತ್ತು ಯಾರೂ ಅವರಿಗೆಂದು ನಮಾಜ್ ಮಾಡಕೂಡದು. ಈ ಕೃತ್ಯದಿಂದ ಇತರರಂತೆ ನಾವೂ ಕುಪಿತರಾಗಿದ್ದೇವೆ. ಎಲ್ಲರಂತೆ ನಮಗೂ ನೆಮ್ಮದಿಯ, ಸುರಕ್ಷಿತ ಬದುಕು ಬೇಕಿದೆ. ಮುಸಲ್ಮಾನರೂ ಈ ಭಯೋತ್ಪಾದಕರ ಕೃತ್ಯಕ್ಕೆ ಬಲಿಯಾಗಿದ್ದಾರೆ."

-ಮುಸ್ಲಿಮ್ ಕೌನ್ಸಿಲ್ ಅಧ್ಯಕ್ಷ ಇಬ್ರಾಹಿಂ ತಾಯ್

ಈಗೊಂದು ಲೆಕ್ಕ



"ಈ ಕೃತ್ಯದ ಹಿಂದೆ ನಿಜವಾಗಲೂ ಪಾಕಿಸ್ತಾನದ ಕೈವಾಡ ಇದೆ ಎಂಬುದು ಸಾಬೀತಾದರೆ ಭಾರತಕ್ಕೆ ಒಂದು ಹೊಸ ಜವಾಬ್ದಾರಿ ಇದೆ. ಅದು ಪಾಕಿಸ್ತಾನದ ಮೇಲೆ ಯುದ್ಧ ಸಾರುವುದಲ್ಲ, ಬದಲಾಗಿ ಪಾಕಿಸ್ತಾನದ ಷಡ್ಯಂತ್ರಕ್ಕೆ ಇವತ್ತು ಭಾರತ ಗುರಿಯಾಗಿರಬಹುದು, ಆದರೆ ನಾಳೆ ಮತ್ತು ನಾಡಿದ್ದು ಇಂತಹ ಕೃತ್ಯಗಳಿಗೆ ಜಗತ್ತಿನ ಇತರೆ ದೇಶಗಳೂ ಗುರಿಯಾಗಲಿವೆ ಎಂದು ಬೇರೆ ದೇಶಗಳನ್ನು ಎಚ್ಚರಿಸುವುದು. ಭಾರತ ಹಾಗೆ ಮಾಡಿದಾಗ ಎಲ್ಲಾ ದೇಶಗಳು ಒತ್ತಡ ತಂದು ಇನ್ನು ಮುಂದೆ ಯಾವುದೇ ಭಯೋತ್ಪಾದಕ ಸಂಘಟನೆಗಳಿಗೆ ತಾನು ಬೆಂಬಲ ನೀಡುವುದಿಲ್ಲ ಎಂಬ ಪ್ರಮಾಣವನ್ನು ತಪ್ಪಿತಸ್ಥ ದೇಶದಿಂದ ಪಡೆಯಬಹುದು. ಅಕಸ್ಮಾತ್ ಇಂತಹ ಒಪ್ಪಂದಕ್ಕೆ ಪಾಕಿಸ್ತಾನ ಸಹಿ ಹಾಕಲು ನಿರಾಕರಿಸಿದರೆ ಆಗ ಅದರ ಮೇಲೆ ಯುದ್ಧ ಸಾರಲು ಭಾರತಕ್ಕೆ ನೈತಿಕ ಹಕ್ಕಿರುತ್ತದೆ.

ಇನ್ನು ಈ ದಾಳಿಯಲ್ಲಿ ಮಡಿದ ನೂರಾರು ಭಾರತೀಯರಿಗಿಂತಲೂ ಸಾವನ್ನಪ್ಪಿದ ಪಾಶ್ಚಿಮಾತ್ಯರ (22) ದುರಂತವೇ ಮುಖ್ಯ ಎಂಬಂತೆ ಬಿಂಬಿಸಿದ ಪಾಶ್ಚಿಮಾತ್ಯ ಮಾಧ್ಯಮಗಳಿಗೆ ಒಂದು ಕಿವಿಮಾತು: ಇತಿಹಾಸದುದ್ದಕ್ಕೂ ಸಾಮ್ರಾಜ್ಯಗಳು ಉರುಳಿ ಬಿದ್ದ ಆನಂತರ ಲೆಕ್ಕಕ್ಕೆ ಇಲ್ಲದಂತಾಗಿವೆ. ಆದ್ದರಿಂದ ಎಚ್ಚೆತ್ತುಕೊಳ್ಳಿ ಮುಂದೊಂದು ದಿನ ಚೀನಾ ಅಥವಾ ಮತ್ತೊಂದು ದೇಶ ಸೂಪರ್ ಪವರ್ ಆಗಿ ಬೆಳೆದು ನಿಂತು ಆಗ ನೀವಾಗಲಿ, ನಿಮ್ಮ ಜನರಾಗಲಿ ಲೆಕ್ಕಕ್ಕೆ ಇಲ್ಲದಂತಾಗಬಹುದು."

-ಕಿರಣ್ ನಾಗರ್‌ಕರ್, ಖ್ಯಾತ ಲೇಖಕ

ಕಾಮಿಡಿ ಟೈಮ್



ಮುಂಬೈ ಮೇಲೆ ದಾಳಿ ಮಾಡಿ ಸಿಕ್ಕಿಹಾಕಿಕೊಂಡಿರುವ ಏಕೈಕ ಭಯೋತ್ಪಾದಕನ ಹೆಸರೇನು ಎಂಬುದೇ ಮಾಧ್ಯಮಗಳಿಗೆ ಇನ್ನೂ ಸ್ಪಷ್ಟವಾಗಿಲ್ಲ. ಆದ್ದರಿಂದ ಮಹಮ್ಮದ್ ಅಮೀನ್ ಕಸಬ್, ಆಜಮ್ ಅಮೀರ್ ಕಸವ್, ಆಜಮ್ ಅಮೀರ್ ಕಸಬ್ ಎಂದೆಲ್ಲಾ ವಿವಿಧ ರೀತಿಯಲ್ಲಿ ವರದಿ ಮಾಡುತ್ತಿವೆ.

ವಾಸ್ತವವಾಗಿ ಆತನ ಸರಿಯಾದ ಹೆಸರು ಮೊಹಮದ್ ಅಜಮಲ್ ಅಮೀರ್. ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಓಕಾರ ಜಿಲ್ಲೆಯ ಫರೀದ್ ಕೋಟ್ ಎಂಬ ಗ್ರಾಮದವನು.

ಯಾವುದೇ ವಿಚಾರಣೆಯಲ್ಲಿ ಆರೋಪಿಯ ಹೆಸರು ಮೊದಲು ಸ್ಪಷ್ಟವಾಗಬೇಕು. ಆದರೆ ಈ ಭಯೋತ್ಪಾದಕನ ವಿಷಯದಲ್ಲಿ ಗೊಂದಲಗಳು ಸೃಷ್ಟಿಯಾಗಿದ್ದಕ್ಕೆ ಕಾರಣ ಮುಂಬೈನ ಮರಾಠಿ ಪೊಲೀಸರಿಗೆ ಅಮೀರನ ಪಾಕಿಸ್ತಾನದ ದಕ್ಷಿಣ ಪಂಜಾಬಿ ಭಾಷೆ ಗೊತ್ತಿಲ್ಲದಿದ್ದದ್ದು.

ಮುಂಬೈನ ಪೊಲೀಸ್ ಅಧಿಕಾರಿಯೊಬ್ಬರು ಆತನ ವಿಚಾರಣೆ ಪ್ರಸಂಗವನ್ನು ವಿವರಿಸಿದ್ದು ಹೀಗೆ: "ನಮ್ಮ ಜೀವಮಾನದಲ್ಲೇ ಅತಿ ಮುಖ್ಯವಾದ ಆರೋಪಿಯೊಬ್ಬನ ವಿಚಾರಣೆ ನಡೆಸುತ್ತಿದ್ದೆವು. ಆದರೆ ನಾವು ಕೇಳಿದ್ದು ಆತನಿಗೆ ಅರ್ಥವಾಗುತ್ತಿರಲಿಲ್ಲ, ಆತ ಹೇಳಿದ್ದು ನಮಗೆ ಅರ್ಥವಾಗುತ್ತಿರಲಿಲ್ಲ."

ವಿಷಯ ಇಷ್ಟು ಗಂಭೀರವಾಗಿರದಿದ್ದರೆ ಇದನ್ನು ಯಾವುದೋ ಭಾರತೀಯ ಸಿನಿಮಾದ ಕಾಮಿಡಿ ಸೀನ್ ಎಂದು ಭಾವಿಸಬಹುದಿತ್ತು.

-ಪತ್ರಿಕಾ ವರದಿ

ಮಾಧ್ಯಮಗಳ ಬೇಜವಾಬ್ದಾರಿತನ

ಭಯೋತ್ಪಾದಕರು ಇನ್ನೂ ಆ ಕಟ್ಟಡಗಳಲ್ಲಿ ತಮ್ಮ ಹಿಂಸಾಕೃತ್ಯಗಳನ್ನು ಮುಂದುವರೆಸಿದ್ದರು. ಆದರೆ ಭಾರತೀಯ ಮಾಧ್ಯಮಗಳು ಆಗಲೇ ಅವರು ಯಾರದೋ ದೇಶದವರು, ಎಂತಹ ಆಯುಧಗಳನ್ನು ಹೊಂದಿದ್ದಾರೆ, ಯಾವ ತರಹದ ಮೊಬೈಲ್‌ಗಳನ್ನು ಬಳಸುತ್ತಿದ್ದಾರೆ ಎಂದು ವರದಿ ಮಾಡಲಾರಂಭಿಸಿದ್ದವು. ಅವರಿಗೆ ಈ ಮಾಹಿತಿ ಸಿಕ್ಕಿದ್ದು ಹೇಗೆ?

ದಾಳಿಯ ಎರಡನೆ ದಿನ ಭಾರತ ಸೈನ್ಯದ ಹಿರಿಯ ಅಧಿಕಾರಿಯೊಬ್ಬರು ಪಾಕಿಸ್ತಾನ ಇದರ ಹಿಂದಿದೆ ಎಂದರು. ಅದೇ ದಿನ ಭಾರತದ ಪ್ರಧಾನಿ ಯಾವ "ಹೊರಗಿನ ಕೈವಾಡವಿದೆ" ಎಂದು ಆರೋಪಿಸಿದರು. ಆದರೆ ಇದಕ್ಕೆ ಆಧಾರ ಏನು ಎಂದು ಯಾವ ಮಾಧ್ಯಮದವರೂ ಪ್ರಶ್ನಿಸಲಿಲ್ಲ.



ಬದಲಾಗಿ ಭಾರತದಲ್ಲಿ ಸಂಭವಿಸುವ ಎಲ್ಲಾ ಕೃತ್ಯಗಳಿಗೂ ಪಾಕಿಸ್ತಾನವನ್ನು ಆರೋಪಿಸುವುದು ಸಹಜ ಪ್ರಕ್ರಿಯೆ ಎಂಬಂತಾಗಿದೆ. ಚಿಟ್ಟೀಸಿಂಗ್ ಪೊರಾ, ಪಾರ್ಲಿಮೆಂಟ್ ಮೇಲಿನ ದಾಳಿ, ಇತ್ತೀಚೆಗಿನ ಸಂಜೋತಾ ರೈಲಿನಲ್ಲಿ ಬಾಂಬ್ ಸ್ಫೋಟ (ಇದರಲ್ಲಿ ಭಾರತೀಯ ಸೈನ್ಯದ ಲೆಫ್ಟಿನೆಂಟ್ ಒಬ್ಬ ಭಾಗಿಯಾಗಿದ್ದ ಎಂದು ಈಗ ಬಹಿರಂಗಗೊಂಡಿದೆ)-ಇವೆಲ್ಲದಕ್ಕೂ ಭಾರತದ ಸರ್ಕಾರ ಮತ್ತು ಆಡಳಿತ ವ್ಯವಸ್ಥೆ ಪಾಕಿಸ್ತಾನವನ್ನು ಹೊಣೆ ಮಾಡಿದರೆ ಭಾರತದ ಮಾಧ್ಯಮಗಳು ಅದನ್ನು ಪ್ರಶ್ನಿಸದೆ ವರದಿ ಮಾಡಿದ್ದವು.

ಇಂತಹ 'ಪ್ರಶ್ನಿಸದೇ ಇರುವ ಪತ್ರಿಕೋದ್ಯಮ'ದಿಂದಾಗಿ ಪಾಕಿಸ್ತಾನ ದೊಡ್ಡ ಬೆಲೆ ತೆರಬೇಕಾಗಿದೆ. ವಿದೇಶಿ ನಿಯಮಗಳಾಗಲಿ, ಆಂತರಿಕ ಭದ್ರತೆ ಬಗೆಗಿನ ನೀತಿಯಾಗಲಿ ಸರ್ಕಾರದ ನಿಲುವುಗಳನ್ನು ದೇಶಪ್ರೇಮದ ಹೆಸರಲ್ಲಿ ಮಾಧ್ಯಮಗಳು ಪ್ರಶ್ನಿಸದಿದ್ದರೆ ಅದು ಮುಂದೊಂದು ದಿನ ದೇಶಕ್ಕೆ ಹಾನಿ ಮಾಡುತ್ತದೆ ಎಂಬ ಪಾಠವನ್ನು ಕಲಿತಿದ್ದೇವೆ. ನಮ್ಮ ಅನುಭವದಿಂದ ಭಾರತದ ಮಾಧ್ಯಮಗಳು ಪಾಠ ಕಲಿಯಲಿ ಎಂದು ಆಶಿಸುತ್ತೇವೆ.

-ನಸೀಮ್ ಝುಹ್ರಾ, ಪಾಕಿಸ್ತಾನಿ ಪತ್ರಕರ್ತೆ





'ಲಂಕೇಶ್' ಬಳಗದ ಮಿತ್ರ ಲೋಕೇಶ್ ಮೊಸಳೆ ಮತ್ತವರ ಸಹೋದರ ಗೌರೀಶ್ ಕಪನಿ ಮತ್ತೊಂದು ಪ್ರಕೃತಿ ಛಾಯಾಚಿತ್ರ ಪ್ರದರ್ಶನವನ್ನು ನಡೆಸುತ್ತಿದ್ದಾರೆ.

ಮೂಲತಃ ಹಾಸನದವರಾದ ಮೊಸಳೆ ಬೆಂಗಳೂರಿನಲ್ಲಿ ಈ ಹಿಂದೆ ಎರಡು ಪ್ರದರ್ಶನಗಳನ್ನು ನಡೆಸಿದ್ದರು. ಇವರು ತೆಗೆದ ಅದ್ಭುತ ಫೋಟೋಗಳು ಗ್ರೀಟಿಂಗ್ ಕಾರ್ಡ್‌ಗಳಾಗಿಯೂ ಸಖತ್ ಪಾಪ್ಯುಲರ್ ಆಗಿವೆ.

ಛಾಯಾಗ್ರಹಣ ಒಂದು ರೀತಿ ಧ್ಯಾನವಿದ್ದಂತೆ. ಅದರಲ್ಲೂ ವೈಲ್ಡ್ ಲೈಫ್ ಫೋಟೋಗ್ರಫಿ ಮಾಡಲಿಕ್ಕೆ ಧೈರ್ಯ, ತಾಳ್ಮೆ, ಅಳತೆಗೆ ಸಿಗದಷ್ಟು ಪರಿಶ್ರಮ ಬೇಕೇಬೇಕು. ದಟ್ಟಡವಿಯ ಮಧ್ಯೆ ಸಂಚರಿಸುವ ಆನೆ, ಹುಲಿ, ಕರಡಿಗಳ ಬೆನ್ನತ್ತಿ ಅವುಗಳ ಬೇಟೆ, ಬದುಕನ್ನು ಕೆಮರಾದಲ್ಲಿ ಸೆರೆಹಿಡಿಯುವುದಲ್ಲದೇ, ಸ್ವಚ್ಛಂದವಾಗಿ ವಿಹರಿಸುವ ಅಪರೂಪದ ಪಕ್ಷಿಗಳ ಸೂಕ್ಷ್ಮವಾದ ಚಲನವಲನಗಳ ಮೇಲೆ ನಿಗಾ ಇಟ್ಟು ಕೆಮರಾ ಕ್ಲಿಕ್ಕಿಸುವುದಿದೆಯಲ್ಲಾ.. ಎಂಥ ರೋಮಾಂಚನದ ಕಲ್ಪನೆ ಅಲ್ಲವೇ?



ಫೋಟೋಗ್ರಫಿಯ ಬಗ್ಗೆ ಅದಮ್ಯವಾದ ಸೆಳೆತವಿರುವ ಮೊಸಳೆ ಮತ್ತು ಕಪನಿ ಇಬ್ಬರೂ ವರ್ಷವಿಡೀ ಕಾಡುಮೇಡು, ಗುಡ್ಡ ಗವಿಗಳಲ್ಲಿ ತಿರುಗಿ ಮನುಷ್ಯ ಮನಸ್ಸು ಪುಲಕಿತಗೊಳ್ಳುವಂಥಾ ಫೋಟೋಗಳನ್ನು ತೆಗೆದುಕೊಂಡು ಬಂದಿದ್ದಾರೆ.

ನಿಮ್ಮೆಲ್ಲ ಜಂಜಾಟಗಳ ನಡುವೆಯೂ ಇದೇ ಡಿಸೆಂಬರ್ 12ರಿಂದ 17ರ ತನಕ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ನಡೆಯುವ ವನ್ಯ ಜೀವಿಗಳ 'ಬನದ ಬದುಕು' ಎಂಬ ಈ ಛಾಯಾಚಿತ್ರ ಪ್ರದರ್ಶನವನ್ನು ನೋಡಬನ್ನಿ, ನಿಮ್ಮ ಮಕ್ಕಳೊಂದಿಗೆ.




ಸಹಪಂಕ್ತಿ ಭೋಜನಕ್ಕೆ ಪೇಜಾವರ ಸ್ವಾಮಿ ಬರಲಿಲ್ಲ ಯಾಕೆ?



ಕಂಡಹಾಗೆ

■ ಗೌರಿ ಲಂಕೇಶ್

ಮತಾಂತರ ವಿವಾದ ಮತ್ತು ಹಿಂದೂ ಧರ್ಮ ತಂತೆ ಮತ್ತೊಮ್ಮೆ ಬರೆಯಬೇಕಾಗಿ ಬಂತಲ್ಲ ಎಂಬ ಮ ಸಣ್ಣ ಹಿಂಜರಿಕೆಯೊಂದಿಗೆ ಈ ಬಾರಿ ಬರೆಯು ನೆ. ಯಾಕೆಂದರೆ ಮೊನ್ನೆ ಡಿಸೆಂಬರ್ 6ನೇ ತಾರೀಖು ಟಕದ ಮಟ್ಟಿಗಾದರೂ ಒಂದು ಪವಾಡ ನಡೆಯ ದಾ ಎಂದು ನಾವು ಹಲವರು ಕಾದಿದ್ದೆವು. ಆದರೆ ಜಾವರ ಮಠಾಧೀಶರಾದ ವಿಶ್ವೇಶ ರು ಅದಕ್ಕೆ ಅವಕಾಶ ಕೊಡಲಿಲ್ಲ. ಈ ವಿಚಾರ ಯಾವುದಕ್ಕೆ ಸಂಬಂಧಿಸಿ ದು ಬಹುಶಃ ನಿಮಗೆ ಗೊತ್ತಿರ ದು.



ವಿಜಯ ಕರ್ನಾಟಕದಲ್ಲಿ ವಿಶ್ವೇಶ್ವರ ಮ ಮತಾಂತರ ಕುರಿತು ಒನ್ ವೇ ವಾದ'ವನ್ನು ಪ್ರಾರಂಭಿಸಿದರು. ಆದರೆ ನಡೆದ ಚಿಡ್ಡಿಗಳ ಸಂವಾದಕ್ಕೆ ಈ ದ ಹಲವಾರು ಪ್ರಗತಿಪರರು ಈ ಪತ್ರಿಕೆಯಲ್ಲಿ ಪ್ರತಿಕ್ರಿಯೆಗಳನ್ನು ದ್ದನ್ನು ನೋಡಿದ್ದೀರಿ. (ಅದು ಈ ಕೆಯಲ್ಲೂ ಮುಂದುವರೆದಿದೆ!) ದರ ಬಗ್ಗೆ ಒಂದು ದಿನ ರ್ವತೀಶ್ ಮತ್ತು ನಾನು ಆಫೀಸಿನಲ್ಲಿ ಸುತ್ತಿದ್ದಾಗ, ಇದ್ದಕ್ಕಿದ್ದಂತೆ ರ್ವತೀಶ್ "ಪೇಜಾವರ ಸ್ವಾಮಿಗಳು ದೂಗಳೆಲ್ಲ ಒಂದೂ, ದಲಿತರು ಬೌದ್ಧ ರ್ಮಕ್ಕೆ ಮತಾಂತರ ಆಗುವುದು ಬೇಡ ಎಂದೆಲ್ಲ ಟ್ಟೆ ಹಾಕುತ್ತಿದ್ದಾರೆ. ಅವರನ್ನು ನಾವು ಒಮ್ಮೆ ನೇರ ಸಾರ್ವಜನಿಕ ಪರೀಕ್ಷೆಗೆ ಒಡ್ಡಿದರೆ ಹೇಗೆ?" ಎಂದರು.

"ನಿಮ್ಮ ಮಾತಿನ ಅರ್ಥ?" ಎಂದೆ.

"ಪೇಜಾವರರು ನಿಜವಾಗಲೂ ಹಿಂದೂಗಳೆಲ್ಲ ಒಂದು ಬುದನ್ನು ದಲಿತರೊಂದಿಗೆ ಸಹ ಭೋಜನ ಸ್ವೀಕರಿಸುವ ಲಕ ಸಾಬೀತುಪಡಿಸುವಂತೆ ಸವಾಲು ಹಾಕೋಣವೇ?" ಎಂದರು.

ಅದು ಸಾಕಾಗುವುದಿಲ್ಲ, ಅದರ ಜೊತೆಗೆ ಮೂಲಭೂತ ಭಾವಣೆಗಳಾಗುವಂತೆ ಹಲವು ಇತರೆ ಅಂಶಗಳನ್ನೂ ಸಬೇಕಾಗುತ್ತದೆ" ಎಂದೆ.

ಅವುಗಳೆಂದರೆ ಒಂದು: ದಲಿತರೊಬ್ಬರ ಮನೆಗೆ ಬಂದು ಜಾವರರು ಸಹ ಪಂಕ್ತಿ ಭೋಜನ ಮಾಡಬೇಕು. ಡು: ಅದೇ ದಿನ ತಮ್ಮ ಪೇಜಾವರ ಮಠದಲ್ಲೂ , ಶೂದ್ರ ಮತ್ತು ಬ್ರಾಹ್ಮಣರ ನಡುವೆ ಸಹ ಪಂಕ್ತಿ ಜನಕ್ಕೆ ಏರ್ಪಾಡು ಮಾಡಿರಬೇಕು. ಮೂರು: ದೂಗಳೆಲ್ಲ ಒಂದೇ ಎಂಬುದು ನಿಜವಾದರೆ, ಇಲ್ಲಿ ತಾರತಮ್ಯ ಇಲ್ಲದಿದ್ದರೆ ದಲಿತ ಕುಟುಂಬದಲ್ಲಿ ರುವ ಹುಡುಗನನ್ನು ತಮ್ಮ ಉತ್ತರಾಧಿಕಾರಿ ಎಂದು ಕ ಮಾಡಬೇಕು.

ಷ್ಟನ್ನು ನಿರ್ಧರಿಸಿದ ನಾವು ಮುಂದಿನ ಹೆಜ್ಜೆಯ ಮೂ ಚರ್ಚಿಸಿದೆವು. ಪೇಜಾವರರನ್ನು ನನ್ನ ಮನೆಗೆ ನಿಸಬಹುದಿತ್ತು. ಆದರೆ ಪೇಜಾವರರು ಬರಲಿ ದುಕೊಂಡೆವು. ಆಗ ಪಾರ್ವತೀಶ್ ಜಾತಿ ವಿನಾಶ ಕೆಯ ರಾಜ್ಯಾಧ್ಯಕ್ಷ ಲಕ್ಷ್ಮಣ್ ಅವರಿಗೆ ಫೋನ್ ಈ ವಿಚಾರ ಹೇಳಿದರು. ಲಕ್ಷ್ಮಣ್ ಅವರಿಗೆ ಮ್ಮ ಕೇಳಿ ಇದೂ ಒಂದು ಪರೀಕ್ಷೆ ನಡೆದುಬಿಡಲಿ "ನಮ್ಮ ಮನೆಗೇ ಅವರನ್ನು ಕರೆಯೋಣ" ಅಂದರು. ಜಾಗ ಫಿಕ್ಸ್ ಆಯಿತು.

ಆದರೆ ಇಂತಹದ್ದೊಂದು ಮುಖ್ಯ ಘಟನೆ ಯುಬೇಕಿದ್ದ ದಿನ ಕೂಡ ಮುಖ್ಯವಲ್ಲವೇ? ಆಗ ರ್ವತೀಶ್ ಅವರು "ಡಿಸೆಂಬರ್ 6 ಆದರೆ ಹೇಗೆ? ಷ್ಟೂ ಅದು ಡಾ. ಅಂಬೇಡ್ಕರ್ ಅವರ ಪರಿನಿರ್ವಾಣ ದ್ದರಿಂದ ಅದಕ್ಕೊಂದು significance ಇರುತ್ತದೆ. ಯೇ ಅದೇ ತಾರೀಖಿಗೆ ಆಯೋಧ್ಯೆಯಲ್ಲಿದ್ದ ಬಾಬ್ರಿ ಸೀದಿಯನ್ನು ಸಂಘ ಪರಿವಾರದವರು ಕೆಡವಿ 16 ಗಳಾಗುತ್ತವೆ. ಅಂದು ಚಡ್ಡಿಗಳು ಆಚರಿಸಿದ್ದ ಕೆಯಲ್ಲಿ ಪೇಜಾವರರೂ ಭಾಗವಹಿಸಿದ್ದರು. ಈಗ ರೊಂದಿಗೆ ಸಹ ಭೋಜನ ಮಾಡುವ ಮೂಲಕ ಸಿ ತಮ್ಮ ಆ ಕೃತ್ಯಕ್ಕೆ ಪಶ್ಚಾತಾಪ ಪಟ್ಟಂತೆಯೂ ತ್ತದೆ" ಎಂದರು.

ನಮ್ಮ ಈ ಯೋಜನೆ ಲೋಹಿಯಾ ವಿಚಾರ ವೇದಿಕೆಯ ಶಿವಣ್ಣನವರಿಗೂ ಸರಿ ಎನ್ನಿಸಿ "ಒಂದು ಪತ್ರಿಕಾ ಗೋಷ್ಠಿಯನ್ನು ಕರೆಯೋಣ" ಅಂದರು. ಅದರಂತೆ ನವೆಂಬರ್ 14 ರಂದು ಬೆಂಗಳೂರಿನ ಪ್ರೆಸ್‌ಕ್ಲಬ್‌ನಲ್ಲಿ ಒಂದು ಪತ್ರಿಕಾ ಗೋಷ್ಠಿಯನ್ನು ಕರೆದು ಪೇಜಾವರರಿಗೆ ನಮ್ಮ ಮೂರು ಶರತ್ತಿನ ಆಹ್ವಾನವನ್ನು ಬಹಿರಂಗ ಗೊಳಿಸಿದೆವು, ಮತ್ತು ಆನಂತರ ಅವರಿಗೆ ಒಂದು ಆಹ್ವಾನ ಪತ್ರಿಕೆಯನ್ನು (ಶರತ್ತುಗಳೊಂದಿಗೆ) ಪೋಸ್ಟ್ ಮಾಡಿದೆವು.

ನಮ್ಮ ಆಹ್ವಾನಕ್ಕೆ ಮೀಡಿಯಾಗಳಲ್ಲಿ ಭಾರಿ ಪ್ರಚಾರವೂ ಸಿಕ್ಕಿತು. ಅಷ್ಟೇ ಅಲ್ಲ, ಮಾಧ್ಯಮದವರು ಮೊನ್ನೆ ಆರನೇ ತಾರೀಖು ಲಕ್ಷ್ಮಣ್ ಅವರ ಮನೆಗೂ ಹಾಜರಾದರು. ಲಕ್ಷ್ಮಣ್ ಅವರಂತೂ ಇದೊಂದು ಹಬ್ಬ ಎಂಬಂತೆ ತೋರಣ ಕಟ್ಟಿ, ಬಾಳೆ ಗೊನೆಗಳೊಂದಿಗೆ ತಮ್ಮ ಮನೆಗೆ ಶೃಂಗಾರ ಮಾಡಿದ್ದರು. ಭೋಜನ ತಯಾರಾಯಿತು. ಬಾಳೆ ಎಲೆ ಹಾಕಿದ್ದ ಟೇಬಲ್ ಮುಂದೆ ಒಂದು ಕುರ್ಚಿಯನ್ನು ಪೇಜಾವರರಿಗೆ ನಿಗದಿ ಪಡಿಸಿ ಕಾಯುತ್ತಾ ಕೂತರು. ಜೊತೆಗೆ ಪತ್ರಕರ್ತರೂ ಕಾದಿದ್ದರು. ಕಾದು ಕಾದು ಸುಸ್ತಾಗಿ ಕೊನೆಗೆ ಎಲ್ಲರೂ ಊಟ ಮಾಡಿದರು.

ಆದರೆ ಪೇಜಾವರರು ಮಾತ್ರ ಸಂಜೆಯಾದರೂ ಬರಲೇ ಇಲ್ಲ, ತಮ್ಮ ಪರವಾಗಿ ಯಾರೊಬ್ಬರನ್ನೂ ಕಳುಹಿಸಲಿಲ್ಲ, ಯಾಕೆ ತಾವು ಗೈರುಹಾಜರಾದೆವೆಂದು ಯಾರ ಮೂಲಕವೂ ತಿಳಿಸಲಿಲ್ಲ.

ಏನಿದರ ಅರ್ಥ?

ನೀವೆಲ್ಲಾ ಗಮನಿಸಿರುವಂತೆ ಸಂಘ ಪರಿವಾರದವರು 'ನಾವೆಲ್ಲಾ ಹಿಂದೂ-ನಾವೆಲ್ಲಾ ಒಂದು' ಎಂದು ಪದೇ ಪದೇ ಹೇಳುತ್ತಿರುತ್ತಾರೆ. ಪೇಜಾವರರೂ ಇದೇ ಗುಂಪಿಗೆ ಸೇರಿದ್ದವರು; ಇದೇ ಆಶಯಗಳನ್ನು ಪ್ರತಿಪಾದಿಸುವ ಧರ್ಮಗುರು. ಹಿಂದೂ ಧರ್ಮವೇ ಶ್ರೇಷ್ಠ, ದಲಿತರು ಈ ಧರ್ಮದಲ್ಲೇ ಉಳಿದು ತಮ್ಮ ಹಕ್ಕುಗಳಿಗಾಗಿ ಹೋರಾಡಬೇಕು ಎಂದೆಲ್ಲ ಪುಕ್ಕಟೆ ಸಲಹೆ ನೀಡುತ್ತಾರೆ ಪೇಜಾವರರು. ಆದರೆ ಈಗ ತಮ್ಮೊಂದಿಗೆ ಕೂತು ಭೋಜನ ಮಾಡಿ ಎಂದು ಕರೆದರೆ ಪೇಜಾವರರು ಗೈರುಹಾಜರಾಗುತ್ತಾರೆ.

ಯಾಕೆಂದರೆ ಢೊಂಗಿ ಮಾತುಗಳನ್ನು ಆಡುವಷ್ಟು ಸಲೀಸಾಗಿ ಅದನ್ನು ಕಾರ್ಯರೂಪಕ್ಕೆ ತರುವುದು ಸಲೀಸಲ್ಲವಲ್ಲ?!

ಮೊಟ್ಟಮೊದಲಿಗೆ ಹೇಳಬೇಕೆಂದರೆ ಪೇಜಾವರರು ಒರ್ವ ಕರ್ಮಠ ಸಿದ್ಧಾಂತದ ಪಂಗಡದ ಮಠಾಧೀಶರೇ ಹೊರತು ಅವರು ಬುದ್ಧನೂ ಅಲ್ಲ, ಬಸವಣ್ಣನೂ ಅಲ್ಲ. ಬುದ್ಧ ಮತ್ತು ಬಸವಣ್ಣನಾದರೋ ಮನುಷ್ಯರ ಆತ್ಮ ಸಾಕ್ಷಾತ್ಕಾರದ ಜೊತೆಗೆ ತಮ್ಮ ಸಮಾಜದಲ್ಲಿನ ಜಾತಿ ತಾರತಮ್ಯವನ್ನು, ನಾನಾ ತರಹದ ಶೋಷಣೆಗಳನ್ನು ನಿವಾರಿಸಲು ಹೋರಾಡಿದವರು. ಆದರೆ ಪೇಜಾವರರ ಪರಂಪರೆ ಎಂತಹದ್ದು?

ಅವರು ಮನುಷ್ಯ ಸಮಾಜವನ್ನು ಜಾತಿಗಳಾಗಿ ವಿಂಗಡಿಸಿದ ಪರಂಪರೆಗೆ ಸೇರಿರುವವರು. ಸಮಾಜದಲ್ಲಿ ಮೇಲು-ಕೀಳುಗಳೆಂಬ ಕಂಪಾರ್ಟ್‌ಮೆಂಟ್‌ಗಳನ್ನು ಸೃಷ್ಟಿಸಿ ತಾವು ಉಳಿದವರೆಲ್ಲರಿಗಿಂತಲೂ ಶ್ರೇಷ್ಠರೆಂದು ತಮ್ಮನ್ನು ತಾವೇ ಪ್ರತಿಷ್ಠಾಪಿಸಿಕೊಂಡ ಪರಂಪರೆ ಅವರದ್ದು. ಎಂದೂ ಇನ್ನೊಬ್ಬ ಮನುಷ್ಯ ಜೀವಿಯ ಅಂತರ್ಯ ಹೊಕ್ಕು ನೋಡಲಾಗದ, ಸಾಂತ್ವನ ಹೇಳಲಾರದ, ಆಧ್ಯಾತ್ಮ-ನೈತಿಕತೆಯ ಉನ್ನತ ಹಂತಕ್ಕೆ ಕರೆದೊಯ್ಯಲಾಗದ ವ್ಯವಸ್ಥೆಯ ಪ್ರತಿನಿಧಿ ಪೇಜಾವರರು.

ಹೀಗೆ ತನ್ನ ಅಂತರ್ಯದಲ್ಲೇ ಅಪಾರವಾದ ಕೊಳಕನ್ನು ತುಂಬಿಕೊಂಡಿರುವ ಬ್ರಾಹ್ಮಣ್ಯದ ಪ್ರತಿಪಾದಕರಾದ ಪೇಜಾವರರು ಸಮಾನತೆಯ ಆಶಯಗಳನ್ನು ಹೊಂದಿರುವ ನಾವೊಂದಿಷ್ಟು ಜನ ಕರೆದೆವೆಂದು ಅವರು ಹಾಜರಾಗಿ ನಮ್ಮೊಂದಿಗೆ ಕುಳಿತು ಊಟ ಮಾಡಿ ಬಿಡುತ್ತಾರಾ ಹೇಳಿ?

ನಾವು, ನೀವೂ, ಪೇಜಾವರರು ಎಲ್ಲರೂ ತಿನ್ನುವ ಅನ್ನ ಒಂದೇ ಆಗಿರಬಹುದು. ಆದರೆ ಭೂಮಿತಾಯಿ ತನ್ನೊಡಲಿನಿಂದ ಬಸಿದುಕೊಡುವ ಅನ್ನವು ಸಹ ಹಿಂದೂ ಸಮಾಜವನ್ನು ಪ್ರವೇಶಿಸಿದ ತಕ್ಷಣ ಅದು ಹೇಗೆ ಬ್ರಾಹ್ಮಣನ ಅನ್ನ, ಶೂದ್ರನ ಅನ್ನ, ದಲಿತನ ಅನ್ನವಾಗಿ ಬದಲಾಗಿಬಿಡುತ್ತದೆ ನೋಡಿ! ಪೇಜಾವರರು ಅಕಸ್ಮಾತ್ ಲಕ್ಷ್ಮಣ್‌ರ ಮನೆಗೆ ಬಂದು ಅಲ್ಲಿ ಊಟ ಮಾಡಿದ್ದರೆ ಆ ಅನ್ನವೇನು ವಿಷವಾಗಿ ಬಿಡುತ್ತಿರಲಿಲ್ಲ, ಆದರೆ ಪೇಜಾವರರಂತಹ ಮೇಲು ಜಾತಿಯವರು ನಂಬುವ, ಆಚರಿಸುವ ಪುರೋಹಿತಶಾಹಿ ಮೌಲ್ಯಗಳಿಗೆ ಒಂದು ಸಾಮಾಜಿಕ-ಧಾರ್ಮಿಕ ಪದ್ಧತಿಗೆ ಅದು ವಿಷವಾಗಿ ಬಿಡುತ್ತಿತ್ತು.

ಪೇಜಾವರರು ಸಹಪಂಕ್ತಿ ಭೋಜನಕ್ಕೆ ಬಾರದಂತೆ ಅವರನ್ನು ತಡೆದದ್ದು ಅವರು ನಂಬಿಕೊಂಡಿರುವ ಇಂತಹ ಜೀವವಿರೋಧಿ ಮೌಲ್ಯಗಳು. ಈ ಅಸಹ್ಯ ಮೌಲ್ಯಗಳು ಬರೀ ಪುರೋಹಿತರ ರಕ್ತಕ್ಕಂಟಿರುವ ಕೊಳಕಲ್ಲ, ಇವತ್ತು ಬ್ರಾಹ್ಮಣೇತರ ಇತರೆ ಮೇಲು ಜಾತಿಗಳಲ್ಲೂ ಈ ವೈರಸ್ ಮನೆಮಾಡಿರುವುದು ಒಂದು ದುರಂತ.

ಕೆಲದಶಕಗಳ ಹಿಂದೆ ದಲಿತ ಸಂಘರ್ಷ ಸಮಿತಿಯ ಪ್ರತಿರೋಧ ಚಳವಳಿ ರಭಸದಿಂದ ನಡೆಯುತ್ತಿದ್ದಾಗ ದೇವನೂರ ಮಹಾದೇವ ಅವರೂ ಇಂತದ್ದೇ ಒಂದು ಕಾರ್ಯಕ್ರಮ ಆಯೋಜಿಸಿದ್ದರು. ಅಂದು ದಲಿತರು ಕೊಡುವ ನೀರು ಕುಡಿಯಿರಿ ಎಂದು ದೇವನೂರು ಎಲ್ಲರಿಗೂ ಆಹ್ವಾನ ನೀಡಿದ್ದರು. ದುರಂತವೆಂದರೆ ಶುದ್ಧ ಮನುಷ್ಯ ಪ್ರೀತಿಯ ದಲಿತರ ಈ ಆಹ್ವಾನಕ್ಕೆ ಬ್ರಾಹ್ಮಣರಿರಲಿ, ಲಿಂಗಾಯತ, ಒಕ್ಕಲಿಗ ಸಮುದಾಯದ ಜನರೂ ಸರಿಯಾಗಿ ಸ್ಪಂದಿಸಿರಲಿಲ್ಲ. ಇದು ಎಂದೋ ಆಗಿಹೋದ ಅಥವಾ ಮರೆತುಬಿಡಬಹುದಾದ ಘಟನೆಯಲ್ಲ. ಆದೇ ರೀತಿ ಮೊನ್ನೆ ಡಿಸೆಂಬರ್ 6ರ ದಲಿತರೊಂದಿಗೆ ಸಹಭೋಜನ



ಕಾರ್ಯಕ್ರಮಕ್ಕೆ ಪೇಜಾವರರ ಚಕ್ಕರ್ ಘಟನೆಯೂ ಆಕಸ್ಮಿಕ ಎಂದು ಮರೆತು ಬಿಡಬೇಕಾದ ಸಿಂಪಲ್ ವಿಚಾರವೇನಲ್ಲ.

ದಲಿತರು ಹಿಂದೂ ಧರ್ಮ ತ್ಯಜಿಸದಂತೆ, ಬೌದ್ಧ ಧರ್ಮ ಸೇರದಂತೆ ಮೊದಮೊದಲು ಹೇಳಿಕೆ ನೀಡಿದ ಪೇಜಾವರರು ತಮ್ಮ ಮಾತಿಗೆ ಯಾರೂ ಕವಡೆ ಕಾಸಿನ ಕಿಮ್ಮತ್ತೂ ನೀಡದೆ ಗೇಲಿ ಮಾಡಿದ್ದನ್ನು ನೋಡಿ ಕೊನೆಗೆ ಬೌದ್ಧ ಧರ್ಮವೂ ಹಿಂದೂ ಧರ್ಮದ ಭಾಗವೇ ಆಗಿದೆ ಎಂದು ತಿಪ್ಪೇ ಸಾರಿಸಲು ನೋಡಿದರು.

ಇದೆಂಥ ವಿಡಂಬನೆ, ಅಸಹ್ಯದ ಹೋಲಿಕೆ!

ವೈಚಾರಿಕತೆಯಿಂದ ಕೂಡಿದ್ದ, ಎಲ್ಲಾ ಅಜ್ಞಾನ, ಢಾಂಬಿಕತೆ, ಶೋಷಣೆಗಳ ವಿರುದ್ಧ ಹುಟ್ಟಿಬಂದ ಗೌತಮ ಬುದ್ಧನ ಧರ್ಮ ಎಲ್ಲಿ?

ಅವೈಚಾರಿಕತೆ, ಅಜ್ಞಾನ, ಢಾಂಬಿಕತೆ, ತಾರತಮ್ಯ ಶೋಷಣೆಗಳೇ ತುಂಬಿ ಕೊಂಡಿರುವ ಗಬ್ಬು ನಾರುವ ಹಿಂದೂ ಧರ್ಮ ಎಲ್ಲಿ?

ಅದೆಲ್ಲ ಬಿಡಿ, ತಾವು ಯಾಕೆ ಈ ಸಹಪಂಕ್ತಿ ಭೋಜನಕ್ಕೆ ಹಾಜರಾಗಲಿಲ್ಲ ಎಂದು ಪತ್ರಕರ್ತರು ಕೇಳಿದ್ದಕ್ಕೆ ಪೇಜಾವರರು ಬೇರೆ ಬೇರೆ ರೀತಿಯ ಉತ್ತರಗಳನ್ನು ನೀಡಿದ್ದಾರೆ. ಒಮ್ಮೆ "ನಮಗೆ ಆಹ್ವಾನವೇ ಬರಲಿಲ್ಲ" ಎಂದರೆ, ಇನ್ನೊಮ್ಮೆ "ತಮ್ಮೊಂದಿಗೆ ಚರ್ಚಿಸಲು ಬನ್ನಿ ಎಂದು ಅವರನ್ನು ಕರೆದಿದ್ದೆ, ಆದರೆ ಅವರಿಂದ ಪ್ರತಿಕ್ರಿಯೆ ಬರಲಿಲ್ಲ" ಎಂದಿದ್ದಾರೆ. ಅಷ್ಟೇ ಅಲ್ಲದೆ "ಆಹ್ವಾನ ಕೊಟ್ಟವರು ತಮ್ಮ ವಿಳಾಸವನ್ನು, ಫೋನ್ ನಂಬರ್ ಅನ್ನು ಕೊಟ್ಟಿರಲಿಲ್ಲ, ಆದ್ದರಿಂದ ಅವರನ್ನು ಸಂಪರ್ಕಿಸಲಾಗಲಿಲ್ಲ" ಎಂದಿದ್ದಾರೆ. ಅವರ ಈ ಉತ್ತರಗಳಲ್ಲೇ ಹಲವಾರು ವೈರುಧ್ಯಗಳು ಅಡಗಿದ್ದು ಅವರು ಸುಳ್ಳು ಹೇಳುತ್ತಿದ್ದಾರೆಂದು ಗೊತ್ತಾಗುತ್ತದೆ. ಯಾಕೆಂದರೆ ಆಹ್ವಾನ ಪತ್ರಿಕೆ ಅವರಿಗೆ ತಲುಪಿರದಿದ್ದರೆ ಅವರು ಹೇಗೆ ನಮ್ಮನ್ನು ಚರ್ಚೆಗೆ ಕರೆಯುತ್ತಿದ್ದರು? ಆಹ್ವಾನಪತ್ರದಲ್ಲಿ ವಿಳಾಸ (ಅದನ್ನು ಕೊಟ್ಟಿದ್ದೆವು) ಇರದಿದ್ದರೆ ನಮ್ಮ ಆಫೀಸಿಗೆ ತಮ್ಮ ಮಠದಿಂದ ಒಂದು ಫೋನ್ ಕರೆ ಮಾಡಿಸಿದ್ದರೆ ಕೊಡುತ್ತಿದ್ದೆ.

ಅಂದಹಾಗೆ, ಚರ್ಚೆ ಮಾಡಲು ಉಳಿದಿರುವುದಾದರೂ ಏನು? ಹಿಂದೂಗಳೆಲ್ಲ ಒಂದು ಎಂಬುದು ನಿಜವಾದರೆ, ಅದನ್ನು ಪೇಜಾವರರು ಜವಾಗಲೂ ನಂಬಿದ್ದರೆ ಚರ್ಚೆ ಮಾಡುವ ಅಗತ್ಯವೇ ಇಲ್ಲವಲ್ಲ. ಅವರು ಲಕ್ಷ್ಮಣ್ ಅವರ ಮನೆಗೆ ಬಂದು ಸಹ ಪಂಕ್ತಿ ಭೋಜನದಲ್ಲಿ ಭಾಗವಹಿಸಬಹುದಿತ್ತು. ಅಥವಾ ಅವರು ತುಂಬಾ ಬ್ಯುಸಿ ಆಗಿದ್ದರೆ ತಮ್ಮ ಉತ್ತರಾಧಿಕಾರಿಯನ್ನಾದರೂ ಕಳುಹಿಸಬಹುದಿತ್ತು. ಅದರ ಬಗ್ಗೆ ನಾವು ತಕರಾರು ಮಾಡುತ್ತಿರಲಿಲ್ಲ. ಲಕ್ಷ್ಮಣ್ ಅವರ ಮನೆ ಗೊತ್ತಿಲ್ಲದಿದ್ದರೇನಂತೆ ತಮ್ಮ ಮಠದಲ್ಲಾದರೂ ಅಂದು ಎಲ್ಲರಿಗೂ ಸಹ ಪಂಕ್ತಿ ಭೋಜನವನ್ನು ಏರ್ಪಡಿಸಬಹುದಿತ್ತು. ಜೊತೆಗೆ ಅಂದೇ ತಮ್ಮ ಉತ್ತರಾಧಿಕಾರಿಯಾಗಿ ದಲಿತ ಹುಡುಗನೊಬ್ಬನನ್ನು ನೇಮಿಸಬಹುದಿತ್ತು. ಇದಕ್ಕೆಲ್ಲ ಲಕ್ಷ್ಮಣ್ ಅವರ ಮನೆಯ ಅಡ್ರೆಸ್ ಬೇಕಿಲ್ಲವಲ್ಲ?

ಪೇಜಾವರರು ಇದನ್ನೆಲ್ಲ ಮಾಡಲಿಲ್ಲ ಯಾಕೆ?

ಯಾಕೆಂದರೆ ಹಿಂದೂಗಳೆಲ್ಲ ಒಂದಲ್ಲ. ಹಿಂದೂ ಧರ್ಮದಲ್ಲಿನ ಮನು ಶಾಸ್ತ್ರದ ಪ್ರಕಾರ ದಲಿತರೆಂದೂ ಸ್ಪೃಶ್ಯರಲ್ಲ, ಶೂದ್ರರು ಬ್ರಾಹ್ಮಣರಿಗೆ ಸಮಾನರಲ್ಲ.

ಆದರೂ ಪೇಜಾವರರು ಸೇರಿದಂತೆ ಸಂಘ ಪರಿವಾರದವರು ಶೂದ್ರರನ್ನು ಮತ್ತು ದಲಿತರನ್ನು ಮೋಸಗೊಳಿಸಲು 'ನಾವೆಲ್ಲ ಹಿಂದೂ, ನಾವೆಲ್ಲ ಒಂದೂ' ಎಂದು ಬೊಬ್ಬೆ ಇಡುತ್ತಿರುತ್ತಾರೆ. ಅದನ್ನೇ ವೋಟ್ ಬ್ಯಾಂಕ್ ಮಾಡಿಕೊಂಡು ತಮ್ಮ ಅಂಗ ಸಂಘವಾದ ಬಿಜೆಪಿಗೆ ರಾಜ್ಯಾಧಿಕಾರ ಸಿಗುವಂತೆ ನೋಡಿಕೊಳ್ಳುತ್ತಾರೆ. ಆ ಮೂಲಕ ಸಮಾಜದಲ್ಲಿ ಮೇಲು ಜಾತಿಯ ಆಳ್ವಿಕೆಯನ್ನು ಸ್ಥಾಪಿಸಲು ಹವಣಿಸುತ್ತಾರೆ.

ಇದಲ್ಲ ಹಿಂದೂತ್ವವಾದಿಗಳ ಕುತಂತ್ರ. ಇದು ಪೇಜಾವರರಿಗೆ ಚೆನ್ನಾಗಿಯೇ ಗೊತ್ತು. ಆದರೆ ಕರ್ನಾಟಕದ ಜನ ದಡ್ಡರಲ್ಲ.

ಇನ್ನು ಮುಂದೆಯಾದರೂ ಪೇಜಾವರರು "ದಲಿತರೇ, ಬೌದ್ಧಧರ್ಮಕ್ಕೆ ಮತಾಂತರಗೊಳ್ಳಬೇಡಿ" ಎಂದು ಪುಕ್ಕಟೆ ಸಲಹೆ ಕೊಡುವುದನ್ನು, "ಹಿಂದೂಗಳೆಲ್ಲ ಒಂದು" ಎಂದು ಸುಳ್ಳು ಹೇಳುವುದನ್ನು ನಿಲ್ಲಿಸಿದರೆ ಅವರಿಗೂ, ನಮ್ಮ ಸಮಾಜಕ್ಕೂ, ಭಾರತಕ್ಕೂ ಒಳಿತು.... ■

ಮದ್ದೂರು ಉಪಚುನಾವಣೆ

ಕಲ್ಪನಾ ಸಿದ್ದರಾಜು ಗೆಲ್ಲುವ ಕುದುರೆ!



ಕಲ್ಪನಾ ಸಿದ್ಧರಾಜು

ಮದ್ದೂರಿನ ಎಮ್ಮೆಲ್ಲೆ ಎಂ.ಎಸ್.ಸಿದ್ದರಾಜು ಅವರ ಅಕಾಲಿಕ ಮರಣದಿಂದ ತೆರವಾದ ಎಮ್ಮೆಲ್ಲೆ ಸ್ಥಾನಕ್ಕೆ ಇದೇ ತಿಂಗಳು ಉಪಚುನಾವಣೆ ನಿಗದಿಯಾಗಿದೆ. ಈಗಾಗಲೇ ಚುನಾವಣೆಯ ಬಿಸಿ ಏರತೊಡಗಿದ್ದು ಬಿಜೆಪಿ ಮತ್ತು ಜೆಡಿಎಸ್‌ಗಳು ತಮ್ಮ ತಮ್ಮ ಅಭ್ಯರ್ಥಿಗಳನ್ನು ಪ್ರಕಟಿಸಿ ಪ್ರಚಾರಕ್ಕಿಳಿದಿವೆ. ದಿವಂಗತ ಸಿದ್ಧರಾಜು ಅವರ ಪತ್ನಿ ಕಲ್ಪನಾ ಸಿದ್ಧರಾಜು ಜೆಡಿಎಸ್‌ನಿಂದ ಕಣಕ್ಕಿಳಿದಿದ್ದರೆ, ಕಾಂಗ್ರೆಸ್‌ನಲ್ಲಿದ್ದರೆ ಟಿಕೆಟ್ ಸಿಗುವುದಿಲ್ಲವೆಂಬುದು ಖಚಿತವಾಗುತ್ತಿದ್ದಂತೆಯೇ ಬಿಜೆಪಿಗೆ ಹಾರಿದ ಡಿ.ಸಿ.ತಮ್ಮಣ್ಣ ಬಿಜೆಪಿಯ ಅಧಿಕೃತ ಅಭ್ಯರ್ಥಿಯಾಗಿದ್ದಾರೆ. ಇನ್ನು ಕಾಂಗ್ರೆಸ್ ತನ್ನ ಅಭ್ಯರ್ಥಿ ಆಯ್ಕೆಯಲ್ಲಿ ಹಿಂದು ಮುಂದು ನೋಡಿ, ತಾಳೆ ಹಾಕಿ ಕೊನೆಗೆ ಎಸ್ಸೆಂ ಕೃಷ್ಣ ಅವರ ಸಹೋದರರ ಪುತ್ರ ಹಾಗೂ ಮಾಜಿ ಜಿ.ಪಂ. ಅಧ್ಯಕ್ಷ ಗುರುಚರಣರೇ ತನ್ನ ಅಭ್ಯರ್ಥಿ ಎಂದು ಘೋಷಿಸಿದೆ.

ಮದ್ದೂರು ಹೇಳಿಕೇಳಿ ಒಕ್ಕಲಿಗರ ಪ್ರಾಬಲ್ಯವಿರುವ ಕ್ಷೇತ್ರ. ಎಸ್ಸೆಂ ಕೃಷ್ಣ ಮತ್ತು ವೀರಣ್ಣಗೌಡರು ರಾಜಕೀಯ ಉನ್ನತಿಗೇರಲು ಅನುವು ಮಾಡಿಕೊಟ್ಟ ಕ್ಷೇತ್ರ. ಕೈತಪ್ಪಿ ಹೋಗಿರುವ ಈ ಕ್ಷೇತ್ರವನ್ನು ಮರಳಿ ಪಡೆಯಲು ಕಾಂಗ್ರೆಸ್ ಪ್ರಯತ್ನಿಸುತ್ತಿರುವುದು, ಕೈಗೆ ಬಂದ ಕ್ಷೇತ್ರವನ್ನು ಉಳಿಸಿಕೊಳ್ಳಲು ಜೆಡಿಎಸ್ ಪಣ ತೊಟ್ಟಿರುವುದು ಹಾಗೂ ಈ ಎರಡೂ ಪಕ್ಷಗಳ ನಡುವೆ ನುಸುಳಿ ಕ್ಷೇತ್ರವನ್ನು ತನ್ನ ಕೈವಶ ಮಾಡಿಕೊಳ್ಳಲು ಬಿಜೆಪಿ ಸೆಣಸುತ್ತಿರುವುದು – ಇವೆಲ್ಲಾ ಮದ್ದೂರು ಉಪಚುನಾವಣೆ ಮತ್ತಷ್ಟು ರಂಗೇರಲು ಕಾರಣವಾಗಿವೆ. ಎಲ್ಲರಿಗೂ ಇದು ಪ್ರತಿಷ್ಠೆಯ ಕಣವಾಗಿದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಭಾರಿ ಅಂತರದಲ್ಲಿ ಗೆದ್ದಿದ್ದ ಜೆಡಿಎಸ್‌ನ ಸಿದ್ಧರಾಜು ಕೊಳೆತು ನಾರುತ್ತಿರುವ ರಾಜಕಾರಣದಲ್ಲೂ ಒಂದಿಷ್ಟು ಒಳ್ಳೆಯ ಹೆಸರು ಮಾಡಿದ್ದರು. ಈತನಿಗೆ ಈ ಹೆಸರು ಸುಖಾಸುಮ್ಮನೇ ಬಂದಿದ್ದಲ್ಲ, ಸರಳ ಮತ್ತು ಸಜ್ಜನಿಕೆಯ ಜೀವನದಿಂದ ಕ್ಷೇತ್ರದ ಪ್ರತೀ ಹಳ್ಳಿಯಲ್ಲೂ ರೈತರೊಂದಿಗೆ ಉತ್ತಮ ಸಂಬಂಧ ಬೆಳೆಸಿಕೊಂಡಿದ್ದರು. ಎಸ್ಸೆಂ ಕೃಷ್ಣ ಚುನಾವಣೆಗಳಲ್ಲಿ ಗೆಲ್ಲಲು ಸಿದ್ಧರಾಜು ಅವರ ಯೋಗದಾನ ಬಹಳಷ್ಟಿತ್ತು. ಆದರೆ, ಚಿಕ್ಕಪುಟ್ಟ ಕಾರಣಗಳಿಂದಾಗಿ ಕಾಂಗ್ರೆಸ್‌ನಿಂದ ಹೊರಬಂದು ಸ್ವಾಭಿಮಾನಿ ಪಡೆಕಟ್ಟಿ ಮದ್ದೂರು ಪುರಸಭೆಯನ್ನು ತಮ್ಮ ಕೈವಶ ಮಾಡಿಕೊಳ್ಳುವ ಮೂಲಕ ಕಾಂಗ್ರೆಸ್‌ಗೆ ಮೊದಲ ಪೆಟ್ಟು ಕೊಟ್ಟರು.


ಗುರುಚರಣ್


ಮಧು

2004ರ ಚುನಾವಣೆಯಲ್ಲಿಯೇ ಸಿದ್ಧರಾಜು ಎಮ್ಮೆಲ್ಲೆಯಾಗಬೇಕಿತ್ತು. ಆದರೆ, ದೇವೇಗೌಡರ ಕೆಟ್ಟ ರಾಜಕಾರಣ ಅವರನ್ನು ಈ ಅವಕಾಶದಿಂದ ವಂಚಿಸಿತ್ತು. ಗೌಡರು ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ತಮ್ಮ ಬೀಗ ಡಿ.ಸಿ.ತಮ್ಮಣ್ಣರನ್ನು ಗೆಲ್ಲಿಸುವುದಕ್ಕಾಗಿ ವಿವೇಕಾನಂದ ಮತ್ತು ಸಿದ್ದರಾಜು ಇಬ್ಬರಿಗೂ ಬಿ ಫಾರ್ಮ್ ನೀಡಿ ಸಿದ್ದರಾಜು ಅವರನ್ನು ಅತಂತ್ರ ಮಾಡಿದ್ದರು. ಆನಂತರ ಜೆಡಿಎಸ್ ತೊರೆದು ಸಮಾಜವಾದಿ ಸೇರಿ, ಅಲ್ಲಿಂದ ಮತ್ತೆ ಜೆಡಿಎಸ್‌ಗೆ ಬಂದು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಎಮ್ಮೆಲ್ಲೆಯಾದರು. ಆದರೆ....

ಜಿಲ್ಲೆಯ ರೈತ, ದಲಿತ ಮತ್ತಿತರ ಪ್ರಗತಿಪರ ಹೋರಾಟಗಳಲ್ಲಿ ಪ್ರಾಮಾಣಿಕವಾಗಿ ಭಾಗವಹಿಸುತ್ತಲೇ ಜನಮನ್ನಣೆ ಪಡೆದಿದ್ದ ಸಿದ್ದರಾಜು ಅಧಿಕಾರ ಸಿಕ್ಕ ಮೇಲೂ ಕಂಡಕಂಡಲ್ಲಿ ತಿಂದು ಮೈಕೈ ಹೊಲಸು ಮಾಡಿಕೊಂಡಿರಲಿಲ್ಲ. ಉತ್ತಮ ಮತ್ತು ಪ್ರಾಮಾಣಿಕ ರಾಜಕಾರಣಿ ಎನ್ನಿಸಿಕೊಳ್ಳುತ್ತಲೇ ಹಲವು ದುಶ್ಚಟಗಳಿಗೆ ಬಲಿಯಾದ ಅವರು ಗೆದ್ದು ನೂರು ದಿನ ತುಂಬುವುದರೊಳಗಾಗಿ ಅಕಾಲಿಕವಾಗಿ ಅಸುನೀಗಿದರು. ಹೀಗಾಗಿ ಸಹಜವಾಗಿ ಅವರ ಪತ್ನಿ ಕಲ್ಪನಾ ಸಿದ್ದರಾಜು ಪರ ಸಿದ್ಧರಾಜು ಸಾವಿನ ಅನುಕಂಪದ ಅಲೆ ಬೀಸುತ್ತಿದೆ. ಜೆಡಿಎಸ್ ಕಾರ್ಯಕರ್ತರೂ ಕೂಡ ಈಗ ಇದನ್ನೇ ಬಂಡವಾಳ ಮಾಡಿಕೊಂಡು ಮನೆ ಮನೆ ತಿರುಗುತ್ತಿದ್ದಾರೆ.

ತಮ್ಮಣ್ಣನಿಗೆ ತಮ್ಮವರೇ ಅಡ್ಡಗಾಲು

ಇನ್ನೊಂದೆಡೆಗೆ 2004ರಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ದೇವೇಗೌಡರ ಕೃಪಾಕಟಾಕ್ಷದಿಂದ ಎಮ್ಮೆಲ್ಲೆಯಾಗಿದ್ದ ಡಿ.ಸಿ.ತಮ್ಮಣ್ಣ ಮಾಡಿಕೊಂಡಿದ್ದ ಆಸ್ತಿಯನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಎಮ್ಮೆಲ್ಲೆ ಆಗಿಯೇ ತೀರಬೇಕೆಂಬ ಹಟಕ್ಕೆ ಬಿದ್ದು ಬಿಜೆಪಿ ಸೇರಿದ್ದಾರೆ. ಒಂದೆಡೆ ಕೆಐಡಿಬಿಎನಲ್ಲಿ ಮಾಡಿಕೊಂಡ ಹಣ, ಇನ್ನೊಂದೆಡೆ ಗಣಿ ಹಣ ಹಂಚಿ ಗೆಲ್ಲುತ್ತೇನೆಂಬ ಉಮೇದು ತಮ್ಮಣ್ಣನಿಗಿದೆ. ಆದರೆ, ಅದು ಅಷ್ಟು ಸುಲಭವಾದ ಮಾತಲ್ಲ. ಏಕೆಂದರೆ, ಮೊದಲನೆಯದಾಗಿ ಮದ್ದೂರಿನಲ್ಲಿ ಬಿಜೆಪಿಗೆ ಪಾರಂಪರಿಕವಾಗಿ ನೆಲೆಯೇ ಇಲ್ಲ, ಎರಡನೆಯದಾಗಿ 2004ರಲ್ಲಿ ದೇವೇಗೌಡರು ಮತ್ತು ತಮ್ಮಣ್ಣ ಸಿದ್ಧರಾಜುಗೆ ಮಾಡಿದ ದ್ರೋಹ ಜನರಿಗೆ ಇನ್ನೂ ಹಸಿಹಸಿಯಾಗಿ ನೆನಪಿದೆ. ಮೂರನೆಯದಾಗಿ, ರಾಜ್ಯ ಮಟ್ಟದಲ್ಲಿ ಯಡ್ಡಿಗೂ ರೆಡ್ಡಿಗೂ ಸಂಬಂಧ ತುಸು ಹಳಸಿಕೊಂಡಿದ್ದು ರೆಡ್ಡಿಗಳಿಗೆ ಎಮ್ಮೆಲ್ಲೆಗಳನ್ನು ಕೊಂಡುಕೊಳ್ಳುವಾಗಿದ್ದ ಆಸಕ್ತ ಉಪಚುನಾವಣೆ ಎದುರಿಸುವಲ್ಲಿ ಇಲ್ಲ, ಹಾಗಾಗಿ, ಗಣಿರೆಡ್ಡಿಗಳ ದುಡ್ಡು ಈ ಉಪಚುನಾವಣೆಯಲ್ಲಿ ಹರಿಯುವುದಿಲ್ಲ, ನಾಲ್ಕನೆಯದಾಗಿ, ಮಾಜಿ ಸಂಸದ ಜಿ.ಮಾದೇಗೌಡರ ಪುತ್ರರತ್ನ ಜಿ.ಮಧು ಕೂಡ ಮದ್ದೂರು ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ. ಆದರೆ, ಬಿಜೆಪಿ ನಾಯಕರು ಮಾದೇಗೌಡ ಮತ್ತು ತಮ್ಮಣ್ಣರ ನಡುವೆ ಮಾತುಕತೆ ಮಾಡಿಸಿ ಮಧುಗೆ ಎಂಎಲ್‌ಸಿ ಮಾಡುವುದಾಗಿ ಭರವಸೆ ಕೊಟ್ಟು ತೃಪ್ತಿಪಡಿಸಿದ್ದರು. ಆದರೆ, ಈ ಹಿಂದೆ ತಮ್ಮಣ್ಣ ಮಧು ಬೆಂಬಲಿಗರ ಮೇಲೆ ಮಾಡಿದ ದೌರ್ಜನ್ಯವನ್ನು ಅವರ್‍ಯಾರೂ ಮರೆತಿಲ್ಲ, ಅದೂ ಅಲ್ಲದೇ ತಮ್ಮಣ್ಣನೇನಾದರೂ ಗೆದ್ದರೆ ಆತನಿಗೆ ಮಂತ್ರಿಪದವಿ ಕೊಡಲಾಗುತ್ತದೆ ಎಂದು ಹೇಳಲಾಗಿದೆ. ಹಾಗೇನಾದರೂ ಆದರೆ, ಮದ್ದೂರಿನಲ್ಲಿ ಮಾದೇಗೌಡ ಮತ್ತವರ ಪುತ್ರರತ್ನರ ರಾಜಕೀಯ ಕೊನೆಗೊಂಡಂತೆಯೇ ಎಂಬ ಆತಂಕವೂ ಇದೆ. ಹಾಗಾಗಿ ಅವರೆಲ್ಲರೂ ಈ ಉಪಚುನಾವಣೆಯಲ್ಲಿ ತಮ್ಮಣ್ಣನ ವಿರುದ್ಧ ಕೆಲಸ ಮಾಡಲಿದ್ದಾರೆ. ಈ ಸತ್ಯಗಳು ಗೊತ್ತಿರುವ ಬಿಜೆಪಿ ಕಾರ್ಯಕರ್ತರೇ ತಮ್ಮಣ್ಣ ಗೆಲ್ಲುವುದು ಕಷ್ಟ ಎಂದು ಮಾತನಾಡಿಕೊಳ್ಳುತ್ತಿದ್ದಾರೆ.

▶▶▶

ಸೂತಕದ ಮನೆಯಲ್ಲಿ ಮಂತ್ರಿಗಿರಿ ಆಮಿಷ


ಇನ್ನೊಂದೆಡೆಗೆ ಆಪರೇಷನ್ ಕ'ಮಲ'ದ ಮೂಲಕ ರಾಜಕಾರಣಿಗಳನ್ನು ಕೊಂಡುಕೊಳ್ಳುವ ಕೆಟ್ಟ ಪರಂಪರೆಗೆ ಬಿಜೆಪಿ ನಾಂದಿ ಹಾಡಿರುವುದು ಸಹಜವಾಗಿ ಜನರಲ್ಲಿ ಬಿಜೆಪಿಯ ಗಣಿ ರಾಜಕಾರಣದ ಬಗ್ಗೆ ತೀವ್ರ ಸಿಟ್ಟು ಹುಟ್ಟಿಸಿದೆ. ದುಡ್ಡಿಗಾಗಿ, ಅಧಿಕಾರಕ್ಕಾಗಿ ತಮಗೆ ಮತಕೊಟ್ಟ ಜನರನ್ನೂ ಧಿಕ್ಕರಿಸಿ ಬಿಜೆಪಿಯ ಮಲದಲ್ಲಿ ಬೀಳುತ್ತಿರುವ ರಾಜಕಾರಣಿಗಳ ಬಗ್ಗೆಯೂ ಜನರಲ್ಲಿ ದಟ್ಟವಾದ ಹೇವರಿಕೆ ಬೆಳೆದಿದೆ. ಅದು ಈ ಉಪಚುನಾವಣೆಯ ಮೇಲೂ ಖಂಡಿತ ಪ್ರಭಾವ ಬೀರುತ್ತದೆ.


ಸಿದ್ಧರಾಜು

ಮದ್ದೂರಿನಲ್ಲಿ ಸಿದ್ಧರಾಜು ಸಾವಿನ ಅನುಕಂಪದಲ್ಲಿ ಹೇಗೆ ಬೀಸುತ್ತಿದೆ ಎಂಬುದು ಬಿಜೆಪಿಗೂ ಚೆನ್ನಾಗಿ ಗೊತ್ತಿದೆ. ಆ ಕಾರಣಕ್ಕಾಗಿಯೇ ಇದೇ ಆಪರೇಷನ್ ಕ'ಮಲ'ದಲ್ಲಿ ಕಲ್ಪನಾ ಸಿದ್ಧರಾಜು ಅವರನ್ನೂ ಕೆಡವಲು ಬಿಜೆಪಿ ತಂತ್ರ ರೂಪಿಸಿತ್ತು, ಸಿದ್ಧರಾಜು ನಿಧನದ ನಂತರ ಸಾಂತ್ವನ ಹೇಳುವ ನೆಪದಲ್ಲಿ ಅವರ ಮನೆಗೆ ಬಂದ ಸಾರಿಗೆ ಸಚಿವ ಆರ್.ಅಶೋಕ್ ಕಲ್ಪನಾ ಸಿದ್ಧರಾಜು ಅವರನ್ನು ಭೇಟಿಯಾಗಿ 'ಮುಂದಿನ ಉಪಚುನಾವಣೆಯಲ್ಲಿ ನೀವು ಬಿಜೆಪಿಯಿಂದ ಸ್ಪರ್ಧಿಸಿ ಗೆದ್ದುಬಂದರೆ ನಿಮ್ಮನ್ನು ಮಂತ್ರಿ ಮಾಡುತ್ತೇವೆ, ದುಡ್ಡೂ ಕೊಡುತ್ತೇವೆ' ಎಂದು ಆಮಿಷ ಒಡ್ಡಿ ಬಂದಿದ್ದ. ಆದರೆ, ಜನಪರ ಚಳವಳಿಗಳಲ್ಲಿ ಮೊದಲಿನಿಂದಲೂ ಗುರ್ತಿಸಿಕೊಂಡು ಬಂದಿದ್ದ ಸಿದ್ಧರಾಜುಗೆ ಬಿಜೆಪಿಯ ಬಗ್ಗೆ ಹೇವರಿಕೆ ಇದ್ದೇ ಇತ್ತು. ಅದರಲ್ಲೂ ವಿಶೇಷವಾಗಿ ಇತ್ತೀಚೆಗೆ ಗಣಿ ದುಡ್ಡಿನಿಂದ ಎಮ್ಮೆಲ್ಲೆಗಳನ್ನು ತರಕಾರಿ ಖರೀದಿಸುವಂತೆ ಖರೀದಿಸುತ್ತಿದ್ದುದೂ ಅವರ ಬಿಜೆಪಿ ವಿರೋಧಿ ನಿಲುವನ್ನು ಮತ್ತಷ್ಟು ಗಟ್ಟಿಗೊಳಿಸಿತ್ತು, ಇದೆಲ್ಲದರ ಪ್ರಭಾವ ಸಹಜವಾಗಿ ಪತ್ನಿ ಕಲ್ಪನಾ ಮೇಲೂ ಇತ್ತು. ಈ ಕಾರಣಕ್ಕಾಗಿಯೇ ಆರ್.ಅಶೋಕ್ ನೀಡಿದ ಆಫರ್ ಅನ್ನು ಕಲ್ಪನಾ ಸಾರಾಸಗಟಾಗಿ ತಿರಸ್ಕರಿಸಿದ್ದರು. ಆ ಮೂಲಕ ಬಿಜೆಪಿಯ ಮಾನಗೇಡಿ ಮುಖಕ್ಕೆ ಮಂಗಳಾರತಿ ಎತ್ತಿ ಕಳಿಸಿದ್ದರು.

ಈ ಚುನಾವಣೆಯಲ್ಲಿ ಜೆಡಿಎಸ್ ಕಾರ್ಯಕರ್ತರು ಇದನ್ನೂ ಒಂದು ಅಸ್ತ್ರವಾಗಿ ತಮ್ಮಣ್ಣನ ಕಡೆ ಎಸೆಯಲಿದ್ದಾರೆ.


ಮಗನ ಎಮ್ಮೆಲ್ಲೆಗಿರಿಗಾಗಿ ಎಲ್ಲವೂ ಬಲಿ



ಇದು ಮಾಜಿ ಸಂಸದ ಜಿ. ಮಾದೇಗೌಡರ ಅವಕಾಶವಾದಿ ರಾಜಕಾರಣವಲ್ಲದೇ ಮತ್ತೇನಲ್ಲ. ಅವರು ಕಾಂಗ್ರೆಸ್‌ನಿಂದ ಎಂಪಿಯಾಗಿದ್ದಾಗ, ಗಾಂಧೀವಾದಿ ಎಂಬ ಇಮೇಜಿನೊಂದಿಗೆ ಜನಪರ ಚಳವಳಿಗಳಲ್ಲಿ ಭಾಗವಹಿಸುತ್ತಿದ್ದಾಗ, ಇನ್ನಿತರ ರಾಜಕಾರಣಿಗಳಂತೆ ಮೈಕೈ ಹೊಲಸು ಮಾಡಿಕೊಂಡಿರದಿದ್ದಾಗ ಅವರು ಒಬ್ಬ ಉತ್ತಮ ರಾಜಕಾರಣಿ ಎಂಬ ಭಾವನೆ ಜನರಲ್ಲಿತ್ತು, ಅದೀಗ ಮಣ್ಣುಪಾಲಾಗಿ ಹೋಗಿದೆ. ವಯಸ್ಸಾದಂತೆ ಅವರಲ್ಲಿ ಸುಪ್ತವಾಗಿ ಅಡಗಿದ್ದ ಅವಕಾಶವಾದಿ ರಾಜಕಾರಣವೂ ನಗ್ನವಾಗಿ ಕಾಣಿಸತೊಡಗಿದೆ. ಗಾಂಧೀವಾದಿಯಂತೆ ಪೋಜು ಕೊಟ್ಟಿದ್ದ ಮಾದೇಗೌಡರು ಗಾಂಧೀಯನ್ನೇ ಕೊಂದ ಬಿಜೆಪಿಯಂಥ ಕೋಮುವಾದಿ ಪಕ್ಷದ ತೆಕ್ಕೆಗೆ ಬೀಳುತ್ತಾರೆಂದು ಯಾರೂ ಎಣಿಸಿರಲಿಲ್ಲ, ಆದರೆ, ಅದು ನಿಜವಾಗಿ ಹೋಗಿದೆ. ತಾವು ಮುದುಕರಾಗುತ್ತಿದ್ದಂತೆ ಪುತ್ರರತ್ನ ಮಧುವನ್ನು ರಾಜಕೀಯಕ್ಕೆ ತರಬೇಕೆಂದು ಹಂಬಲಿಸಿದ್ದ ಅವರು ಅದು ಕಾಂಗ್ರೆಸ್‌ನಲ್ಲಿ ಸಾಧ್ಯವಿಲ್ಲ ಎಂಬಂತಾದಾಗ ಬಿಜೆಪಿಯ ತೆಕ್ಕೆಗೆ ಬಿದ್ದಿದ್ದಾರೆ.

ಎಷ್ಟರಮಟ್ಟಿಗೆ ಎಂದರೆ ಮಗನನ್ನು ಎಮ್ಮೆಲ್ಲೆ ಮಾಡುವುದಕ್ಕಾಗಿ ಇಡೀ ಕಾವೇರಿ ಚಳವಳಿಯನ್ನೇ ಬಲಿಕೊಟ್ಟು ಕಿರುಗಾವಲು ಕ್ಷೇತ್ರಕ್ಕೆ ಬಿಜೆಪಿಯಿಂದ ಮಗ ಮಧುಗೆ ಟಿಕೆಟ್ ಕೊಡಿಸಿದ್ದರು. ಆದರೆ, ಕಿರುಗಾವಲಿನಲ್ಲಿ ಮಧುಗೆ ಮಣ್ಣು ತಿನ್ನಿಸುವ ಮೂಲಕ ಜನ ಮಾದೇಗೌಡರು ಎಣಿಸುವಷ್ಟು ಮೂರ್ಖರಲ್ಲ ಎಂಬುದನ್ನು ತೋರಿಸಿಕೊಟ್ಟರು. ಅದು ವಾಸ್ತವದಲ್ಲಿ ಮುಳುಗುತ್ತಿರುವ ಮಾದೇಗೌಡರ ವರ್ಚಸ್ಸಿಗೆ ಹಿಡಿದ ಕನ್ನಡಿಯಂತಿತ್ತು.

ಬೀಗರ ಜಿದ್ದಾಜಿದ್ದಿ



ದೇವೇಗೌಡ ಮತ್ತು ಡಿ.ಸಿ.ತಮ್ಮಣ್ಣ ಇಬ್ಬರೂ ಬೀಗರು. ರಾಜಕೀಯದಲ್ಲಿ ಬೇರೆ ಬೇರೆ ಪಕ್ಷದಲ್ಲಿದ್ದರೂ ತಮ್ಮಣ್ಣನಿಗೆ ಎಸ್ಸೆಂ ಕೃಷ್ಣ ಮೂಲಕ ಕಿರುಗಾವಲಿನ ಕಾಂಗ್ರೆಸ್ ಟಿಕೆಟ್ ಕೊಡಿಸಿದ್ದು ಇದೇ ದೇವೇಗೌಡ. ಅದಕ್ಕೆ ಕಾರಣವೂ ಇದೆ. ಜನತಾದಳದ ಕೆ.ಎನ್.ನಾಗೇಗೌಡನನ್ನು ರಾಜಕೀಯವಾಗಿ ತುಳಿಯುವುದು ಮತ್ತು ಬೀಗ ತಮ್ಮಣ್ಣನನ್ನು ಮೇಲೆತ್ತುವುದು. ಒಂದೇ ಕಲ್ಲಿಗೆ ಎರಡು ಹಕ್ಕಿಗಳನ್ನು ಹೊಡೆಯುವ ತಂತ್ರ!

ಈಗ ಈ ಬೀಗರ ಸಂಬಂಧ ಹಳಸಿಕೊಂಡಿದೆ. ಮೊನ್ನೆ ಮದ್ದೂರಿನ ಸಮಾವೇಶದಲ್ಲಿ ಮಾಜಿ ಸಿಎಂ ಕುಮಾರಸ್ವಾಮಿ ತಮ್ಮಣ್ಣನನ್ನು ನಮ್ಮ ಸಂಬಂಧಿಕರು ಎಂದು ಬಿಂಬಿಸಬೇಡಿ ಎಂದು ಕಿಡಿಕಾರಿದ್ದಾರೆ. ಅದಕ್ಕೆ ತಿರುಗೇಟು ಕೊಟ್ಟಿರುವ ತಮ್ಮಣ್ಣ ದೇವೇಗೌಡ ಮುಖ್ಯಮಂತ್ರಿಯಾಗುವುದಕ್ಕೆ, ಪ್ರಧಾನಮಂತ್ರಿಯಾಗುವುದಕ್ಕೆ ಸಂಬಂಧ ಬೇಕಿತ್ತು, ಇದೇ ತಮ್ಮಣ್ಣನ ಬೆಂಬಲ ಬೇಕಿತ್ತು, ಈಗ ಬೇಡವಾಗಿದೆ ಎಂದು ಖಾರವಾಗಿ ಪ್ರತಿಕ್ರಿಯಿಸಿದ್ದಾರೆ. ಅಲ್ಲದೇ ನಾವು ದರಿದ್ರರಲ್ಲ, ದೇವೇಗೌಡರಂತೆ ಭಿಕಾರಿಯಲ್ಲ, ವಚನಭ್ರಷ್ಟರಂತೂ ಅಲ್ಲವೇ ಅಲ್ಲ ಎನ್ನುತ್ತಾ ಕೊನೆಗೆ ಕುಮಾರಸ್ವಾಮಿಯ ಖಾಸಗಿ ವಿಚಾರಕ್ಕೂ ಎಂಟ್ರಿಯಾದ ತಮ್ಮಣ್ಣ ಕಸ್ತೂರಿ ಚಾನೆಲ್ ಶುರು ಮಾಡಲು 200 ಕೋಟಿ ಎಲ್ಲಿಂದ ಬಂತು ಎಂದೆಲ್ಲಾ ಹರಿಹಾಯ್ದಿದ್ದಾರೆ. ಅಂತೂ ಮದ್ದೂರಿನ ಚುನಾವಣಾ ಅಖಾಡದಲ್ಲಿ ಈ ಬೀಗರಿಬ್ಬರ ಜಗಳ ಜನರಿಗೆ ರಂಜನೆ ನೀಡುತ್ತಿರುವುದಂತೂ ಸತ್ಯ.

▶▶▶

ಕಾಂಗ್ರೆಸ್-ಜೆಡಿಎಸ್ ರಹಸ್ಯ ಮೈತ್ರಿ!

ಹೈಟೆಕ್ ಕರ್ನಾಟಕ, ಸಿಲಿಕಾನ್ ಸಿಟಿ ಅಂತೆಲ್ಲಾ ರಂಗುರಂಗಿನ ಮಾತನಾಡಿದ್ದ ಎಸ್ಸೆಂ ಕೃಷ್ಣರ ಕಾಂಗ್ರೆಸ್ ಮದ್ದೂರಿನಲ್ಲಿ ಮಣ್ಣುಮುಕ್ಕುವ ಕಡೆಗೆ ಹೊರಟಿದೆ. ಹಲವಾರು ತುಂಡುಗಳಾಗಿ ಒಡೆದಿರುವ ಮದ್ದೂರು ಕಾಂಗ್ರೆಸ್ ಸದ್ಯಕ್ಕೆ ಚೇತರಿಸಿಕೊಳ್ಳುವ ಪರಿಸ್ಥಿತಿ ಕಾಣುತ್ತಿಲ್ಲ. 2004ರ ಚುನಾವಣೆಯಲ್ಲಿ ಕಾಂಗ್ರೆಸ್‌ನ ತಮ್ಮಣ್ಣ ಗೆಲ್ಲುವುದಕ್ಕೆ ಎರಡು ಕಾರಣಗಳಿದ್ದವು. ಒಂದು, ಬೀಗ ದೇವೇಗೌಡರ ಕೃಪಾಕಟಾಕ್ಷ. ಎರಡು, ತನ್ನ ದುಡ್ಡಿನ ಬೆಂಬಲ. ಈಗ ಸ್ಪರ್ಧಿಸಿರುವ ಗುರುಚರಣ್‌ರಿಗೆ ಅವೆರಡೂ ಇಲ್ಲ. ಅಳಿವಿನಂಚಿನಲ್ಲಿರುವ ಕಾಂಗ್ರೆಸ್ ನೆಲೆಯೇ ಆತನಿಗೆ ಆಧಾರ. ಅದನ್ನಿಟ್ಟುಕೊಂಡು ಗೆದ್ದುಬರುವುದು ಕನಸಿನ ಮಾತೆ.

ಮದ್ದೂರಿನಲ್ಲಿ ಒಬ್ಬ ಕ್ಯಾಂಡಿಡೇಟ್‌ನ್ನು ಘೋಷಿಸುವುದಕ್ಕೆ ಕಾಂಗ್ರೆಸ್ ಇಷ್ಟೊಂದು ದೀರ್ಘ ಸಮಯ ಯಾಕೆ ತೆಗೆದುಕೊಂಡಿತು ಎಂದರೆ ಮಳವಳ್ಳಿ ಸೀಟಿಗೆ ನಿಲ್ಲಬಲ್ಲ ಒಬ್ಬ ಸಮರ್ಥ ವ್ಯಕ್ತಿಯೇ ಇರಲಿಲ್ಲ. ಎಂದರೆ, ಕ್ಷೇತ್ರದಲ್ಲಿ ಕಾಂಗ್ರೆಸ್ ಪರಿಸ್ಥಿತಿ ಹೇಗಿದೆಯೆಂಬುದು ಅರ್ಥವಾಗುತ್ತದೆ. ಅಂಬಿಗೆ ಕ್ಯಾಂಡಿಡೇಟ್ ಆಗು ಎಂದಿದ್ದಕ್ಕೆ, ಇತ್ತ ಶ್ರೀರಂಗಪಟ್ಟಣದಲ್ಲಿ ಸೋಲಿನ ರುಚಿಕಂಡಿದ್ದ ಅವರು ಸುತಾರಾಂ ಒಪ್ಪಿಲ್ಲ. ಒಬ್ಬ ಸಮರ್ಥ ಅಭ್ಯರ್ಥಿಗಾಗಿ ಹುಡುಕಿ ಹುಡುಕಿ ಕೊನೆಗೆ ಯಾರೂ ಸಿಗದಿದ್ದಾಗ ಎಸ್ಸೆಂ ಕೃಷ್ಣ ಅವರ ಸೋದರ ಎಸ್ಸೆಂ ಶಂಕರ್ ಅವರ ಮಗ ಗುರುಚರಣ್ ಅವರನ್ನು ಬಲಿಕೊಡಲು ನಿರ್ಧರಿಸಲಾಗಿದೆ.

ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಮಾಜಿ ಮಳವಳ್ಳಿ ಡಾ.ಮಹೇಶ್‌ಚಂದ್ ಪಕ್ಷದಿಂದ ಪಕ್ಷಕ್ಕೆ ಹಾರುವಲ್ಲಿ ನಿಸ್ಸೀಮನಾಗಿರುವ ಕೋತಿ; ದುಡ್ಡಿಗಾಗಿ ತನ್ನನ್ನೇ ಮಾರಿಕೊಳ್ಳಲು ಸಿದ್ಧವಿರುವ ಕಡುಭ್ರಷ್ಟ. ಆದರೆ ಈತನ ಹಿಂದೆ ಮುಂಚೇಗೌಡರ ಫ್ಯಾಮಿಲಿಯ 5000 ಓಟುಗಳಿವೆ. ಆತನೇನಾದರೂ ಟಿಕೆಟ್ ಸಿಗದಿದ್ದುದರಿಂದ ಸಿಟ್ಟಿಗೆದ್ದು ತಮ್ಮಣ್ಣನ ಕಡೆ ವಾಲಿದರೆ, ಅಕಸ್ಮಾತ್ತಾಗಿ ತಮ್ಮಣ್ಣ ಗೆದ್ದರೆ ಅದು ಎಸ್ಸೆಂ ಕೃಷ್ಣ ಫ್ಯಾಮಿಲಿಗೆ ಚರಮಗೀತೆ ಬರೆದಂತೆಯೆ.

ಈಗ ಕಾಂಗ್ರೆ ಕ್ಯಾಂಡಿಡೇಟ್ ಆಗಿರುವ ಗುರುಚರಣ್ ಕೂಡ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಿ.ಮಧುಗೆ ಬೆಂಬಲಿಸಿದ್ದವ. ನಂತರದಲ್ಲೂ ಆತನಿಗೆ ಜನರೊಂದಿಗೆ ಅಷ್ಟಾಗಿ ಸಂಪರ್ಕವೇನಿಲ್ಲ. ಮೊನ್ನೆ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ದೊಡ್ಡಪ್ಪ ಎಸ್ಸೆಂ ಕೃಷ್ಣ ಮತ್ತು ಡಿಕೆಶಿ ಎದುರು ಗುರುಚರಣ್ ಕ್ಷಮೆಯಾಚಿಸಿದ್ದನಾದರೂ ಕಾಂಗ್ರೆಸ್ ಕಾರ್ಯಕರ್ತರ ಮನಗೆಲ್ಲುವಲ್ಲಿ ವಿಫಲನಾಗಿದ್ದಾನೆ. ಹೀಗಾಗಿ, ಈತ ಗೆಲ್ಲುತ್ತಾನೆಂದು ಖುದ್ದು ಕಾರ್ಯಕರ್ತರಿಗೆ ಭರವಸೆಯಿಲ್ಲ.


ಕಾಂಗ್ರೆಸ್ ನಾಯಕರಿಗೂ ಇದು ಗೊತ್ತಿರದ ವಿಷಯವೇನಲ್ಲ. ಒಂದೆಡೆ ಕಲ್ಪನಾ ಸಿದ್ಧರಾಜು ಪರ ಸಹಾನುಭೂತಿ ಅಲೆ, ಇನ್ನೊಂದೆಡೆ ಒಡೆದ ಮನೆಯಾಗಿರುವ ಕ್ಷೇತ್ರದ ಕಾಂಗ್ರೆಸ್, ಗೆಲ್ಲಲು ಅಸಮರ್ಥನಾಗಿರುವ ಕಾಂಗ್ರೆಸ್ ಕ್ಯಾಂಡಿಡೇಟ್ ಇವೆಲ್ಲವನ್ನೂ ಲೆಕ್ಕಹಾಕಿ ಕಲ್ಪನಾ ಸಿದ್ಧರಾಜುಗೆ ರಹಸ್ಯವಾಗಿ ಬೆಂಬಲಿಸುವ ತಂತ್ರವನ್ನು ಕಾಂಗ್ರೆಸ್ ನಾಯಕತ್ವ ರೂಪಿಸಿದೆ. ಕಲ್ಪನಾ ಸಿದ್ಧರಾಜುವನ್ನು ಗೆಲ್ಲಿಸುವ ಮೂಲಕ ಬಿಜೆಪಿಯ ತಮ್ಮಣ್ಣನನ್ನು ಸೋಲಿಸುವುದರಿಂದ ಮೂರು ಸಾಧನೆ ಮಾಡಿದಂತಾಗುತ್ತದೆ. ಒಂದು, ಕಾಂಗ್ರೆಸ್‌ಗೆ "ಕೈ" ಕೊಟ್ಟು ಬಿಜೆಪಿಯ ತೆಕ್ಕೆಗೆ ಹೋಗಿರುವ ತಮ್ಮಣ್ಣನಿಗೆ ಪಾಠ ಕಲಿಸುವುದು. ಎರಡು, ರಾಜ್ಯಾದ್ಯಂತ ಗೆಲುವಿನ ಕುದುರೆ ಏರಿರುವ ಬಿಜೆಪಿಗೆ ಬ್ರೇಕ್ ಹಾಕುವುದು. ಮೂರು, ಕಾಂಗ್ರೆಸ್ ಟಿಕೆಟ್ ವಂಚಿತ ಡಾ.ಮಹೇಶ್‌ಚಂದ್ ತಮ್ಮಣ್ಣನಿಗೆ ಬೆಂಬಲ ನೀಡಿ ಆತನನ್ನು ಗೆಲ್ಲಿಸುವುದರಿಂದ ಎಸ್ಸೆಂ ಕೃಷ್ಣ ಫ್ಯಾಮಿಲಿಗೆ ಆಗುವ ಅಪಾಯವನ್ನೂ ತಪ್ಪಿಸಿದಂತಾಗುತ್ತದೆ.

ಹೀಗೆ ಎಲ್ಲ ದಿಕ್ಕಿನಿಂದ ನೋಡಿದರೂ ಮದ್ದೂರು ಚುನಾವಣೆಯಲ್ಲಿ ತ್ರಿಕೋಣ ಸ್ಪರ್ಧೆ ಏರ್ಪಡುವುದಾದರೂ ಜೆಡಿಎಸ್‌ನ ಕಲ್ಪನಾ ಸಿದ್ಧರಾಜು ಗೆಲ್ಲುವುದು ಗ್ಯಾರಂಟಿಯಾಗಿದೆ. ಬಿಜೆಪಿ ಮತ್ತು ಕಾಂಗ್ರೆಸ್‌ಗಳು ಎರಡು ಮತ್ತು ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಷ್ಟೆ.

■ ಲಕ್ಷ್ಮಣ್ ಚೀರನಹಳ್ಳಿ

ಅನಿತಾ ಅಖಾಡಕ್ಕೆ ಚೆನ್ನಿಗ ಚಿಂದಿ!

ಮಾಜಿ ಮಂತ್ರಿ ಚೆನ್ನಿಗಪ್ಪ ಹೆದರಿದ್ದಾನೆ! ಬಿಸ್ಕುತಕ್ಕಡಿ ಬೋಳೇಶಂಕರನಂತೆ ಬಾಯಿಗೆ ಬಂದದ್ದನ್ನೆಲ್ಲಾ ಒದರಿಕೊಂಡು ಜೋಕರ್ ರಾಜಕೀಯ ಮಾಡಿಕೊಂಡಿದ್ದ ಚೆನ್ನಿಗಪ್ಪನಿಗೆ ದೇವೇಗೌಡ ಅಂಡ್ ಸನ್ಸ್ ಸರಿಯಾದ ಜಾಪಾಳ ಮೋಕ್ಷ ಕೊಡುತ್ತಿದ್ದಾರೆ.



ಡಿಸೆಂಬರ್ 27ರಂದು ನಡೆಯಲಿರುವ ಮಧುಗಿರಿ ವಿಧಾನಸಭಾ ಉಪಚುನಾವಣೆಯಲ್ಲಿ ಜೆಡಿಎಸ್‌ನಿಂದ ಅನಿತಾ ಕುಮಾರ ಸ್ವಾಮಿ ಅಖಾಡಕ್ಕಿಳಿಯುತ್ತಿದ್ದಾರೆ.

ಈ ಸುದ್ದಿ ಕೇಳಿಯೇ ಕಂಗಾಲಾಗಿರುವ ಚೆನ್ನಿಗಪ್ಪನಿಗೆ ಏಟಿನ ಮೇಲೇಟು ತಿಂದ ಫಜೀತಿ ಸ್ಥಿತಿ. ಇತ್ತೀಚೆಗೆ ತಾನೆ ಬೆಂಗಳೂರಿನಲ್ಲಿ ನಡೆದ ಜೆಡಿಎಸ್ ಸಮಾವೇಶದಲ್ಲಿ ದಳ ಕಾರ್ಯಕರ್ತರಿಂದ ಬೇಜಾನ್ ಒದೆ ತಿಂದು ಆಸ್ಪತ್ರೆ ಸೇರಿದ್ದ ಚೆನ್ನಿಗಪ್ಪನಿಗೆ ಈ ಬಾರಿ ಎಲೆಕ್ಷನ್ ಸೋತರೆ ಹುಚ್ಚಾಸ್ಪತ್ರೆ ಸೇರದೆ ಬೇರೆ ದಾರಿಯಿಲ್ಲ ಅನ್ನುವಂತಾಗಿ ಹೋಗಿದೆ.

ದೇವೇಗೌಡ ಸಿಟ್ಟಿಗೆದ್ದರೆ ಏನಾಗುತ್ತದೆನ್ನಲು ಚೆನ್ನಿಗಪ್ಪನ ವಿರುದ್ಧ ಸಾಕ್ಷಾತ್ ಗೌಡರ ಸೊಸೆ ಅನಿತಾ ಅಖಾಡಕ್ಕಿಳಿಯುತ್ತಿರುವುದೇ ಸಾಕ್ಷಿ.

ಈ ಅನಿರೀಕ್ಷಿತ ಬೆಳವಣಿಗೆಗಳ ಬಗ್ಗೆ ಯಾರು ಏನು ಬೇಕಾದರೂ ಹೇಳಲಿ ಆದರೆ ದೇವೇಗೌಡ ಹಾಗೂ ಕುಮಾರಸ್ವಾಮಿಗಿರುವ ಹೋರಾಟದ ಕಿಚ್ಚು ಹಠಗಳನ್ನು ಮೆಚ್ಚಲೇಬೇಕು.



ಪಾರ್ಟಿ ಕಷ್ಟಕ್ಕೆ ಸಿಕ್ಕಿದೆ ಅಂತನ್ನುವಾಗಲೇ ಅಸಾಮಾನ್ಯ ಧೈರ್ಯ ತೋರಿಸುವುದು. ಶತ್ರುಗಳ ಚಕ್ರವ್ಯೂಹ ಭೇದಿಸಲು ಕುಟುಂಬದವರೇ ಕತ್ತಿ ಹಿಡಿದು ಮುನ್ನುಗ್ಗುವುದು ಕರ್ನಾಟಕದ ರಾಜಕೀಯದ ಮಟ್ಟಿಗೆ ಅಪರೂಪದ ಘಟನೆಗಳೇ ಬಿಡಿ.

ಈಗ ಗೌಡರ ಕುಟುಂಬ ಅಂತಹ ಧೈರ್ಯ ತೋರಿಸಿದೆ: ಕುಟುಂಬದ ಸೊಸೆ ಅನಿತಾ ಒನಕೆ ಓಬವ್ವನಂತೆ ಕಾಣಿಸಿಕೊಳ್ಳುತ್ತಿದ್ದಾರೆ. ಹೀಗೆ ಅನಿವಾರ್ಯ ಸಂದರ್ಭದಲ್ಲಿ ಕುಟುಂಬದ ಪ್ರತಿಷ್ಠೆಯನ್ನೇ ಪಣಕ್ಕೊಡ್ಡಿರುವ ಗೌಡರು ತಮ್ಮ ಗೌರವ, ಪಾರ್ಟಿ ವರ್ಚಸ್ಸು, ಕಾರ್ಯಕರ್ತರ ನಂಬಿಕೆ ಉಳಿಸಿಕೊಳ್ಳಲು ಮಧುಗಿರಿ ಯುದ್ಧವನ್ನು ಗೆಲ್ಲಲೇಬೇಕಾಗಿ ಬಂದಿದೆ.

ಆದರೆ ಇದು ಅಷ್ಟು ಸಲೀಸಾದ ಯುದ್ಧ ಅಲ್ಲವೆಂಬುದು ಬೇರೆ ಮಾತು. 'ಆಪರೇಷನ್ ಕಮಲ'ವೆಂಬ ಗಣಿರೆಡ್ಡಿಗಳ ಕಳ್ಳ ಹಣದಲ್ಲಿ ಖರೀದಿಯಾಗಿ ಬಿಜೆಪಿ ಸೇರಿದ ಗೌರಿಶಂಕರನ ಅಧಿಕಾರದ ಮೋಹದಿಂದ ಖಾಲಿಯಾದ ಕ್ಷೇತ್ರ ಮಧುಗಿರಿ. ಅಷ್ಟರಲ್ಲಿ ಅವರಪ್ಪ ಚೆನ್ನಿಗಪ್ಪ ದೊಡ್ಡಬಳ್ಳಾಪುರದಿಂದ ಸ್ಪರ್ಧಿಸಿ ಕಾಂಗ್ರೆಸ್‌ನ ನರಸಿಂಹಸ್ವಾಮಿ ಎದುರು ಹೀನಾಯವಾಗಿ ಸೋತಿದ್ದ.

ಆದರೆ ಬಿಜೆಪಿಗಳ ಈ ರಾಜಕೀಯ ಎಂಥ ತಿಕ್ಕಲು ಸೀನ್‌ಗಳನ್ನು ಸೃಷ್ಟಿಸಿದೆ ನೋಡಿ. ಅವತ್ತು ಚೆನ್ನಿಗನನ್ನು ಸೋಲಿಸಿದ್ದ ನರಸಿಂಹ ಸ್ವಾಮಿ ಈಗ ಕಾಂಗ್ರೆಸ್ ತ್ಯಜಿಸಿ ಬಿಜೆಪಿ ಸೇರಿ ಮತ್ತೆ ಎಲೆಕ್ಷನ್‌ಗೆ ನಿಂತಿದ್ದಾನೆ. ಇನ್ನೊಂದೆಡೆ ಇದೇ ಚೆನ್ನಿಗಪ್ಪನ ಮಗ ಗೌರಿಶಂಕರ ರೆಡ್ಡಿಗಳ ಎಂಜಲು ನೆಕ್ಕಿ ದಳ ಬಿಟ್ಟು ಬಿಜೆಪಿ ಸೇರಿ ಸಣ್ಣ ಕೈಗಾರಿಕೆ ನಿಗಮದ ಅಧ್ಯಕ್ಷನಾಗಿದ್ದಾನೆ. ಹೀಗೆ ಮಗನೇ ಉಂಡ ಎಲೆಗೆ ಅಂದು ತಿರುಗಿಸಿರುವ ಸ್ಥಳವಾದ ಮಧುಗಿರಿಗೆ ವಕ್ಕರಿಸಿರುವ ಚೆನ್ನಿಗಪ್ಪನ ಈಗ ಬಿಜೆಪಿ ಕ್ಯಾಂಡಿಡೇಟು.


ಮಾಡಿಕೊಂಡಿರುವ ಸಾಲ ತೀರಿಸಲು ಗಣಿರೆಡ್ಡಿಗಳಿಂದ ತಿಂದಿರುವ ಲಂಚಕ್ಕೆ ನ್ಯಾಯ ಒದಗಿಸಲು ಹಾಗೂ ಸ್ವತಃ ತನ್ನ ಮತ್ತು ಮಗ ಗೌರಿಶಂಕರನ ರಾಜಕೀಯ ಭವಿಷ್ಯ ಉಳಿಸಿಕೊಳ್ಳಲು ಚೆನ್ನಿಗಪ್ಪನಿಗೂ ಈ ಯುದ್ಧ ಗೆಲ್ಲಲೇಬೇಕಾಗಿದೆ.

ಆದರೆ ಅನಿತಾರ ಸ್ಪರ್ಧೆ, ಮಧುಗಿರಿ ಜನರ ಸಿಟ್ಟುಗಳೇ ಚೆನ್ನಿಗಪ್ಪನಿಗೆ ಶಾಪ. ಜೊತೆಗೆ 2008ರ ಮೇ ಚುನಾವಣೆಯಲ್ಲಿ ಈ ಅಪ್ಪ ಮಗನಿಗೆ ನಾಲ್ಕು ಕೋಟಿ ತನಕ ಕೊಟ್ಟು ಮೋಸ ಹೋದ ಮಧುಗಿರಿ ವ್ಯಾಪಾರಿಗಳು ಸೇರಿ ಚೆನ್ನಿಗಪ್ಪನ ಮೇಲೆ ಸೇಡು ತೀರಿಸಲು ಕಾದಿದ್ದಾರೆ.

ಇಂತಲ್ಲಿ ಬಿಜೆಪಿ ಗೆಲ್ಲುವುದೆಲ್ಲಿಂದ ಬಂತು?

ಇದಕ್ಕೆ ಕ್ಷೇತ್ರದ ಪರಿಸ್ಥಿತಿಯೊಂದೇ ಕಾರಣವಾಗಿಲ್ಲ.

ಎಲ್ಲರಿಗೂ ಕಾಣುತ್ತಿರುವಂತೆ ಈಗ ಯಡ್ಡಿ-ರೆಡ್ಡಿಗಳ ಸ್ನೇಹ ವೇಗವಾಗಿ ಕಡಿದು ಬೀಳುತ್ತಿವೆ. ಅವಿವೇಕ, ಪುತ್ರವ್ಯಾಮೋಹ, ಸ್ತ್ರೀ ದೌರ್ಬಲ್ಯ, ದುಡ್ಡು ನುಂಗುವ ದುರಾಶೆಗಳಲ್ಲಿ ಯಡ್ಡಿ ಕಡಿಮೆಯಿಲ್ಲವಾದರೂ ಶ್ರೀರಾಮುಲು ನಂತಹ ಬೀದಿ ರೌಡಿಗೆ ಹೋಲಿಸಲಾಗದು. ಈ ಮಾತು ಈಗ ಯಾಕೆಂದರೆ ರಾಮುಲುನನ್ನು ಕರ್ನಾಟಕದ ಮುಂದಿನ ಮುಖ್ಯಮಂತ್ರಿ ಮಾಡುವುದಾಗಿ ರೆಡ್ಡಿಗಳು ಹೇಳಿದ್ದಾರೆ. ಈ ಮಾತಿನ ತಾತ್ಪರ್ಯ ಏನೆಂದರೆ 'ಯಡ್ಡಿಯನ್ನು ಸಿಎಂ ಮಾಡಿದ್ದೂ ನಾವೇ" ಎಂದು ಯಡ್ಡಿಯ ಮೈನಾರಿಟಿ ಸರ್ಕಾರದ ಬುಡ ಭದ್ರ ಮಾಡಲು ದಳ-ಕಾಂಗ್ರೆಸ್ ಶಾಸಕರನ್ನೇ ಖರೀದಿಸಿ ಆದಕ್ಕಾದ ನೂರಾರು ಕೋಟಿ ರೂ. ಖರ್ಚನ್ನು ಹೊತ್ತುಕೊಂಡಿದ್ದ ರೆಡ್ಡಿಗಳು ಅದ್ಯಾಕೋ ಈಗ ಮೊದಲಿನ ಕದನೋತ್ಸಾಹ ತೋರಿಸುತ್ತಿಲ್ಲ. ಹಣ ಬಿಚ್ಚುತ್ತಿಲ್ಲ.



ಮಧುಗಿರಿ ಸೇರಿದಂತೆ ಎಂಟು ಉಪಚುನಾವಣೆಗಳ ಬಿಜೆಪಿ ಅಭ್ಯರ್ಥಿಗಳಿಗೆ ಇದೊಂದು ಹಿನ್ನಡೆಯಾಗಿದೆ.

ಅಸಲಿಗೆ ಈ ಬೈ ಎಲೆಕ್ಷನ್ ನಡೆಯುವಂತಾದದ್ದೇ ರೆಡ್ಡಿಗಳ ತಂತ್ರದಿಂದ ಆದರಿವತ್ತು ರೆಡ್ಡಿಗಳೇ ಸೀನ್‌ನಲ್ಲಿಲ್ಲ.

ಇಷ್ಟಾದರೂ ಯಡ್ಡಿಗೆ ತನ್ನ ಸರ್ಕಾರದ ಭದ್ರತೆಗಾಗಿ ಗೆಲ್ಲಲೇಬೇಕಾದ ಬೈ ಎಲೆಕ್ಷನ್ ಇದು.

ಚೆನ್ನಿಗನಿಗೆ RSS ಕಿರುಕುಳ

ಮಧುಗಿರಿಯಲ್ಲಿ ಬಿಜೆಪಿಗೆ ತನ್ನದೇ ಆದ ನೆಲೆ ಇಲ್ಲ. ಅಂಥದ್ದೊಂದು ಓಟ್‌ಬ್ಯಾಂಕೂ ಇಲ್ಲ. ಜನಸಂಘದ ದಿಂದಲೂ ಇಲ್ಲೊಂದು RSS ಶಾಖೆ ಅಂತ ಒಂದಿದೆ. ಊರಿನ ಕೆಲ ಶೆಟ್ಟರು, ಮಾರ್ವಾಡಿಗಳ ಕೃಪೆಯಲ್ಲಿ ಕಾಲಯಾಪನೆ ಮಾಡುತ್ತಿರುವ ಮಧುಗಿರಿ ಆರೆಸ್ಸೆಸ್ಸಿಗರಿಗೆ ಚೆನ್ನಿಗಪ್ಪನ ಬಗ್ಗೆ ಅಷ್ಟೇನೂ ಒಲವಿಲ್ಲ. ಬಿಜೆಪಿಯ ಕಳಪೆ ನಾಯಕ ಡಾ. ಜಯರಾಂ ಜತೆ ನಂದೀಶ್, ನಾರಾಯಣ ಶರ್ಮ ಹಾಗೂ ಚೌಡಪ್ಪನಂ ಪಾರ್ಟಿ ಕೆಲಸ ಅಂತ ಕೆಲ ಹೊತ್ತು ಓಡಾಡುವುದಷ್ಟೇ. ಅದರಲ್ಲೂ ನಂದೀಶ್ ಮತ್ತು ಅವರ ಜೊತೆಯಲ್ಲಿರುವ ಶರ್ಮ, ಜಯರಾಂ ಬಿಜೆಪಿ ಮೇಲಿನ ನಾನಾತರದ ಸಿಟ್ಟಿಗೆ ಚೆನ್ನಿಗನಿಗೆ ಒಳಗಿಂದೊಳಗೇ ಕೈಕೊಡುತ್ತಾರೆಂಬ ಸುದ್ದಿ ಇದೆ. ರಾಜ್ಯ ಮಟ್ಟದಲ್ಲಿ ಯಡ್ಡಿಯ ಬಿಜೆಪಿ ಮತ್ತು ಸಂಘ ಪರಿವಾರ ನಡುವೆ ಬೆಳೆದಿರುವ ಅಸಮಾಧಾನದ ಒಂದು ಎಳೆ ಮಧುಗಿರಿಯಲ್ಲೂ ಕಾಣಿಸಿಕೊಂಡಿದೆ. ಚೆನ್ನಿಗನಿಗೆ ಸಣ್ಣ ಪ್ರಮಾಣದಲ್ಲಾದರೂ ಇದರ ಕಿರಿಕಿರಿ ತಪ್ಪಿದ್ದಲ್ಲ.

ಅನಿತಾ ಅಲೆ

ರಾಜಕೀಯದಲ್ಲಿ ಒಂದು ಅಲೆ ಅಂತ ಯಾವಾಗ ಯಾರಿಂದ ಯಾಕೆ ಶುರುವಾಗುತ್ತದೆ ಎಂದು ಗ್ಯಾರಂಟಿಯಾಗಿ ಹೇಳಲಿಕ್ಕಾಗದು. ಮಧುಗಿರಿಯಲ್ಲಿ ಈಗ ಅದೇ ಪರಿಸ್ಥಿತಿ. ಅಲ್ಲೀಗ ಪೂರಾ ಅನಿತಾ ಅಲೆ. ವಿನಾಕಾರಣ ಕ್ಷೇತ್ರದ ಜನರ ಮೇಲೆ ಇನ್ನೊಂದು ಚುನಾವಣೆ ಹೇರಿರುವ ಚೆನ್ನಿಗಪ್ಪನ ಮೇಲೆ ಜನ ಕುದಿಯುತ್ತಿದ್ದಾರೆ. ಹಾಗೆ ಹೇಳಬೇಕೆಂದರೆ ಚೆನ್ನಿಗ ಮಧುಗಿರಿಯವನೂ ಅಲ್ಲ. ನೆರೆಯ ಕೊರಟಗೆರೆಯಲ್ಲಿ ಕಾಲ ಹಾಕುತ್ತಿದ್ದವನು. ಅದು ಮೀಸಲು ಕ್ಷೇತ್ರವಾದ ಮೇಲೆ 2008ರಲ್ಲಿ ತಾನು ದೊಡ್ಡಬಳ್ಳಾಪುರಕ್ಕೆ ಹೋಗಿ ಮಗ ಗೌರಿಶಂಕರನನ್ನು ಮಧುಗಿರಿಗೆ ತಂದು ಜೆಡಿಎಸ್‌ನಿಂದ ನಿಲ್ಲಿಸಿ ಗೆಲ್ಲಿಸಿಕೊಂಡಿದ್ದ. ಕಳೆದ ಬಾರಿ ಗೌರಿಶಂಕರ ಕಾಂಗ್ರೆಸ್‌ನ ಕೆ.ಎನ್. ರಾಜಣ್ಣ ವಿರುದ್ಧ ಗೆದ್ದಿದ್ದು ಕೈತ ಜುಜುಬಿ 547 ಓಟುಗಳ ಅಂತರದಿಂದ ಮಾತ್ರ.

ಆಗ ಬಿಜೆಪಿ ಕ್ಯಾಂಡಿಡೇಟಾಗಿದ್ದ ಡಾ. ಜಯರಾಂ ಆಟಕ್ಕಿದ್ದರೂ ಲೆಕ್ಕಕ್ಕಿರಲಿಲ್ಲ. ಈಗ ದಳದಿಂದ ಅನಿತಾ ಕುಮಾರಸ್ವಾಮಿ ಸ್ಪರ್ಧಿಸುವುದೇ ಆದರೆ ಅವರಿಗೆ ನಿಜವಾದ ಪೈಪೋಟಿ ಎದುರಾಗುವುದು ಕಾಂಗ್ರೆಸ್‌ನ ರಾಜಣ್ಣನಿಂದಲೇ ವಿನಃ ಬಿಜೆಪಿಯ ಚೆನ್ನಿಗನಿಂದಲ್ಲ. 2004ರ ಚುನಾವಣೆಯಲ್ಲಿ ಮಧುಗಿರಿ ಮೀಸಲು ಕ್ಷೇತ್ರವಾಗಿದ್ದಾಗ ಕಾಂಗ್ರೆಸ್. ಡಾ.ಜಿ. ಪರಮೇಶ್ವರ 47 ಸಾವಿರ ಓಟು ಪಡೆದು ಗೆದ್ದಿದ್ದರು. ದಳದ ಕೆಂಚರಾಮಯ್ಯಗೆ ಹತ್ತಿರತ್ತಿರ 30 ಸಾವಿರ ಓಟು ಬಿದ್ದಿದ್ದವು. ಬಿಜೆಪಿ ಆಗಲೂ ಲೆಕ್ಕಕ್ಕಿರಲಿಲ್ಲ. ಇಲ್ಲಿ ದಳ ಎಂದೂ ನಗಣ್ಯವಾಗಿರಲಿಲ್ಲ.

ವಾಸ್ತವವಾಗಿ ಮಧುಗಿರಿಯಿಂದ ದಳದ ಅಭ್ಯರ್ಥಿಯಾಗಿ ಸರ್ಕಾರಿ ಅಧಿಕಾರಿ ವೀರಭದ್ರಯ್ಯ ನಿಲ್ಲಬೇಕಿತ್ತು, ಆದರೆ ಯಡ್ಡಿ ಅದೇನೊ ಮಹಾನ್ ಡೇಂಜರ್ ಎಂಬಂತೆ ವೀರಭದ್ರಯ್ಯನವರ ಸ್ವಯಂ ನಿವೃತ್ತಿ ಅರ್ಜಿಯನ್ನು ಪೆಂಡಿಂಗ್ ಇಡಿಸಿದ್ದರು. ಆದರೆ ಗೌಡರು ಇಂಥದನ್ನು ಎಷ್ಟು ನೋಡಿಲ್ಲ, ನೀನೇ ಎಲೆಕ್ಷನ್‌ಗೆ ನಿಂತುಕೊಳ್ಳಮ್ಮ ಒಂದು ಕೈ ನೋಡೇ ಬಿಡೋಣ ಅಂತ ಸೊಸೆ ಅನಿತಾರನ್ನು ಹುರಿದುಂಬಿಸಿದ್ದಾರೆ.

ಈಗ ದಳದ ಅಭ್ಯರ್ಥಿ ಅನಿತಾ ಕುಮಾರಸ್ವಾಮಿ ಅಂತಾದ ಮೇಲೆ ಕ್ಷೇತ್ರದ ಹವಾಗೆ ರಭಸ ಬಂದುಬಿಟ್ಟಿದೆ. ಇದೇ ಭಾನುವಾರ ಡಿಸೆಂಬರ್ 7ರ ಸಂಜೆ 'ಲಂಕೇಶ್' ಪ್ರಿಂಟ್‌ಗೆ ಹೋಗುತ್ತಿರುವಾಗಲೇ ಮಧುಗಿರಿಯಲ್ಲಿ ಜೆಡಿಎಸ್‌ನ ಸಮಾವೇಶ ನಡೆದಿದೆ. 20 ಸಾವಿರದಷ್ಟು ಬೃಹತ್ ಸಂಖ್ಯೆಯ ಜನರಿದ್ದ ಸಮಾವೇಶದಲ್ಲಿ ಸ್ವತಃ ದೇವೇಗೌಡರೇ ಅನಿತಾ ಸ್ಪರ್ಧೆಯನ್ನು ಪ್ರಕಟಿಸಿದ್ದಾರೆ.

ಮೊದಲೇ ಹೇಳಿದಂತೆ ದೇವೇಗೌಡರ ಕದನೋತ್ಸಾಹಕ್ಕೆ ಯಾರು ಸಾಟಿ ಹೇಳಿ?

■ ಪಾರ್ವತೀಶ

ಚೆನ್ನಿಗನ ವಿರುದ್ಧ ವರ್ತಕರ ಸೇಡು

ಮಧುಗಿರಿಯ ಜನಪ್ರಿಯ ವ್ಯಕ್ತಿ ಅಕ್ಕಿ ವ್ಯಾಪಾರಿ ವೆಂಕಟಾಚಲಪತಿ ಆತ್ಮಹತ್ಯೆ ಮಾಡಿಕೊಂಡು ಒಂದು ತಿಂಗಳಾಯಿತು. ಕಳೆದ ಎಲೆಕ್ಷನ್‌ನಲ್ಲಿ ಗೌರಿಶಂಕರ ಹಾಗೂ ಚೆನ್ನಿಗನಿಗಾಗಿ ಹತ್ತಿರತ್ತಿರ 20 ಲಕ್ಷದಷ್ಟು ಹಣ ಖರ್ಚು ಮಾಡಿದ್ದರೂ ಆಮೇಲೆ ಹಣ ವಾಪಸ್ ಕೊಡದೆ ಹೋದ ಕಾರಣ ಬೆಂಗಳೂರಿನ ಲಾಡ್ಜ್ ಒಂದರಲ್ಲಿ ನೇಣು ಹಾಕಿಕೊಂಡ ವೆಂಕಾಚಲಪತಿಯನ್ನು ಮಧುಗಿರಿಯ ಜನ ಇಷ್ಟು ಬೇಗ ಮರೆತಿಲ್ಲ.

ಹೊಳೆ ದಾಟಿದ ಮೇಲೆ ಅಂಬಿಗನ ಮಿಂಡನಂತಾದಿದ ಚೆನ್ನಿಗ & ಸನ್ ಮೇಲೆ ಸೇಡು ತೀರಿಸಿಕೊಳ್ಳಲು ಮಧುಗಿರಿಯ ವರ್ತಕರ ದೊಡ್ಡ ಗುಂಪೇ ಕಾದಿದೆ. ಇದೇ ತರಹವೇ ಚೆನ್ನಿಗನಿಗಾಗಿ ಪುರಸಭೆಯ ಮಾಜಿ ವೈಸ್ ಪ್ರೆಸಿಡೆಂಟ್ ಪ್ರಕಾಶ್ 40 ಲಕ್ಷ ಖರ್ಚು ಮಾಡಿಕೊಂಡಿದ್ದರು. ಅವರಿಗೂ ಹಣ ವಾಪಸ್ ಸಿಗದೇ ಹೋದಾಗ ಪ್ರಕಾಶ್‌ಗೆ ಹಾರ್ಟ್‌ಅಟ್ಯಾಕ್ ಆಗಿಹೋಯಿತು. ಇನ್ನೂ ಕೆಲವರಿಗೆ ಗೌರಿಶಂಕರ ತನ್ನ ಹೆಂಡತಿ ಒಡವೆಯಿಂದ ಚೆಕ್ ಕೊಡಿಸಿದ್ದಾನಾದರೂ ಅದರಿಂದ ಯಾರಿಗೂ ಒಂದು ರೂಪಾಯಿಯೂ ಸಿಗಲಿಲ್ಲ.

ಮಧುಗಿರಿಯ ಪ್ರತಿ ಪ್ರಜೆಯೂ ಕಳೆದ 6 ತಿಂಗಳಿಂದ ಚೆನ್ನಿಗನ ಈ ಪರಿಯ ಮೋಸದ ನಾವೆಲ್ಲಾ ಕಾಣೆವೆಂದು ಮಾತಾಡಿಕೊಂಡೇ ಬಂದಿದ್ದಾರೆ. ಚೆನ್ನಿಗನ ಮೇಲೆ ಸೇಡು ತೀರಿಸಲು ನಮಗೆಲ್ಲಾ ಈ ಬಾರಿ ಒಂದು ಭರ್ಜರಿ ಛಾನ್ಸ್ ಸಿಕ್ಕಿದೆ ಅಂತ ವರ್ತಕರು ಕಾಯಿದ್ದಾರೆ.

ಯಡ್ಡಿ ವಿರುದ್ಧ ತಿರುಗಿ ಬಿದ್ದ ಶಿವಮೊಗ್ಗ ಬಿಜೆಪಿ


ಯಡ್ಡಿ ವಿರುದ್ಧ ಶಿವಮೊಗ್ಗದ ಬಿಜೆಪಿ ನಾಯಕರೆಲ್ಲ ತಿರುಗಿಬಿದ್ದಿದ್ದಾರೆ! ಇಷ್ಟು ದಿನ ಯಡ್ಡಿಯ ಮಾತಿಗೆ ಎದುರಾಡದೆ ಅವರು ಹೇಳಿದ್ದಕ್ಕೆಲ್ಲಾ ತಲೆಯಾಡಿಸುತ್ತಾ; ಅವರು ಮಾಡುವ ಅನಾಚಾರಗಳನ್ನೆಲ್ಲಾ ಕಣ್ಣಾರೆ ಕಂಡರೂ ಯಡ್ಡಿಯನ್ನು ಸಾಟಿ ಇಲ್ಲದ ನಾಯಕನಂತೆ ಬಿಂಬಿಸುತ್ತಾ ಬಂದಿರುವ ಈ ನಾಯಕರು ಹೀಗೆ ಇದ್ದಕಿದ್ದಹಾಗೆ ತಿರುಗಿಬಿದ್ದಿರುವುದನ್ನು ಕಂಡು ಇಡೀ ಶಿವಮೊಗ್ಗದ ರಾಜಕಾರಣವೇ ಬೆಚ್ಚಿ ಬಿದ್ದಿದೆ.

"ಅಧಿಕಾರಕ್ಕೇರುತ್ತಿದ್ದಂತೆಯೇ ಯಡ್ಡಿ ತಮ್ಮ ಜೊತೆಗೆ ಕೆಲಸ ಮಾಡಿದವರನ್ನು ಮರೆತರು. ಈಗ ನಾನು ಹೇಳಿದಂತೆಯೇ ಕೇಳಬೇಕೆಂದು ಹಿಟ್ಲರ್‌ನಂತೆ ವರ್ತಿಸುತ್ತಿದ್ದಾರೆ. ಪಕ್ಷ ಕಾರ್ಯಕರ್ತರು ಮತ್ತು ನಾಯಕರ ಮಾತಿಗೆ ಬೆಲೆಯೇ ಇಲ್ಲವಾಗಿದೆ. ಜಿಲ್ಲೆಯ ಅಧಿಕಾರವನ್ನು ಮಗನಿಗೆ ವಹಿಸಿ, ನಮ್ಮನ್ನೆಲ್ಲಾ ಮೂಲೆಗುಂಪು ಮಾಡುತ್ತಿದ್ದಾರೆ. ಯಾರ್‍ಯಾರನ್ನೋ ಜಿಲ್ಲೆಗೆ ಕಳುಹಿಸಿ ಇಲ್ಲಿಯ ಸಂಘಟನೆಯನ್ನು ಹಾಳು ಮಾಡುತ್ತಿದ್ದಾರೆ" ಎಂದು ಬಿಜೆಪಿ ನಾಯಕರು ಕಂಡಕಂಡಲ್ಲೆಲ್ಲಾ ಕಣ್ಣೀರು ಹಾಕುವುದನ್ನು ನೋಡಿ ಕಾಂಗ್ರೆಸ್ಸಿಗರೂ ಮರುಕಪಡುತ್ತಿದ್ದಾರೆ!

ಯಡ್ಡಿ ಕೇವಲ ಅನಂತು ಬಣದ ಕುಂಡೆಸುಟ್ಟು ಅಧಿಕಾರ ಹಿಡಿದಿಲ್ಲ, ಅವಕಾಶ ಸಿಕ್ಕರೆ ತಮ್ಮ ಕುಂಡೆಗೂ ಬರೆಹಾಕುತ್ತಾರೆ ಎಂದು ಗೊತ್ತಾಗುತ್ತಿದ್ದಂತೆಯೇ ಇಲ್ಲಿನ ಚೆಡ್ಡಿಗಳು ಒಗ್ಗಟ್ಟಿನಿಂದ ಯಡ್ಡಿ ವಿರುದ್ಧ ತಿರುಗಿಬಿದ್ದಿದ್ದಾರೆ. ಪತ್ರಿಕಾಗೋಷ್ಠಿ ನಡೆಸಿ ಯಡ್ಡಿಗೆ ಪರೋಕ್ಷ ಎಚ್ಚರಿಕೆಯನ್ನೂ ನೀಡಿದ್ದಾರೆ.

ಆದದ್ದಾದರೂ ಏನು?

ಉಪಮುಖ್ಯಮಂತ್ರಿಯಾಗಿದ್ದಾಗ ಶಿವಮೊಗ್ಗ ಜಿಲ್ಲೆಯ ನಾಯಕರನ್ನು ವಿಶ್ವಾಸದಿಂದಲೇ ನಡೆಸಿಕೊಂಡಿದ್ದ ಯಡ್ಡಿ, ಚುನಾವಣೆ ಘೋಷಣೆಯಾಗುತ್ತಿದ್ದಂತೆಯೇ ಯಾರ ಮಾತಿಗೂ ಬೆಲೆ ಕೊಡದೆ, ಹರತಾಳು ಹಾಲಪ್ಪ, ಬೇಲೂರು ಗೋಪಾಲಕೃಷ್ಣ ಎಂಬ ಪಕ್ಷದ್ರೋಹಿಗಳನ್ನು ಮತ್ತೆ ಪಕ್ಷಕ್ಕೆ ಸೇರಿಸಿಕೊಂಡಿದ್ದರು. ಆದರೆ ಚುನಾವಣೆಯ ಸಂದರ್ಭದಲ್ಲಿ ಬಹಿರಂಗವಾಗಿ ವಿರೋಧ ವ್ಯಕ್ತಪಡಿಸಬಾರದೆಂಬ ಕಾರಣಕ್ಕೆ ಜಿಲ್ಲಾ ಬಿಜೆಪಿ ನಾಯಕರು ಬಾಯಿಮುಚ್ಚಿಕೊಂಡು ಸುಮ್ಮನಿದ್ದರು. ಇದಕ್ಕೂ ಮುನ್ನ, ಈಶ್ವರಪ್ಪನಿಗೆ ಬುದ್ಧಿ ಕಲಿಸಲೆಂದೇ ಬೇರೆ ಬೇರೆ ಪಕ್ಷಗಳಲ್ಲಿ ಅಂಡಲೆಯುತ್ತಿದ್ದ ಆಯನೂರು ಮಂಜುನಾಥ ಎಂಬ ಮಾಸಿದ ಚೆಡ್ಡಿಯನ್ನು ಹಿಡಿದು ತಂದು ಪಕ್ಷದ ಕಚೇರಿಯಲ್ಲಿ ಕೂರಿಸಿದ್ದರು.



ಹಾಲಪ್ಪ ಮತ್ತು ಗೋಪಾಲಕೃಷ್ಣ ಚುನಾವಣೆಯಲ್ಲಿ ಗೆದ್ದಿದ್ದರಿಂದ ಅವರ ವಿರುದ್ಧ ಮಾತನಾಡುವ ಧೈರ್ಯವನ್ನು ಜಿಲ್ಲಾ ನಾಯಕರು ತೋರಿಸಿರಲಿಲ್ಲ. ಎಡಬಿಡಂಗಿ ಹಾಲಪ್ಪನನ್ನು ಸಚಿವನನ್ನಾಗಿ ಮಾಡಿದಾಗಲೂ ಬಂಗಾರಪ್ಪನನ್ನು ಹಣಿಯಲು ಯಡ್ಡಿ ಈ ತಂತ್ರ ರೂಪಿಸಿದ್ದಾರೆ ಎಂದುಕೊಂಡು ಸುಮ್ಮನಾಗಿದ್ದರು.


ಮುಖ್ಯಮಂತ್ರಿಯಾಗಿದ್ದಾರೆ ಎಂದು ಸಣ್ಣ-ಪುಟ್ಟ ವರ್ಗಾವಣೆಗಳನ್ನಾದರೂ ಮಾಡಿಸೋಣ ಎಂದು ಯಡ್ಡಿ ಮನೆಗೆ ಹೋದರೆ, ಮಕ್ಕಳಾದ ರಾಘವೇಂದ್ರ-ವಿಜೇಂದ್ರ ಅವರನ್ನೆಲ್ಲ ಬಾಗಿಲಲ್ಲೇ ತಡೆದು, ಕಾಫಿ ಕೊಟ್ಟು, ಕಿವಿಗೆ ಹೂವಿಟ್ಟು ಕಳಿಸಲಾರಂಭಿಸಿದರು.

ಪಾಪ, ದೀಪದ ಕೆಳಗಿನ ಕತ್ತಲೆಯ ಸ್ಥಿತಿ ಶಿವಮೊಗ್ಗ ಜಿಲ್ಲಾ ಬಿಜೆಪಿ ನಾಯಕರದ್ದಾಯಿತು. ಜಿಲ್ಲೆಯ ಪ್ರಮುಖ ನಾಯಕರಾದ ಭಾನುಪ್ರಕಾಶ್, ಆಯನೂರು ಮಂಜುನಾಥ್, ಗಿರೀಶ್ ಪಟೇಲ್, ಚೆನ್ನಬಸಪ್ಪ, ಶಾಸಕ ಕೆ.ಜಿ.ಕುಮಾರಸ್ವಾಮಿ, ದೇವದಾಸನಾಯಕ್, ಆರ್.ಕೆ.ಸಿದ್ದರಾಮಣ್ಣ ಮತ್ತಿತರರಿಗೆ ಈಗ ಹಲ್ಲಿಲ್ಲದ ಹಾವಿನಂತೆ ಬುಸುಗುಟ್ಟುವುದಷ್ಟೇ ಕೆಲಸವಾಗಿದೆ.


ಇತ್ತ ಪಕ್ಷ ಸಂಘಟಿಸೋಣ ಎಂದರೆ ಕಾರ್ಯಕರ್ತರು ಕೆಲಸ ಮಾಡಿಸಿ ಅನ್ನುತ್ತಾರೆ, ಆಡಳಿತ ನಡೆಸೋಣ ಎಂದರೆ ಯಡ್ಡಿ ಕುಟುಂಬದ ಮಾತೇ ವೇದವಾಕ್ಯ ಎನ್ನುತ್ತಾರೆ ಅಧಿಕಾರಿಗಳು!

ಇನ್ನು ಯಡ್ಡಿ ಮತ್ತು ಈಶ್ವರಪ್ಪರ ಸಂಬಂಧ ಹಳಸಿ ಬಹಳ ದಿನಗಳೇ ಆಗಿವೆ. ಹೀಗಾಗಿ ಯಾರು ಮಾತು ಕೇಳಿದರೆ ಯಾರಿಗೆ ಸಿಟ್ಟು ಬರುತ್ತದೆಯೋ ಎಂಬ ಆತಂಕದಲ್ಲಿಯೇ ಈ ಎರಡನೇ ಸಾಲಿನ ನಾಯಕರು ದಿನದೂಡುತ್ತಿದ್ದಾರೆ.


ಮಕ್ಕಳ ರಾಜಕೀಯ ಭವಿಷ್ಯ ಬರೆಯಲು ಹೊರಟ ಯಡ್ಡಿ


ಹಾಲಪ್ಪ

ಜಿಲ್ಲಾ ಬಿಜೆಪಿಯಲ್ಲಿ ಈ ಪರಿಸ್ಥಿತಿ ಇರುವಾಗಲೇ ಯಡ್ಡಿ ಕೂಡ ದೇವೇಗೌಡರಂತೆ ತಮ್ಮ ಮಕ್ಕಳನ್ನೂ ರಾಜಕೀಯಕ್ಕೆ ಕರೆತರಬೇಕೆಂದು ಹೊರಟಿದ್ದಾರೆ. ಅಧಿಕಾರದಲ್ಲಿದ್ದಾಗಲೇ ಮಕ್ಕಳಿಗೊಂದು ರಾಜಕೀಯ ವ್ಯಕ್ತಿತ್ವವನ್ನು ರೂಪಿಸಬೇಕೆಂಬುದು ಅವರ ಹವಣಿಕೆ. ಇದಕ್ಕಾಗಿ ಎಚ್ಚರಿಕೆಯಿಂದ ಹೆಜ್ಜೆ ಇಡುವ ಬದಲು ಮೂರ್ಖರ ಮಾತು ಕೇಳಿ ದುಡುಕಿ ಹೆಜ್ಜೆ ಇಟ್ಟಿದ್ದಾರೆ. ಪರಿಣಾಮ ಈಗ ತವರು ಜಿಲ್ಲೆಯಲ್ಲಿನ ಮರಿ ಪುಢಾರಿಗಳ ಸಿಟ್ಟು ಎದುರಿಸಬೇಕಾಗಿ ಬಂದಿದೆ.


ಗೋಪಾಲಕೃಷ್ಣ

ಅಧಿಕಾರವನ್ನೆಲ್ಲಾ ತಮ್ಮ ಮಕ್ಕಳ ಕೈಗೆ ಕೊಟ್ಟಿದ್ದರಿಂದಾಗಿಯೇ ರಾಜ್ಯ ನಾಯಕರ ಕೆಂಗಣ್ಣಿಗೆ ಗುರಿಯಾಗಿರುವ ಯಡ್ಡಿ, ಬರುವ ಲೋಕಸಭಾ ಚುನಾವಣೆಯಲ್ಲಿ ತಮ್ಮ ಮಗನನ್ನು ಪಕ್ಷದ ಅಭ್ಯರ್ಥಿಯಾಗಿ ಮಾಡಿ, ಗೆಲ್ಲಿಸಿ ರಾಷ್ಟ್ರ ರಾಜಕಾರಣದಲ್ಲಿಯೂ ಈ ಮೂಲಕ ಹೆಸರು ಮಾಡಬೇಕೆಂದು ಹೊರಟಿದ್ದಾರೆ. ಈ ನಿಟ್ಟನಲ್ಲಿ ಯಡ್ಡಿ ತೋರಿಸಿರುವ ಅವಸರವೇ ಈಗ ಅಪಘಾತಕ್ಕೆ ಕಾರಣವಾಗಿದೆ!


ಮಂಜುನಾಥ್

ಎಡವಟ್ಟು ಮಾಡಿದ ದಿವಾಕರ್

ಅದ್ಯಾವ ಕಾರಣದಿಂದ ಕೆ. ದಿವಾಕರ್ ಎಂಬ ಸಾಗರ ಮೂಲದ ಬೆಂಗಳೂರಿನ ಬ್ರಾಹ್ಮಣ ವಕೀಲನನ್ನು ಯಡ್ಡಿ ತಮ್ಮ ಕಾನೂನು ಸಲಹೆಗಾರರನ್ನಾಗಿ ನೇಮಿಸಿಕೊಂಡರೋ ಗೊತ್ತಿಲ್ಲ, ಆದರೆ ತನಗೆ ಈ 'ಗೌರವ' ನೀಡಿದ ಯಡ್ಡಿಯನ್ನು ದಿಕ್ಕು ತಪ್ಪಿಸುವ ಕೆಲಸವನ್ನು ಮಾತ್ರ ಈತ ಮಾಡುತ್ತಿದ್ದಾನೆ!

ಸಂಘಪರಿವಾರದ ಹಿನ್ನಲೆ ಹೊಂದಿರುವ ಈತನಿಗೆ ರಾಜಕಾರಣದಲ್ಲಿ ಹೆಸರು ಮಾಡುವ ಆಸೆ. ಹೀಗಾಗಿ ಶಿವಮೊಗ್ಗ ಜಿಲ್ಲಾ ರಾಜಕಾರಣದಲ್ಲಿ ಕೈಯಾಡಿಸಲು ಆರಂಭಿಸಿದ. ಯಡ್ಡಿ ತನ್ನ ಮಾತನ್ನು ಕೇಳಿಯೇ ಕೇಳುತ್ತಾರೆಂಬ ಕಾರಣಕ್ಕೆ ಹೋದಲ್ಲಿ ಬಂದಲ್ಲಿ ಭರವಸೆಗಳನ್ನು ನೀಡಿ, ಇದ್ದಕ್ಕಿದ್ದ ಹಾಗೆ ಜಿಲ್ಲೆಯಲ್ಲಿ ಮಿಂಚಲಾರಂಭಿಸಿ[...] ಇತ್ತ ಯಡ್ಡಿ ಮಗ ರಾಘವೇಂದ್ರ ಜಿಲ್ಲೆಯಲ್ಲಿ ಅಧಿಕಾ[...] ನಡೆಸುತ್ತಿದ್ದರೆ, ಇನ್ನೊಂದೆಡೆ ಈ ದಿವಾಕರ್ ಯಡ್ಡಿ[...] ದೂತನಂತೆ ಜಿಲ್ಲೆಯಾದ್ಯಂತ ಓಡಾಡತೊಡಗಿದ. ಇ[...] ಮೊದಲೇ ಎಡಬಿಡಂಗಿಗಳಂತಾಗಿರುವ ಜಿಲ್ಲಾ ಬಿಜೆ[...] ನಾಯಕರ ಸಿಟ್ಟನ್ನು ನೆತ್ತಿಗೇರಿಸಿತ್ತು.

ದಿವಾಕರ್ ಮೂಲಕ ಯಡ್ಡಿಯ ದು-ರಾಲೋ[...]ಚನೆ ಹೊರಬಿದ್ದಿದೆ ಎಂದು ಗೊತ್ತಾಗುತ್ತಿದ್ದಂತೆಯೆ[...] ಜಿಲ್ಲಾ ಬಿಜೆಪಿ ನಾಯಕರು ಬೆಚ್ಚಿಬಿದ್ದರು. ಇತ್ತೀಚೆ[...] ಯಡ್ಡಿ ಹೋದಲ್ಲಿ ಬಂದಲ್ಲಿ ತನ್ನ ಪು[...] ರಾಘವೇಂದ್ರನನ್ನು ಪರಿಚಯಿಸುತ್ತಿರುವುದು, ಆತ[...] ಮಾತನ್ನೇ ಕೇಳಿ ಎಂದು ಅಧಿಕಾರಿಗಳಿಗೆ ಸೂಚಿ[...]ತ್ತಿರುವುದು, ರಾಘವೇಂದ್ರ ಜಿಲ್ಲಾ ರಾಜಕಾರಣದ[...] ಆಕ್ಟೀವ್ ಆಗಿ ಕಾಣಿಸಿಕೊಂಡಿರುವುದು ಎಲ್ಲ ಇದ[...] ಕಾರಣಕ್ಕೆ ಎಂದು ಹೊಳೆಯಿತು.

ಮಾಜಿ ಸಂಸದ ಆಯನೂರು ಮಂಜುನಾಥ[...] ಹಿಂದೆ ಲೋಕಸಭೆಗೆ ಸ್ಪರ್ಧಿಸಿದ್ದ ಭಾನುಪ್ರಕಾಶ[...] ಜ್ಯೋತಿಪ್ರಕಾಶ್ ಮತ್ತಿತರರೆಲ್ಲಾ ಈ ಬಾರಿಯ ಟಿಕೆ[...] ಆಕಾಂಕ್ಷಿಗಳು. ಹಾಗಿರುವಾಗ ಇದ್ದಕ್ಕಿದ್ದ ಹಾಗೆ ಯ[...] ತಮ್ಮ ಪುತ್ರನನ್ನು ಮುಂದು ಮಾಡುತ್ತಿರುವುದನ[...] ಕಂಡು ಅವರೆಲ್ಲ ಆಘಾತಕ್ಕೊಳಗಾದರು. ಇನ[...] ಸುಮ್ಮನಿದ್ದರೆ ತಮ್ಮ ರಾಜಕೀಯ ಭವಿಷ್ಯವೇ ಮು[...]ಯುತ್ತದೆ ಎಂದು ಹೆದರಿ, ದಿವಾಕರ್‌ನನ್ನು ನೆಪವ[...]ಗಿಟ್ಟುಕೊಂಡು ಪತ್ರಿಕಾಗೋಷ್ಠಿ ನಡೆಸಿ, ಯಡ್ಡಿಯನ[...] ಪರೋಕ್ಷವಾಗಿ ತರಾಟೆಗೆ ತೆಗೆದುಕೊಂಡರು.

ಹೆದರಿದ ಯಡ್ಡಿ

ತಮ್ಮ ವಿರುದ್ಧ ಜಿಲ್ಲಾ ನಾಯಕರು ಒಂದಾ[...] ಪತ್ರಿಕಾಗೋಷ್ಠಿ ನಡೆಸಿದ್ದನ್ನು ನೋಡಿ ಯಡ್ಡಿ ಬೆಚ್ಚಿಬಿ[...]ದ್ದಾರೆ. ಸುದ್ದಿ ಗೊತ್ತಾಗುತ್ತಿದ್ದಂತೆಯೇ ಶಿವಮೊಗ್ಗ[...] ಕೆಲ ಪತ್ರಕರ್ತರಿಗೆ ಫೋನ್ ಮಾಡಿ, ಯಾವಯಾ[...] ನಾಯಕರು ಏನೇನು ಮಾತನಾಡಿದರು, ಎಲ್ಲಿ ಸಭೆ[...] ನಡೆಸಿದ್ದರು ಎಂಬೆಲ್ಲಾ ಮಾಹಿತಿ ಪಡೆದಿದ್ದಾರೆ. ಇದ[...] ಹಿಂದೆ ಈಶ್ವರಿಯ ಕೈವಾಡವಿದೆಯೇ ಎಂದು ಎರಡೆರಡು[...] ಬಾರಿ ವಿಚಾರಿಸಿಕೊಂಡಿದ್ದಾರೆ.

ಕೂಡಲೇ ಇದ್ದ ಕೆಲಸ ಬಿಟ್ಟು ಶಿಕಾರಿಪುರಕ್ಕೆ ಹೋಗಿ[...] ಒಬ್ಬೊಬ್ಬರೇ ಮುಖಂಡರನ್ನು ಕರೆಸಿ, ಸಮಾಧಾನ ಮಾಡಲು[...] ಯತ್ನಿಸಿದ್ದಾರೆ. ಒಟ್ಟಾರೆ ಈಗ ಒಡೆದ ಮನೆಯಲ್ಲಿ[...] ಅನುಮಾನದ ಹುತ್ತ ಬೆಳೆಯುತ್ತಿದೆ. ಯಡ್ಡಿ ಪಾ[...] ಕಲಿಯುತ್ತಾರಾ ಅಥವಾ ತಮ್ಮ ಪುತ್ರನಿಗೆ ಪಟ್ಟಾಭಿಷೇ[...] ಮಾಡಿಯೇ ತೀರುತ್ತೇನೆಂದು ಹಠ ಸಾಧಿಸುತ್ತಾರಾ[...] ನೋಡಬೇಕು.

■ ವರದಿಗಾ[...]

ಖನಿಜ ನೀತಿ: ರೆಡ್ಡಿಗಳ ಕಾಲಿಗೆ ಬಿದ್ದ ಯಡ್ಡಿ

ಮುಖ್ಯಮಂತ್ರಿ ಯಡ್ಡಿ ಮೇಲೆ ನಿಯಂತ್ರಣ ಸಾಧಿಸುವಲ್ಲಿ ಮತ್ತೆ ಗಣಿಧಣಿಗಳು ಯಶಸ್ವಿಯಾಗಿದ್ದಾರೆ. ತಮಗೆ ಅನುಕೂಲ ಮಾಡಿಕೊಡುವ ಖನಿಜ ನೀತಿಯನ್ನು ಸರ್ಕಾರ ಜಾರಿಗೆ ತರುವಂತೆ ನೋಡಿಕೊಂಡಿದ್ದಾರೆ.

ಯಡ್ಡಿ ಸರ್ಕಾರ ಇವತ್ತು ಅಸ್ತಿತ್ವದಲ್ಲಿದ್ದರೆ ಅದಕ್ಕೆ ರೆಡ್ಡಿ ಪಟಾಲಂ ಕಾರಣ. ಚುನಾವಣೆಯಲ್ಲಿ ಹೇರಳವಾಗಿ ಹಣ ಸುರಿಸಿದ್ದು, ಆನಂತರ ಆಪರೇಶನ್ ಕ'ಮಲ'ದಡಿ ವಿರೋಧ ಪಕ್ಷಗಳ ಶಾಸಕರಿಗೆ ಗಣಿ ದಂಧೆಯ ಹಣ ನೀಡಿ ಬಿಜೆಪಿಯತ್ತ ಸೆಳೆದಿದ್ದು ರೆಡ್ಡಿ ಗುಂಪು ಎಂಬುದು ಈಗ ಎಲ್ಲರಿಗೂ ಗೊತ್ತು, ಆದರೆ ಇದೆಲ್ಲದರಿಂದ ಗೃಹ ಖಾತೆಯನ್ನೊ, ಇತರೆ 'ಲಾಭ'ದಾಯಕ ಇಲಾಖೆಗಳನ್ನೊ ಬಯಸಿದ್ದ ರೆಡ್ಡಿ ಗುಂಪಿಗೆ ಯಡ್ಡಿ ಕೈ ಕೊಟ್ಟಿದ್ದರು. ಬಿಜೆಪಿಯ ಚೆಡ್ಡಿಯೊಳಗೆ ಶುರುವಾದ ಈ ಯಡ್ಡಿ-ರೆಡ್ಡಿಗಳ ಜಗಳದ ನಡುವೆಯೇ ಜಾಗತಿಕ ಹಣಕಾಸು ಬಿಕ್ಕಟ್ಟಿನಿಂದಾಗಿ ಗಣಿ ದಂಧೆಯಿಂದ ರೆಡ್ಡಿಗಳಿಗೆ ಬರುತ್ತಿದ್ದ ಲಾಭ ಕೂಡ ಕಡಿಮೆಯಾಯಿತು. ಈ ಕಾರಣಕ್ಕಾಗಿಯೇ ರೆಡ್ಡಿಗಳು ಬರಲಿರುವ ಉಪಚುನಾವಣೆಗೆ ತಾವು ಹಣ ನೀಡುವುದಿಲ್ಲವೆಂದೂ, ತಮ್ಮಿಂದ ಯಾವ ರೀತಿಯ ನೆರವನ್ನು ನಿರೀಕ್ಷಿಸಬಾರದೆಂದೂ ಯಡ್ಡಿಗೆ ಗುಟುರು ಹಾಕಿದರು.


ಮೊದಮೊದಲು ಯಡ್ಡಿ ಕೂಡ ರೆಡ್ಡಿಗಳ ಬೆದರಿಕೆಗೆ ಕೇರ್ ಮಾಡಲಿಲ್ಲ, ಹೇಗಿದ್ದರೂ ಅಧಿಕಾರ ಸಿಕ್ಕ ನಂತರ ತಮ್ಮ ಪುತ್ರರು ಮತ್ತು ಶಿಷ್ಯೆ ಶೋಭಾ ನೇರವಾಗಿ ಕಮಿಷನ್ ವ್ಯವಹಾರದಲ್ಲಿ ತೊಡಗಿರುವಾಗ, ಈಗಾಗಲೇ ಕೋಟ್ಯಾಂತರ ರೂಪಾಯಿಗಳನ್ನು ಸಂಗ್ರಹಿಸಿರುವಾಗ ರೆಡ್ಡಿಗಳ ಮುಲಾಜು ಯಾಕೆ ಎಂದು ಸುಮ್ಮನಾಗಿದ್ದರು. ಆದರೆ ರಾಜ್ಯದ ಅಧಿಕಾರವನ್ನು ಸಂಪೂರ್ಣವಾಗಿ ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಹೊಂಚು ಹಾಕುತ್ತಿರುವ ರೆಡ್ಡಿಗಳು ಸುಮ್ಮನಿರಬೇಕಲ್ಲ?!

ಇತ್ತೀಚೆಗೆ ಆರೋಗ್ಯ ಸಚಿವ, ಪಕ್ಕಾ ರೌಡಿ ಶ್ರೀರಾಮುಲು ಮುಂದಿನ ಮುಖ್ಯಮಂತ್ರಿ ಎಂದು ಗಾಲಿ ಜನಾರ್ದನ ರೆಡ್ಡಿ ಘೋಷಿಸಿದರು. ಈ ಘೋಷಣೆ ಹೊರಬೀಳುತ್ತಿದ್ದಂತೆಯೇ ಬಿಜೆಪಿಯ ಕೇಂದ್ರ ನಾಯಕರು ಶ್ರೀರಾಮುಲುವನ್ನು ದೆಹಲಿಗೆ ಕರೆಸಿಕೊಂಡು, ಅಲ್ಲಿ ಈ ರೌಡಿಯಿಂದ ಚುನಾವಣಾ ಪ್ರಚಾರ ಭಾಷಣ ಮಾಡಿಸಿದರು. ಶ್ರೀರಾಮುಲುಗೆ ರಾಷ್ಟ್ರ ಮಟ್ಟದಲ್ಲಿಯೂ ಒಂದು ಇಮೇಜ್ ನೀಡಿ, ಆ ಮೂಲಕ ಯಡ್ಡಿಗೆ ಇನ್ನಷ್ಟು ಕಾಟಕೊಡಲು ಅನಂತು ರೂಪಿಸಿದ್ದ ತಂತ್ರ ಇದು ಎಂದು ಚೆಡ್ಡಿಗಳೇ ಮಾತನಾಡಿಕೊಳ್ಳುತ್ತಿದ್ದವು.

ರೆಡ್ಡಿ ಪಡೆ ತನ್ನ ವಿರುದ್ಧ ತಿರುಗಿ ಬೀಳಲಾರಂಭಿಸಿದೆ ಎಂದು ಗೊತ್ತಾಗುತ್ತಿದ್ದಂತೆಯೇ ಎಚ್ಚೆತ್ತ ಯಡ್ಡಿ ಖನಿಜ ನೀತಿಯ ವಿಷಯವನ್ನು ಕೈಗೆತ್ತಿಕೊಂಡು ಗಣಿಧಣಿಗಳನ್ನು ಹೆದರಿಸಲು ನೋಡಿದರು. ಕಳೆದ ವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಖನಿಜ ನೀತಿಯ ವಿಷಯ ಪ್ರಸ್ತಾಪಿಸಲಾಗಿತ್ತು, ಇದಕ್ಕೆ ಗಣಿಧಣಿಗಳು ವಿರೋಧ ವ್ಯಕ್ತಪಡಿಸಿದಾಗ, ಹಿಂದೆಲ್ಲಾ ಗಣಿಧಣಿಗಳು ಆಡಿದ ಮಾತಿಗೆ ಗೋಸುಂಬೆಗಳಂತೆ ತಲೆಯಾಡಿಸುತ್ತಿದ್ದ ಇತರ ಸಚಿವರು ರೆಡ್ಡಿಗಳ ವಿರುದ್ಧ ತಿರುಗಿಬಿದ್ದು ಅವರ ಲಾಭದ ಉದ್ದೇಶವನ್ನು ಟೀಕಿಸುವ ಧೈರ್ಯ ಕೂಡ ತೋರಿಸಿದರು!

ರಾಜ್ಯ ಹೊಸ ಖನಿಜ ನೀತಿ ರೂಪಿಸಿ, ಸಣ್ಣ ರೈತರ ಜಮೀನಿನಲ್ಲಿ ಡಿಗ್ಗಿಂಗ್ ಮಾಡಲು ಅವಕಾಶ ನೀಡಬೇಕು ಎಂಬುದು ಸಚಿವ ಜನಾರ್ದನ ರೆಡ್ಡಿ ವಾದ. ಅಂದರೆ ಸಣ್ಣ ರೈತರಿಗೆ ಕೇವಲ ಡಿಗ್ಗಿಂಗ್‌ಗೆ ಅವಕಾಶ ಮಾಡಿಕೊಟ್ಟರೆ ಅವರು ಹೇಗಿದ್ದರೂ ಗಣಿ ನಡೆಸಲು ಉಪಕರಣಗಳನ್ನು ಹೊಂದಿರುವುದಿಲ್ಲವಾದ್ದರಿಂದ ಅವರೊಂದಿಗೆ ತಾವೇ ನೇರವಾಗಿ ವ್ಯವಹರಿಸಿ ಇನ್ನಷ್ಟು ದುಡ್ಡು ತೆಗೆದುಕೊಳ್ಳಬಹುದು ಎಂಬ ಲೆಕ್ಕಾಚಾರ ರೆಡ್ಡಿಯದ್ದು.

ಅವರ ಈ ಹುನ್ನಾರ ಅರ್ಥವಾಗುತ್ತಿದ್ದಂತೆಯೇ ಇತರೆ ಸಚಿವರು ರೈತರಿಗೆ ಕೇವಲ ಡಿಗ್ಗಿಂಗ್ ಮಾಡಲು ಅವಕಾಶವಿಲ್ಲ; ಅದರ ಜೊತೆಗೆ ಅದಿರು ತೆಗೆಯಲೂ ಲೈಸನ್ಸ್ ನೀಡಬೇಕೆಂದು ಪಟ್ಟು ಹಿಡಿದರು. ಅದಕ್ಕೆ ಅವರೆಲ್ಲ ನೀಡಿದ ಕಾರಣ ಈ ಕ್ರಮದಿಂದ ಅಕ್ರಮ ಗಣಿಗಾರಿಕೆ ತಪ್ಪುತ್ತದೆ ಎಂಬುದು.



ಆಗ ರೆಡ್ಡಿ ಗ್ಯಾಂಗಿನ ತ್ರಿಮೂರ್ತಿಗಳು ಒಂದಾಗಿ "ಹಾಗಾದರೆ ರೈತರಿಗೆ ಲೈಸೆನ್ಸ್ ನೀಡಲೇ ಬಾರದು. ಈ ರೀತಿ ಲೈಸೆನ್ಸ್ ನೀಡಿದರೆ ಗಣಿಗಾರಿಕೆಗೆ ಬೇಕಾಗುವ ನೀರನ್ನು ಎಲ್ಲಿಂದ ತರುತ್ತೀರಿ?" ಎಂಬಂತಹ ರಗಳೆಗಳನ್ನು ತೆಗೆದರು. ಈ ನೆಲದಲ್ಲೇ ಸಂಬಂಧಿಸಿದ ಕಾರ್ಖಾನೆ ಸ್ಥಾಪಿಸುವವರಿಗೆ ಹಾಗೂ ಈಗಾಗಲೇ ಈ ಉದ್ಯಮದಲ್ಲಿ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಬೇಕು ಎಂದು ಬಿಟ್ಟು ಪಟ್ಟು ಹಿಡಿದರು. ಈ ಗಲಾಟೆಯಿಂದ "ನಿಮ್ಮ ಮಾತನ್ನು ನಾವಿನ್ನು ಒಪ್ಪಿಕೊಳ್ಳುವುದಿಲ್ಲ" ಎಂಬ ಸಂದೇಶ ರೆಡ್ಡಿ ಪಡೆಗಳಿಗೆ ರವಾನೆಯಾಗಿತ್ತು, ಹೀಗಾಗಿ ಅಂದು ಯಡ್ಡಿ ಖನಿಜ ನೀತಿ ಪ್ರಸ್ತಾಪ ಕೈಬಿಟ್ಟಿದ್ದರು.

ಇದು ಗಣಿಧಣಿಗಳಿಗೆ ಬಿಜೆಪಿ ಸರ್ಕಾರದಿಂದ ಬಿದ್ದ ಮೊದಲ ಬರೆ ಎಂದೇ ಬಿಜೆಪಿ ನಾಯಕರು ಮಾತನಾಡಿಕೊಳ್ಳುತ್ತಿದ್ದರು. ಈ ಬೆಳವಣಿಗೆಯಿಂದ ರೊಚ್ಚಿಗೆದ್ದ ಗಣಿಧಣಿಗಳು ನೇರವಾಗಿಯೇ ಯಡ್ಡಿ ಜೊತೆ ಮಾತನಾಡಿದ್ದಾರೆ. ತಾವು ಹೇಳಿದಂತೆ ಕೇಳದಿದ್ದರೆ ಉಪಚುನಾವಣೆಯಲ್ಲಿ ಪಕ್ಷ ಗೆಲ್ಲುವುದಿಲ್ಲ ಎಂಬ ಸಂದೇಶ ರವಾನಿಸಿದ್ದಾರೆ. ಜೊತೆಗೆ ಪಕ್ಷದ ಹೈಕಮಾಂಡ್‌ಗೂ ತಮ್ಮ 'ಆಟಗಳ' ಸಿಡಿ ರವಾನಿಸುವುದಾಗಿ 'ಎಚ್ಚರಿಕೆ' ಕೊಟ್ಟಿದ್ದಾರೆ. ಪಕ್ಷದ ಉನ್ನತ ನಾಯಕರನ್ನು ಸಂಪರ್ಕಿಸಿ "ಇದೆಲ್ಲಾ ಸರಿ ಇರೊಲ್ಲಾ" ಎಂದು ಎಚ್ಚರಿಸಿದ್ದಾರೆ.

ಇದರಿಂದ ಬೆಚ್ಚಿಬಿದ್ದ ಯಡ್ಡಿ, ರೆಡ್ಡಿಗಳ ಆಣತಿಯಂತೆ ಖನಿಜ ನೀತಿಯನ್ನು ರೂಪಿಸಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಆಶ್ಚರ್ಯವೆಂದರೆ ಅತ್ಯಂತ ಪ್ರಮುಖವಾದ ಖನಿಜ ನೀತಿಗೆ ಸಚಿವ ಸಂಪುಟದಲ್ಲಿ ಚರ್ಚೆ ಇಲ್ಲದೆ ಒಪ್ಪಿಗೆ ದೊರೆತಿದೆ. ಈ ಒಪ್ಪಿಗೆ ದೊರೆಯುವಾಗ ರೆಡ್ಡಿ ಪಡೆಯ ತ್ರಿಮೂರ್ತಿಗಳಲ್ಲಿ ಉಪಸ್ಥಿತರಿದ್ದವರು ಒಬ್ಬರೇ!

ರೈತರ ಪರವಾಗಿ ಹಿಂದಿನ ಸಂಪುಟ ಸಭೆಯಲ್ಲಿ ಮಾತನಾಡಿದ್ದ ಸಚಿವರಾದ ಕಾರಜೋಳ, ಅರವಿಂದ ಲಿಂಬಾವಳಿ, ನಾಯ್ಡು ಮತ್ತಿತರರು ಬಾಯಿಗೆ ಬೀಗ ಹಾಕಿಕೊಂಡಿದ್ದರು. ಈ ನೀತಿಯನ್ನು ನೋಡಿದರೆ ರೆಡ್ಡಿಗಳಿಗಾಗಿಯೇ ಈ ಖನಿಜ ನೀತಿ ಜಾರಿಗೆ ತಂದಂತಿದೆ.

ರೈತರ ಹೆಸರಿನಲ್ಲಿ ಅಧಿಕಾರ ಹಿಡಿದ ಯಡ್ಡಿಗೆ ನಾಚಿಕೆಯೇ ಇಲ್ಲ! ■

ಮಂಡ್ಯ: ಜೇನುಗೂಡಿಗೆ ದಾದಾನ ಕೈ!

ಪ್ರಾಯಶಃ ಅವನ ನಸೀಬೇ ನೆಟ್ಟಗಿಲ್ಲ ಅಂತ ...ಣುತ್ತೆ. ಅದಕ್ಕೇನೆ ಮಂಡ್ಯದ ಆರ್‌ಟಿಓ ಕಚೇರಿ ...ದುರು ಇರುವ ದಲಿತ ಶ್ರಮಜೀವಿಗಳ ಸ್ಲಮ್ ...ನ್ನ ನುಂಗಿ ನೀರು ಕುಡಿಯಲು ಹೊಂಚು ...ಕಿದ್ದಾನೆ; ದಿನನಿತ್ಯ ಅವರಿಗೆ ಕಿರುಕುಳ ಕೊಡುತ್ತಾ ...ವರ ತಾಳ್ಮೆ ಪರೀಕ್ಷಿಸುತ್ತಿದ್ದಾನೆ. ಪಾಪ ಅವನಿಗೆ ...ತ್ತಿಲ್ಲ ಅಂತ ಕಾಣುತ್ತೆ, ತಾನು ಹೆಜ್ಜೇನು ...ಡಿಗೆ ಕೈಹಾಕುತ್ತಿದ್ದೇನೆಂದು.

ಅವನ ಹೆಸರು ಅನಂತ ಕುಮಾರ್ ದಾದ. ...ಟ್ಟಾಗಿ ಕರೆಯುವುದಾದರೆ ದಾದಾ. ಮಂಡ್ಯ ...ಗರದ ಆರ್‌ಟಿಓ ಕಚೇರಿಯ ಎದುರು ಅಭಿನವ ...ರತಿ ಎಂಬ ವಿದ್ಯಾಸಂಸ್ಥೆ ನಡೆಸುತ್ತಿದ್ದಾನೆ. ಪಕ್ಕಾ ...ಚಿ ಚಡ್ಡಿ ತೊಟ್ಟುಕೊಂಡಿರುವ ಸಂಘಪರಿವಾರಿ. ಅಭಿನವ ಭಾರತಿ ಎಂಬ ಬ್ಲೇಡ್ ಕಂಪೆನಿಯ ...ಸರಿನಲ್ಲಿ ಮಂಡ್ಯ ನಗರದಾದ್ಯಂತ ಹಲವು ...ಗಳಲ್ಲಿ ಹೀಗೆ ಅಮಾಯಕರ ನೆಲ ...ತ್ತಿಕೊಳ್ಳುವುದೇ ಕಾಯಕ ಮಾಡಿಕೊಂಡಿದ್ದಾನೆ.


ದಾದಾ ಈಗ್ಗೆ ಮೂವತ್ತು ವರ್ಷಗಳ ಹಿಂದೆ ...ಟ್ಟುಬಟ್ಟೆಯಲ್ಲಿ ಬಿಹಾರದಿಂದ ಅಂಡಲೆಯುತ್ತಾ ...ದು ಮಂಡ್ಯಕ್ಕೆ ವಕ್ಕರಿಸಿಕೊಂಡವನು. ...ಹಾರದಲ್ಲಿದ್ದಾಗಲೇ ಈತ 'ಆನಂದ ಮಾರ್ಗಿ' ...ಬ ಹಿಂದೂತ್ವ ಭಯೋತ್ಪಾದಕ ಸಂಘಟನೆಗೆ ...ತೃತ್ವ ವಹಿಸಿದ್ದ. ವಾಮಾಚಾರ, ಮಾಟ, ಮಂತ್ರ ...ಡುತ್ತಾ ಮುಗ್ಧ ಜನರ ಮೌಢ್ಯವನ್ನು ...ಡವಾಳ ಮಾಡಿಕೊಂಡು ಅವರನ್ನು ...ಯುತ್ತಿದ್ದ. ಈತ ಬಿಹಾರದಲ್ಲಿ ಎಷ್ಟರಮಟ್ಟಿಗೆ ...ರಿಗೆ ತಲೆನೋವಾಗಿದ್ದ ಎಂದರೆ ಸರ್ಕಾರವೇ ...ವನ 'ಆನಂದಮಾರ್ಗಿ' ಸಂಘಟನೆಯನ್ನು ...ಷೇಧಿಸಬೇಕಾಯಿತು. ಪೊಲೀಸರೂ ದಾದಾನಿಗೆ ...ಲೋಪ್ಲೇನ್ ಹತ್ತಿಸಿ ಪರ್ಮನೆಂಟಾಗಿ ಜೈಲಿಗೆ ...ಟ್ಟಲು ಹುಡುಕಾಡಲಾರಂಭಿಸಿದರು. ಇದರ ...ಸನೆ ಬಡಿದಿದ್ದೇ ತಡ, ...ಗತನಾದ ದಾದಾ ದಕ್ಷಿಣ ...ರತದ ಕಡೆ ...ಮುಖಮಾಡಿದ. ಮಂಡ್ಯ ...ರ ದುರಾದೃಷ್ಟವೋ ...ಲೋ ಅಂತೂ ಅವನ ...ಡಲೆಯುವಿಕೆ ಮಂಡ್ಯಕ್ಕೆ ...ನೆಯಾಯಿತು. ಅಲ್ಲಿಗೆ ...ಡ್ಯ ಜನರಿಗೆ ...ಸದೊಂದು ಸಮಸ್ಯೆ ...ಶವಾಯಿತು.

...ಮಾಟ, ಮಂತ್ರ, ...ಮಾಚಾರ ಎಂದು ...ವನ್ನು ...ಭಯಭೀತಗೊಳಿಸುವಲ್ಲಿ ...ಮನಾದ ದಾದಾ ತನ್ನ ...ಮಂತ್ರಗಳಿಂದಲೇ ...ಡ್ಯದಲ್ಲಿ ನಿಧಾನವಾಗಿ ... ಕಂಡುಕೊಂಡ. ಕೆಲವೇ ವರ್ಷಗಳಲ್ಲಿ ...ನವ ಭಾರತಿ' ಎಂಬ ವಿದ್ಯಾಸಂಸ್ಥೆ ಕಟ್ಟಿಕೊಂಡ. ...ಮ ಒಂದು ಚಿಕ್ಕ ಗುಡಿಸಲಲ್ಲಿ ಪ್ರಾರಂಭವಾದ ... ಸಂಸ್ಥೆ ಇಂದು ದೊಡ್ಡ ದೊಡ್ಡ ಬಿಲ್ಡಿಂಗ್‌ಗಳನ್ನು, ...ಪಾಸ್ತಿಗಳನ್ನು ಹೊಂದಿದೆ ಎಂದರೆ ...ರಮಟ್ಟಿಗೆ ಮಂಡ್ಯ ಜನರನ್ನು ಸುಲಿದಿರಬೇಕು ...ರೀ ಯೋಚಿಸಿ.

...ತನ್ನ ಲೂಟಿ ನಿರಂತರವಾಗಿ, ನಿರಾತಂಕವಾಗಿ ...ಯಬೇಕೆಂದರೆ ರಾಜಕಾರಣಿಗಳನ್ನು, ...ಕಾರಿಗಳನ್ನು ಚೆನ್ನಾಗಿಟ್ಟುಕೊಂಡಿರಬೇಕೆಂಬ ...ವನ್ನು ಚೆನ್ನಾಗಿ ಅರ್ಥಮಾಡಿಕೊಂಡಿರುವ ...ದಾ ಜಿಲ್ಲೆಗೆ ಯಾವುದೇ ರಾಜಕಾರಣಿ ಬರಲಿ, ...ಕಾರಿ ಬರಲಿ ಅವರನ್ನು ತನ್ನ ವಂಚಕ ಕೋಟೆಗೆ ...ಸಿ ಸನ್ಮಾನ ಮಾಡುತ್ತಾನೆ. ನಮ್ಮ ಪೆದ್ದು ...ಕಾರಣಿಗಳಿಗೂ ಅಷ್ಟೇ ಬೇಕಿರುತ್ತದೆ. ...ಧಾರಿಯೊಬ್ಬ ತಲೆ ಮೇಲೆ ಕೈಸವರಿದರೆ ಸಾಕು ...ಸಾದ ಎಂದು ಕಾಲಿಗೆರಗುತ್ತಾರೆ; ನಂತರ ...ದಾ ಮಾಡುವ ಎಲ್ಲಾ ಹಲ್ಕಟ್ ಕೆಲಸಗಳಿಗೂ ...ಾವಲಾಗಿ ನಿಲ್ಲುತ್ತಾರೆ. ವಾಸ್ತವದಲ್ಲಿ ದಾದಾ ...ಹೊತ್ತು ಇಷ್ಟೊಂದು ಬಲಿತಿದ್ದಾನೆ ಎಂದರೆ ...ಕ್ಕೆ ಇಂತಹ ಮತಿಗೇಡಿ ರಾಜಕಾರಣಿಗಳು ...ತ್ತು ಅಧಿಕಾರಿಗಳೇ ಅರ್ಧ ...ಗಾರರಾಗಿದ್ದಾರೆ. ಇವರ ಬೆಂಬಲದಿಂದಲೇ ...ನಾದ್ಯಂತ ಅದೆಷ್ಟೋ ಬಡವರ ನೆಲಗಳು ...ದಾನ ಜೋಳಿಗೆ ಸೇರಿವೆ. ಭೂಮಿ ...ದುಕೊಂಡವರು ಬೀದಿ ಪಾಲಾಗಿದ್ದಾರೆ. ...ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲಂತೂ ದಾದಾ ಮತ್ತಷ್ಟು ಚಿಗುರತೊಡಗಿದ್ದಾನೆ. ಮೊದಲೇ ಮಾಟ, ಮಂತ್ರ, ಹೋಮ, ಹವನ ಎಂದು ವಿಧಾನಸೌಧವನ್ನೂ ಒಳಗೊಂಡಂತೆ ಇಡೀ ರಾಜ್ಯವನ್ನು ಬ್ರಾಹ್ಮಣರ ಗರ್ಭಗುಡಿಯನ್ನಾಗಿ ಪರಿವರ್ತಿಸಿರುವ ಬಜೆಪಿ ಸರ್ಕಾರಕ್ಕೂ, ಈ ದಾದಾಗೂ ಹೇಳಿ ಮಾಡಿಸಿದಂತಿದೆ. ಇದೇ ಅವಕಾಶಕ್ಕಾಗಿ ಕಾಯುತ್ತಿದ್ದನೋ ಏನೋ ತನ್ನ 'ಅಭಿನವ ಭಾರತಿ' ವಿದ್ಯಾಸಂಸ್ಥೆಯ ಪಕ್ಕದಲ್ಲಿರುವ, ದಲಿತರೇ ವಾಸಿಸುವ ಸ್ಲಮ್ ಮೇಲೆ ಈಗ ಈತ ಕಣ್ಣು ಹಾಯಿಸಿದ್ದಾನೆ.

ಬಿಹಾರದಲ್ಲಿ ಜನರನ್ನು ಮುಂಡಾ ಮೋಚಿದಂತೆಯೇ, ಕಳೆದ ಮೂವತ್ತು ವರ್ಷಗಳಿಂದ ಮಂಡ್ಯದ ಜನರಿಗೆ ಟೋಪಿ ಹಾಕಿದಂತೆಯೇ ಕಾಳಪ್ಪ ಬಡಾವಣೆಯ ದಲಿತರನ್ನೂ ಓಡಿಸಬಹುದು ಎಂದುಕೊಂಡಿದ್ದಾನೆ. ಆದರೆ, ದಾದಾ ಕೈಯಿಟ್ಟಿರುವುದು ಜೇನುಗೂಡಿಗೆ ಎಂಬುದು ಪ್ರಾಯಶಃ ಅವನಿಗೆ ಗೊತ್ತಿಲ್ಲ.





ಸಮಾಜ ದ್ರೋಹಿ ಅನಂತಕುಮಾರ್ ದಾದ

ಅದು ಕಾಳಪ್ಪ ಬಡಾವಣೆ!

ಮಂಡ್ಯ ನಗರದ ಆರ್‌ಟಿಓ ಕಚೇರಿಯ ಎದುರು ಈಗ ದಾದಾ ಕಣ್ಣು ಹಾಕಿರುವ ಸ್ಲಮ್ಮಿನ ಹೆಸರು ಕಾಳಪ್ಪ ಬಡಾವಣೆ. ಇಲ್ಲಿನ ಜನ ಸಮಾಜದ ಅತ್ಯಂತ ತಳವರ್ಗದ ದಲಿತ ಸಮುದಾಯಕ್ಕೆ ಸೇರಿದ್ದು ಅಂಗೈಯಷ್ಟು ಜಾಗದಲ್ಲಿಯೇ ಮುರುಕು ಗುಡಿಸಲುಗಳಲ್ಲಿ ಕಳೆದ ಐವತ್ತು ವರ್ಷಗಳನ್ನು ನೂಕಿದ್ದಾರೆ. ಅಂದರೆ, ದಾದಾ ಇನ್ನೂ ಮಂಡ್ಯದ ಮುಖ ನೋಡುವ ಮೊದಲೇ ಇಲ್ಲಿ ಸಂಸಾರ ಮಾಡಿಕೊಂಡಿದ್ದ ಜನ ಅವರು. ತಾವು ಕೊಳಚೆ ಪ್ರದೇಶದಲ್ಲಿದ್ದರೂ ಮಂಡ್ಯ ನಗರದ ಬೀದಿಗಳನ್ನು ಗುಡಿಸಿ ಸ್ವಚ್ಛಗೊಳಿಸುತ್ತಲೇ ಬಂದಿದ್ದಾರೆ. ಸ್ವಾತಂತ್ರ್ಯ ಬಂದು 61 ವರ್ಷಗಳಲ್ಲಿ ಎಷ್ಟೋ ಸರ್ಕಾರಗಳು ಬಂದವು, ಹೋದವು. ಎಲ್ಲರೂ ಚುನಾವಣೆಯ ಸಮಯಕ್ಕೆ ಸರಿಯಾಗಿ ಬಂದು ಈ ಸ್ಲಮ್ ನಿವಾಸಿಗಳಿಗೆ ಉತ್ತಮವಾದ ಮನೆ ಕಟ್ಟಿಸಿಕೊಡುತ್ತೇವೆಂದು ಭರವಸೆಗಳ ಮೇಲೆ ಭರವಸೆ ಕೊಟ್ಟು ಓಟು ಪಡೆದುಕೊಂಡು ಹೋದರು; ಅಂಗೈಯಲ್ಲಿ ಆಕಾಶ ತೋರಿಸಿ ಅವರ ವಿಶ್ವಾಸ ಗೆದ್ದರು. ಕೊನೆಗೆ ಮಾಡಿದ್ದು ಪಕ್ಕಾ ವಿಶ್ವಾಸದ್ರೋಹ. ಇದುವರೆಗೂ ನಮ್ಮನ್ನಾಳಿದ ಸರ್ಕಾರಗಳಿಗೆ ಕಿಂಚಿತ್ತಾದರೂ ಕಾಳಜಿಯಿದ್ದಿದ್ದರೆ ಈ ಸ್ಲಮ್ಮಿನ ಜನ ಅರ್ಧ ಶತಮಾನವನ್ನು ಈ ಹಂದಿಗೂಡುಗಳಂತಹ ಕೊಳಕು ಗುಡಿಸಲುಗಳಲ್ಲಿ ಕಳೆಯುತ್ತಿರಲಿಲ್ಲ.

ಇಲ್ಲಿಯವರೆಗೂ ಆಳಿದ ಸರ್ಕಾರಗಳು ಅವರಿಗೆ ಒಂದು ಪುಟ್ಟ ಮನೆ ಕಟ್ಟಿಸಿಕೊಡಲಿಲ್ಲ ಎಂಬುದು ನಿಜವಾದರೂ ಅವರಿರುವ ತುಂಡು ಜಾಗವನ್ನೇ ಕಿತ್ತುಕೊಳ್ಳುವ ನೀಚತನಕ್ಕಿಳಿದಿರಲಿಲ್ಲ. ಈಗ ಅಧಿಕಾರಕ್ಕೇರಿರುವ ಬಿಜೆಪಿ ಈ ದಲಿತರ ಭೂಮಿಯನ್ನು ಕಿತ್ತುಕೊಂಡು ವಂಚಕ ದಾದಾನ ಪಾದಕ್ಕೆ ಹಾಕುವ ಮೂಲಕ ಎಲ್ಲಾ ರಾಜಕೀಯ ಪಕ್ಷಗಳಿಗಿಂತಲೂ ತಾನು ಭಿನ್ನ, ಕ್ರೂರಿ ಎಂಬುದನ್ನು ಸಾಬೀತು ಮಾಡಲು ಹೊರಟಿದೆ. ಹೇಗಾದರೂ ಮಾಡಿ ಅಮೂಲ್ಯ ಬೆಲೆ ಬಾಳುವ ಈ ಭೂಮಿಯನ್ನು ಏನಾದರೂ ಮಾಡಿ ನುಂಗಿಯೇ ತೀರಬೇಕೆಂದು ಹವಣಿಸುತ್ತಿರುವ ದಾದಾನಿಗೆ ಮಂಡ್ಯ ಜಿಲ್ಲಾಡಳಿತ, ಸ್ಲಮ್ ಬೋರ್ಡ್ ಮತ್ತು ಸರ್ಕಾರ ಬೆಂಬಲವಾಗಿ ನಿಂತಿವೆ.

ಅದು ಜೇನುಗೂಡು!

ಬಿಹಾರದಲ್ಲಿ ಜನರನ್ನು ಮುಂಡಾ ಮೋಚಿದಂತೆಯೇ, ಕಳೆದ ಮೂವತ್ತು ವರ್ಷಗಳಿಂದ ಮಂಡ್ಯದ ಜನರಿಗೆ ಟೋಪಿ ಹಾಕಿದಂತೆಯೇ ಕಾಳಪ್ಪ ಬಡಾವಣೆಯ ದಲಿತರನ್ನೂ ಓಡಿಸಬಹುದು ಎಂದುಕೊಂಡಿದ್ದಾನೆ. ಆದರೆ, ದಾದಾ ಕೈಯಿಟ್ಟಿರುವುದು ಜೇನುಗೂಡಿಗೆ ಎಂಬುದು ಪ್ರಾಯಶಃ ಅವನಿಗೆ ಗೊತ್ತಿಲ್ಲ.

ಕಾಳಪ್ಪ ಬಡಾವಣೆಯ ಜನ ಸ್ವಾಭಿಮಾನಿ ದಲಿತರು. ಬೆವರು ಹರಿಸಿ ಹೊಟ್ಟೆ ತುಂಬಿಕೊಳ್ಳುತ್ತಾರೆಯೇ ಹೊರತು ದಾದಾನಂತೆ ಕಂಡವರ ನೆಲಕ್ಕೆ ಕೈಹಾಕಿ ಕೊಬ್ಬಿದವರಲ್ಲ. ಅಂತೆಯೇ ಸುಖಾಸುಮ್ಮನೆ ತಮ್ಮ ತಂಟೆಗೆ ಬಂದವರನ್ನು ಬಿಡುವವರೂ ಅಲ್ಲ. ಅದೂಅಲ್ಲದೇ ಅವರೀಗ ಒಂಟಿಯಲ್ಲ. ಮಂಡ್ಯ ಸ್ಲಮ್ ನಿವಾಸಿಗಳ ಒಕ್ಕೂಟ, ಕರ್ನಾಟಕ ಜನಪರ ವೇದಿಕೆಯಂತಹ ಸಂಘಟನೆಗಳು ಅವರ ಬೆನ್ನಿಗಿವೆ. ಈಗ ದಾದಾನ ವಿರುದ್ಧ ಅವರು ನಡೆಸುತ್ತಿರುವ ಸ್ವಾಭಿಮಾನಿ ಹೋರಾಟವೇ ಅದಕ್ಕೆ ಜೀವಂತ ನಿದರ್ಶನದಂತಿದೆ.


ದಾದಾ ಕಳೆದ ಎರಡು ವರ್ಷಗಳಿಂದಲೂ ಈ ಭೂಮಿಗಾಗಿ ಸಂಚು ರೂಪಿಸಿದ್ದರೂ ಅದನ್ನು ದಕ್ಕಿಸಿಕೊಳ್ಳುವುದಕ್ಕೆ ಅವನಿಂದ ಆಗಿಲ್ಲ. ಮೊನ್ನೆ ಡಿಸೆಂಬರ್ 6ರಂದು ದಲಿತರ ಸ್ವಾಭಿಮಾನಿ ಚೇತನ ಡಾ.ಬಿ.ಆರ್.ಅಂಬೇಡ್ಕರ್ ಅವರ ಪರಿನಿರ್ವಾಣ ದಿನದಂದೇ ಮತ್ತೆ ಒಟ್ಟಿಗೆ ಸೇರಿದ ಈ ದಲಿತರು 'ನಮ್ಮ ಭೂಮಿ, ನಮ್ಮ ಹಕ್ಕು' ಘೋಷಣೆ ಕೂಗುತ್ತಾ ಹಿಂಡು ಹಿಂಡು ಪೊಲೀಸರಿದ್ದಾಗ್ಯೂ ನೇರವಾಗಿ ಈ ಭೂಮಿಗೆ ನುಗ್ಗಿ ಗುಡಿಸಲುಗಳನ್ನು ಹಾಕಿದ್ದಾರೆ. ಇದನ್ನು ನೋಡಿಯೇ ದಾದಾ ಬೆವೆತುಕೊಂಡಿದ್ದಾನೆ.

ದಾದಾನಿಗೆ ಒಂದು ಕೊನೆಯ ಮಾತು. ಶಿವಮೊಗ್ಗದಲ್ಲೂ ದಲಿತರು ಕಳೆದ ಅರವತ್ತು ವರ್ಷಗಳಿಂದ ನೆಲೆಸಿರುವ ಪಂಚವಟಿ ಕಾಲೋನಿ ಎಂಬ ಸ್ಲಮ್ಮೊಂದಿದೆ. ದಾದಾನಂತೆಯೇ ಅಲ್ಲಿಯೂ ವಿಜಯೇಂದ್ರ ಶೆಣೈ ಎಂಬುವವನು ಆ ಜಾಗ ತನ್ನದು ಎಂದು ಕೋರ್ಟಿಗೆ ಹೋದ. ದಲಿತರು ಮೊದಮೊದಲು ಎಲ್ಲಾ ರಾಜಕಾರಣಿಗಳ, ಅಧಿಕಾರಿಗಳ ಮನೆಮನೆಗೆ ಹೋಗಿ ವರ್ಷಗಟ್ಟಲೇ ಮನವಿ ಮಾಡಿಕೊಂಡರೂ ಏನೂ ಪ್ರಯೋಜನವಾಗಲಿಲ್ಲ. ಕೊನೆಗೆ ಶೆಣೈ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸ್ಲಮ್ ಡೆಮಾಲಿಷನ್‌ಗೆ ಕೋರ್ಟಿನ ಆರ್ಡರ್ ಹಿಡಿದು ಜೆಸಿಬಿ ಯಂತ್ರಗಳನ್ನು ತೆಗೆದುಕೊಂಡು ಬಂದೇ ಬಿಟ್ಟ. ದಲಿತರ ಪಾಲಿಗೆ ಜೀವನ್ಮರಣದ ಹೋರಾಟ ಎದುರಾಗೇ ಬಿಟ್ಟಿತು. ಶೆಣೈಯನ್ನು ಅಟಕಾಯಿಸಿಕೊಂಡ ದಲಿತರು ಎಷ್ಟರಮಟ್ಟಿಗೆ ಚಚ್ಚಿ ಹಾಕಿದರೆಂದರೆ ಆ ಹೊತ್ತಿನಿಂದ ಆತ ಪಂಚವಟಿ ಸ್ಲಮ್ ಕಡೆ ತಲೆ ಹಾಕಿ ಮಲಗುವುದನ್ನೇ ಬಿಟ್ಟ. ಮತ್ತೆ ಅತ್ತ ಹೋದರೆ ತನ್ನ ಹೆಂಡತಿ ವಿಧವೆಯಾಗುವುದು, ಮಕ್ಕಳು ಅನಾಥವಾಗುವುದು ಅವನಿಗೆ ಗ್ಯಾರಂಟಿಯಾಗಿತ್ತು.

ದಾದಾ ಹೀಗೆ ಮುಂದುವರೆದರೆ ಕಾಳಪ್ಪ ಬಡಾವಣೆ ಮತ್ತೊಂದು ಪಂಚವಟಿಯಾಗುತ್ತದೆ; ದಾದಾ ಮತ್ತೊಬ್ಬ ನತದೃಷ್ಟ ಶೆಣೈ ಆಗುತ್ತಾನೆ.

■ ವಾಸು

ಡಿಸಿ ತಮ್ಮಣ್ಣನಿಗೆ ಉರುಳು



ಅತ್ತ ಮದ್ದೂರಿನಲ್ಲಿ ಉಪಚುನಾವಣೆಯ ಕಾವೇರುತ್ತಿದ್ದರೆ ಇತ್ತ ಮಂಡ್ಯದಲ್ಲಿ ದಲಿತರು ಮತ್ತು ದಾದಾನ ನಡುವೆ ಬೀದಿಕಾಳಗ ನಡೆಯುತ್ತಿದೆ. ಇದು ಮಂಡ್ಯ ನಗರಕ್ಕೆ ಮಾತ್ರವಲ್ಲ ಪಕ್ಕದ ಮದ್ದೂರು ಉಪಚುನಾವಣೆಯ ಮೇಲೂ ಪ್ರಭಾವ ಬೀರಲಿದೆ.

ಈಗಾಗಲೇ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಸ್ಲಮ್ ಜನರ ಹೋರಾಟಕ್ಕೆ ಬಹಿರಂಗ ಬೆಂಬಲ ವ್ಯಕ್ತಪಡಿಸಿದ್ದಾರೆ. ಮಾಜಿ ಶಾಸಕ ಅನ್ನದಾನಿ ಪತ್ರಿಕಾಗೋಷ್ಠಿ ನಡೆಸಿ ಹೋರಾಟಕ್ಕೆ ಬೆಂಬಲಿಸಿದ್ದಾರೆ. ಮಂಡ್ಯದ ದಲಿತ ಪೌರಕಾರ್ಮಿಕರ ನೆಲ ನುಂಗಲು ಹೊರಟಿರುವ ದಾದಾನಿಗೆ ಸಂಘಪರಿವಾರ ಮತ್ತು ಬಜೆಪಿ ಬೆಂಬಲಿಸುತ್ತಿರುವುದರಿಂದ ಮದ್ದೂರು ಪೌರಕಾರ್ಮಿಕರು ಬಜೆಪಿ ಅಭ್ಯರ್ಥಿ ಡಿ.ಸಿ.ತಮ್ಮಣ್ಣನಿಗೆ ಓಟು ಹಾಕುವುದಿಲ್ಲವೆಂದು ಬಹಿರಂಗವಾಗಿ ಹೇಳಿದ್ದಾರೆ. ಡಿ.ಸಿ.ತಮ್ಮಣ್ಣ ಇತ್ತೀಚೆಗೆ ಬಜೆಪಿ ಸೇರಿದ್ದನಾದರೂ ಹಿಂದಿನ ಚುನಾವಣೆಯಲ್ಲಿ ಇದೇ ಪೌರಕಾರ್ಮಿಕರು ಅವನನ್ನು ಬೆಂಬಲಿಸಿದ್ದರು. ಆದರೆ ಈಗ ಆತ ದಾದಾನಿಗೆ ಬೆಂಗಾವಲಾಗಿರುವುದರಿಂದ ಯಾವೊಬ್ಬ ಪೌರಕಾರ್ಮಿಕನೂ ಅವನಿಗೆ ಓಟು ನೀಡುವುದಿಲ್ಲ.

ಜೆಡಿಎಸ್‌ನ ಕಲ್ಪನಾ ಸಿದ್ಧರಾಜು ಅವರ ಅಲೆಯಲ್ಲಿ ತಮ್ಮಣ್ಣ ಗೆಲ್ಲುವುದೂ ಅಷ್ಟರಲ್ಲಿಯೇ ಇದೆ. ಆದರೆ, ಮಂಡ್ಯ ದಲಿತರ ಹೋರಾಟಕ್ಕೆ ಆತ ಬೆಂಬಲ ಸೂಚಿಸಿದರೆ, ಬಹಿರಂಗವಾಗಿ ದಾದಾನ ವಿರುದ್ಧ ತಿರುಗಿಬಿದ್ದರೆ ತನಗೆ ಈ ಹಿಂದೆ ಬೆಂಬಲಿಸಿದ್ದ ಮದ್ದೂರಿನ ಪೌರಕಾರ್ಮಿಕರ ಓಟುಗಳಾದರೂ ಬೀಳುತ್ತವೆ ಎನ್ನುವ ಭರವಸೆಯಾದರೂ ಉಳಿಯುತ್ತದೆ.

ಹಲವು ವೈರುಧ್ಯಗಳ ವಿಶ್ವನಾಥರೆಡ್ಡಿ ಮುದ್ನಾಳ್



ಹೈದ್ರಾಬಾದ್ ಕರ್ನಾಟಕದ ಪ್ರಮುಖ ರಾಜಕೀಯ ಮುಖಂಡರಲ್ಲಿ ಒಬ್ಬರಾಗಿದ್ದ ವಿಶ್ವನಾಥರೆಡ್ಡಿ ಮುದ್ನಾಳ್ ತೀರಾ ಇತ್ತೀಚೆಗೆ ನಿಧನರಾಗಿದ್ದಾರೆ. ನೇತಾಜಿ ಸುಭಾಶ್ಚಂದ್ರ ಬೋಸ್ ಅವರ ಆದರ್ಶಗಳಿಗೆ ಮಾರುಹೋಗಿದ್ದ ಮುದ್ನಾಳ್ ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬದುಕುಬೇಕೆಂದು ತೀವ್ರವಾಗಿ ಪ್ರಯತ್ನಿಸಿದ್ದವರು.

ಹೈದ್ರಾಬಾದ್ ಕರ್ನಾಟಕ ಏಕೀಕರಣವಾಗುವುದಕ್ಕಿಂತ ಮುಂಚೆ ನಿಜಾಮನ ಆಡಳಿತ ವಿರುದ್ಧ ಬಂಡೆದ್ದು, ಸ್ವಾಮಿ ರಮಾನಂದ ತೀರ್ಥರು ಹಾಗೂ ಇನ್ನಿತರರ ಜೊತೆ ಸೇರಿಕೊಂಡು ವ್ಯವಸ್ಥಿತವಾದ ಚಳವಳಿಯನ್ನೇ ಈ ಭಾಗದಲ್ಲಿ ರೂಪಿಸಿದ್ದರು. ಈ ಕಾರಣಕ್ಕಾಗಿಯೆ ಅವರು ಹಲವಾರು ಸಲ ಜೈಲು ಸೇರಿದ್ದರು ಕೂಡ.

ಪ್ರತಿಭಟನೆಯ ಮನೋಭಾವವನ್ನು ಹೊಂದಿದ್ದ ಮುದ್ನಾಳ್ ಯಾವುದೇ ಸಂಗತಿ - ಘಟನೆಯನ್ನು ಮನ ಬಂದಂತೆ ಸ್ವೀಕರಿಸದೆ ಅದರ ಎಲ್ಲಾ ಮಗ್ಗಲುಗಳನ್ನು ನೋಡಿ ತಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದರು. ಯಾವುದೆ ಸಂಗತಿ ಜನಸಾಮಾನ್ಯರಿಗೆ ಮಾರಕವಾಗುತ್ತದೆ ಎಂದಾದರೆ ಅದರ ವಿರುದ್ಧ ಬಂಡೇಳುವ ಶಕ್ತಿ ಮುದ್ನಾಳ್ ಅವರಿಗಿತ್ತು, ''ನ್ಯಾಯ ನಿಷ್ಠುರಿ ದಾಕ್ಷಿಣ್ಯ ಪರನಲ್ಲ'' ಎಂಬ ಮಾತಿನಂತೆ ಯಾರದೇ ಮರ್ಜಿಗೆ ಒಳಗಾಗಿ ಅವರು ಸುಮ್ಮನೆ ಕೂಡುತ್ತಿರಲಿಲ್ಲ, ತಾವು ನಂಬಿಕೊಂಡು ಬಂದ ತತ್ವ ಆದರ್ಶಗಳನ್ನು ಚಾಲ್ತಿಗೆ ತರುವಾಗ ಯಾರೆಷ್ಟೇ ಎಗರಾಡಿದರೂ ಕೇರ್ ಮಾಡದ ದಾಷ್ಟ್ಯ ಅವರಲ್ಲಿ ಮನೆ ಮಾಡಿತ್ತು.

ಈ ಎಲ್ಲಾ ಕಾರಣಗಳಿಗಾಗಿಯೆ ಯಾದಗಿರಿ ಮತಕ್ಷೇತ್ರದ ಜನತೆ ಹೈದ್ರಾಬಾದ್ ಕರ್ನಾಟಕ ರಾಜ್ಯದಲ್ಲಿ ವಿಲೀನಗೊಂಡ ತರುವಾಯ 1967 ರಿಂದ ಸತತವಾಗಿ ಮೂರು ಸಲ ಮುದ್ನಾಳ್‌ರನ್ನು ಶಾಸಕರನ್ನಾಗಿ ಆಯ್ಕೆ ಮಾಡಿ ಕಳಿಸಿದರು. 1985 ರಲ್ಲಿ ರಾಮಕೃಷ್ಣ ಹೆಗಡೆಯವರ ಸಂಪುಟದಲ್ಲಿ ಪಶುಸಂಗೋಪನ ಮಂತ್ರಿಯೂ ಆಗಿದ್ದರು. ಆದರೆ ಅದೇನು ಕಾರಣವೋ ಮಂತ್ರಿಯಾಗಿ ಮುದ್ನಾಳ್ ರಾಜ್ಯ ರಾಜಕೀಯದಲ್ಲಿ ತನ್ನ ಛಾಪು ಮೂಡಿಸಿಕೊಳ್ಳಲಿಲ್ಲ. ಇವರು ಹೇಳಿಕೊಂಡು ಬರುತ್ತಿದ್ದ ನೇತಾಜಿಯ ಆದರ್ಶಗಳಾಗಲಿ, ಬಸವಾದಿ ಶರಣರ ವಿಚಾರಗಳಾಗಲಿ ಬೇರೊಬ್ಬರನ್ನು ಅದೇಕೋ ಪ್ರಭಾವಿಸಲಿಲ್ಲ, ಅನೇಕವೇಳೆ ಇವರು "ಅಸ್ಪೃಶ್ಯತೆ ನಿವಾರಣೆ ಆಗುವವರೆಗೆ ಹಾಗೂ ಸಮಾಜದಲ್ಲಿ ಭ್ರಷ್ಟಾಚಾರ ನಿಲ್ಲುವವರೆಗೆ ಬಿಳಿಯ ಬಟ್ಟೆಯನ್ನೇ ಧರಿಸುವೆ" ಎಂದು ಶಪಥತೊಟ್ಟು ಅದರಂತೆ ನಡೆದುಕೊಂಡರು. ವಿಪರ್ಯಾಸವೆಂದರೆ ಭ್ರಷ್ಟಾಚಾರದ, ಅಸ್ಪೃಶ್ಯತೆ ಬೇರುಗಳು ಅವರ ಒಳ ಮನೆಯಲ್ಲಿಯೆ ಬೆಳೆಯತೊಡಗಿದ್ದವು.

ಪತ್ರಿಕೆಯ ಮೂಲಕ ಸಮಾಜ ಸುಧಾರಣೆ ಸಾಧ್ಯವಾಗಬಹುದೆಂದು ಹಂಬಲಿಸಿ ಬಿ.ಮಹಾದೇವಪ್ಪನನ್ನು ಸಂಪಾದಕನನ್ನಾಗಿಸಿಕೊಂಡು ವಿಶ್ವಕಲ್ಯಾಣ ಎಂಬ ವಾರಪತ್ರಿಕೆಯನ್ನು ಆರಂಭಿಸಿ, 25 ವರ್ಷಗಳ ಕಾಲ ಅದನ್ನು ನಡೆಸಿಕೊಂಡು ಬಂದರು. ಆದರೆ ಅದೇಕೋ 'ವಿಶ್ವಕಲ್ಯಾಣ' ಪತ್ರಿಕೆ ಈ ಭಾಗದ ಜನಗಳ ಜೀವನಾಡಿ ಆಗುವುದಕ್ಕೆ ಹೊರತಾಗಿ ''ವಿಶ್ವನಾಥರೆಡ್ಡಿ ಕಲ್ಯಾಣ ಪತ್ರಿಕೆ'' ಎಂಬಂತಾಗಿ ಹೋಯಿತು. ಅನೇಕ ಜನ ಈ ಪತ್ರಿಕೆ ಮಂಡಿಸುವ ವಿಚಾರಧಾರೆಯನ್ನು ಒಪ್ಪಿಕೊಂಡು ಪತ್ರಿಕೆ ಕೊಳ್ಳುವುದಕ್ಕೆ ಬದಲಾಗಿ, ವಿಶ್ವನಾಥರೆಡ್ಡಿ ಮುದ್ನಾಳ್‌ರ ನಿಷ್ಠುರತನವನ್ನು ಏಕೆ ಕಟ್ಟಿಕೊಳ್ಳೋಣ? ಎಂದೇ ಪತ್ರಿಕೆಗೆ ಚಂದಾದಾರರಾಗುತ್ತಿದ್ದರು. ಹೀಗಾಗಿ ಇದರಲ್ಲೂ ರೆಡ್ಡಿ ಯಶಸ್ವಿಯಾಗಲಿಲ್ಲ.

ಅಖಿಲ ಭಾರತ ವೀರಶೈವ ಮಹಾಸಭೆಯ ಗೌರವ ಉಪಾಧ್ಯಕ್ಷರಾಗಿ ಹಾಗೂ 'ಬಸವ ಸಮಿತಿ'ಯ ಮುಖಂಡರಾಗಿ ಸಮಾಜಕ್ಕೆ ಸ್ಪಷ್ಟವಾದ ತಿಳಿವಳಿಕೆ ನೀಡುವುದಕ್ಕಿಂತ ಅದನ್ನೊಂದು ಕಮರ್ಷಿಯಲ್ ಸಂಘಟನೆಯನ್ನಾಗಿ ರೂಪಿಸುವುದರಲ್ಲೂ ವಿಶ್ವನಾಥರೆಡ್ಡಿ ಮತ್ತು ಭೀಮಣ್ಣ ಖಂಡ್ರೆಯ ಪಾಲಿದೆ. 'ಬಸವ ಸಮಿತಿ'ಯಲ್ಲಿದ್ದುಕೊಂಡು ಬಸವಾದಿ ಶರಣರ ವಿಚಾರಗಳನ್ನು ಪ್ರಚುರಪಡಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳುವ ಬದಲಾಗಿ ಬಸವ ವಿರೋಧಿಗಳಾದ ಪಂಚಾಚಾರ್ಯರ ಪಲ್ಲಕ್ಕಿ ಹೊತ್ತು ಮೆರೆಸಿದ್ದೆ ಇವರ ಸಾಧನೆಯಾಯಿತು. ಅಲ್ಲದೆ ತಾವು ಕೊನೆ ಉಸಿರೆಳೆಯುವವರೆಗೆ ಬಸವ ಸಮಿತಿಯನ್ನು ಒಂದು ಊರುಗೋಲನ್ನಾಗಿ ಮಾಡಿಕೊಂಡಿದ್ದರೆ ವಿನಃ ಅದಕ್ಕೆ ಮುದ್ನಾಳ್‌ರ ಕೊಡುಗೆ ಏನೂ ಇರಲಿಲ್ಲ. ಜಗದ್ಗುರುಗಳ ಸಂಪ್ರೀತಿಗೆ ಪಾತ್ರರಾಗಬೇಕೆಂದು ಬಯಸಿ ತಮ್ಮ ಒಡ್ಡೋಲಗದಲ್ಲಿ ನೇಮಿಸಿಕೊಂಡಿದ್ದ ಬರಹಗಾರ ಬಿ.ಮಹಾದೇವಪ್ಪನಿಂದ ''ಬಸವಣ್ಣ ಮೂಲತಃ ಲಿಂಗಾಯತನಾಗಿದ್ದ'' ಎಂಬ ಕಳಪೆ ಸಂಶೋಧನೆ ಮಾಡಿಸಿ, ಎಲ್ಲರಿಂದಲೂ ಹೆಟ್ಟಿಸಿಕೊಂಡಿದ್ದರು. ಕೋರ್ಟ್ ಕೂಡ ಇವರ ಅಡಗೂಲಜ್ಜಿ ಕಥೆಯನ್ನು ತಿರಸ್ಕರಿಸಿ ಅವಮರ್ಯಾದೆ ಮಾಡಿತ್ತು.

ಯಾವುದೇ ವ್ಯಕ್ತಿ ಎಷ್ಟೇ ಪ್ರಾಮಾಣಿಕನಾಗಿರುವೆನೆಂದು ತಿಳಿದುಕೊಂಡಿದ್ದರೂ ಆತ ಸಾಮಾಜಿಕ-ಧಾರ್ಮಿಕ ವಿಚಾರಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳದೆ ತಾನು ತಿಳಿದುಕೊಂಡದ್ದೆ ಸತ್ಯ ಎಂಬ ಹಠಮಾರಿತನಕ್ಕೆ ಬಿದ್ದರೆ ಏನಾಗುತ್ತದೋ ಅದು ಮುದ್ನಾಳ್ ಅವರ ಜೀವನದಲ್ಲೂ ಆಯಿತು. ಹೀಗಾಗಿಯೇ ಹಿಂದೊಮ್ಮೆ ಜನಸಾಮಾನ್ಯರಿಂದ ಕಿಕ್ಕಿರಿದು ತುಂಬಿಕೊಳ್ಳುತ್ತಿದ್ದ ಅವರ ಗೋದಾಮ್ ಕೊನೆ ಕೊನೆ ಬಣಬಣ ಅನ್ನುತ್ತಿತ್ತು.

ಇದೇನೇ ಇದ್ದರೂ ಇಂದಿನ ರಾಜಕಾರಣಿಗಳಂತೆ ತೀರಾ ಬಗ್ಗಡಗೊಂಡು ಜೀವನ ಸಾಗಿಸದೆ ಕನಿಷ್ಠ ಮೌಲ್ಯಗಳನ್ನು ಇಟ್ಟುಕೊಂಡು ರಾಜಕೀಯದಲ್ಲಿ ತನ್ನದೆ ಆದ ಛಾಪು ಮೂಡಿಸಿದ ಮುದ್ನಾಳ್ ಅವರ ಮರಣದಿಂದ ಹೈದ್ರಾಬಾದ ಕರ್ನಾಟಕ ನಿಜಕ್ಕೂ ಬಡವಾಗಿದೆ.

■ ವಿಶ್ವಾರಾಧ್ಯ ಸತ್ಯಂಪೇಟೆ




ಆಟೋಗಳಿಗೆ ಎಲ್‌ಪಿಜಿ ಕಡ್ಡಾಯ

ಅಶೋಕನ ಕಮಾಯಿ ದಂಧೆ

ಯಾವುದೇ ಪೂರ್ವ ತಯಾರಿಯಿಲ್ಲದೇ ಕೇವಲ ಕಮೀಷನ್ನಿಗಾಗಿ, ಪ್ರಚಾರಕ್ಕಾಗಿ ತರುವ ನಿಯಮಗಳು ಹೇಗೆ ಅಮಾಯಕರ ಜೀವನವನ್ನು ಬರ್ಬಾದ್ ಮಾಡುತ್ತವೆ ಎಂಬುದಕ್ಕೆ ಪ್ರಸ್ತುತವಾಗಿ ರಾಜ್ಯಾದ್ಯಂತ ಆಟೋ ಮಾಲಿಕರು, ಚಾಲಕರು ಅನುಭವಿಸುತ್ತಿರುವ ರೋದನೆಯೇ ನಿದರ್ಶನವಾಗಿದೆ. ಆಟೋಗಳಿಂದ ವಾಯುಮಾಲಿನ್ಯವಾಗುತ್ತದೆ ಎಂದು ಹುಯಿಲೆಬ್ಬಿಸಿರುವ ಸರ್ಕಾರ ಆಟೋಗಳಿಗೆ ಕಡ್ಡಾಯವಾಗಿ ಎಲ್‌ಪಿಜಿ ಕಿಟ್ ಅಳವಡಿಸಬೇಕೆಂದು ತಾಕೀತು ಮಾಡಿದೆ. ಆದರೆ, ಈ ನಿಯಮ ಬೇರೆ ಆಟೋ ಮತ್ತು ಕ್ಯಾಬ್‌ಗಳನ್ನು ಹೊರತುಪಡಿಸಿ ಉಳಿದ ವಾಹನಗಳಿಗೆ ಅನ್ವಯಿಸುವುದಿಲ್ಲವಂತೆ. ಅಂದರೆ, ಉಳಿದ ವಾಹನಗಳಿಂದ ವಾಯುಮಾಲಿನ್ಯವಾಗುತ್ತಿಲ್ಲವೆ?



ಮೈಸೂರು, ಹುಬ್ಬಳ್ಳಿ-ಧಾರವಾಡ, ಬೆಳಗಾಂವ್, ಗುಲ್ಬರ್ಗಾ, ಮಂಗಳೂರು, ಉಡುಪಿ, ತುಮಕೂರು, ದಾವಣಗೆರೆ, ಪುತ್ತೂರು, ಶಿವಮೊಗ್ಗ, ಹಾಸನಗಳ ಆರ್‌ಟಿಓ ಕಚೇರಿಗಳಲ್ಲಿ 01-04-2004ರಿಂದ 31-05-2008ರ ತನಕ ನೊಂದಣಿಯಾದ 27,067 ಆಟೋಗಳಿಗೆ ಕಡ್ಡಾಯವಾಗಿ ಎಲ್‌ಪಿಜಿ ಕಿಟ್ ಅಳವಡಿಸುವಂತೆ ತಾಕೀತು ಮಾಡಲಾಗಿದೆ. ಅದೂ 31-03-2009ರ ಒಳಗೆ ಕಿಟ್ ಅಳವಡಿಸದಿದ್ದರೆ ಪರ್ಮಿಟ್ಟನ್ನೇ ರದ್ದುಗೊಳಿಸಲಾಗುವುದೆಂಬ ಬೆದರಿಕೆಯನ್ನೂ ಸಾರಿಗೆ ಇಲಾಖೆಯ ಎಂ.ಆರ್.ಚಂದ್ರಶೇಖರಾಧ್ಯ ಅವರು ಹುಕುಂ ಹೊರಡಿಸಿದ್ದಾರೆ. ಇಂತಹದ್ದೊಂದು ಆದೇಶ ಹೊರಬೀಳುತ್ತಿದ್ದಂತೆಯೇ ಕಾರ್ಯಪ್ರವೃತ್ತರಾಗಿರುವ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಎಲ್‌ಪಿಜಿ ಕಿಟ್ ಒದಗಿಸುವ ಡಿಸ್ಟ್ರಿಬ್ಯೂಟರ್‌ಗಳಿಗೆ ದುಂಬಾಲು ಬಿದ್ದು ಹಣ ಪೀಕುತ್ತಿದ್ದಾರೆ.



ಇದು ಮೇಲ್ನೋಟಕ್ಕೆ ಪರಿಸರ ಸ್ನೇಹಿ ನಿಯಮ ಎಂದು ಕಾಣುತ್ತಿದ್ದರೂ ಒಳಗಿನ ಅಸಲಿಯತ್ತೇ ಬೇರೆಯಿದೆ. ಕೆಲವು ನಿರ್ದಿಷ್ಟ ಕಂಪೆನಿಗಳು ತಯಾರಿಸಿರುವ ಹಾಗೂ ಅಧಿಕೃತವಾಗಿ ಸಾರಿಗೆ ಅಧಿಕಾರಿಗಳು ದೃಢೀಕರಿಸಿರುವ ಡಿಸ್ಟ್ರಿಬ್ಯೂಟರ್‌ಗಳಿಂದಲೇ ಎಲ್‌ಪಿಜಿ ಕಿಟ್‌ಗಳನ್ನು ಖರೀದಿಸಬೇಕೆಂದು ನಿಬಂಧನೆ ಹೇರಲಾಗಿದೆ. ಅಂದರೆ, ಎಲ್‌ಪಿಜಿ ಕಿಟ್ ತಯಾರಿಸಿರುವ ಕಂಪೆನಿಗಳು ಮತ್ತು ಡಿಸ್ಟ್ರಿಬ್ಯೂಟರ್‌ಗಳು ಸಾರಿಗೆ ಸಚಿವ ಆರ್.ಅಶೋಕ್ ಮತ್ತು ಸಾರಿಗೆ ಇಲಾಖೆಯ ಉನ್ನತ ಅಧಿಕಾರಿಗಳಿಗೆ ಪ್ರಸಾದ ಸಲ್ಲಿಸಿ ಇಂತಹ ಒಂದು ಆದೇಶ ಬರುವಂತೆ ನೋಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ.

ಒಂದೊಂದು ಎಲ್‌ಪಿಜಿ ಕಿಟ್‌ನ ಬೆಲೆಯನ್ನು 14,000 ರೂಪಾಯಿ ಎಂದು ನಿಗದಿ ಮಾಡಲಾಗಿದೆ. ಅಂದರೆ ಸಾವಿರಾರು ಸಂಖ್ಯೆಯಲ್ಲಿರುವ ಆಟೋಗಳು, ಕ್ಯಾಬ್‌ಗಳು ಈ ಕಿಟ್ಟನ್ನು ಕಡ್ಡಾಯವಾಗಿ ಖರೀದಿಸಿದರೆ ಕಂಪೆನಿಗಳಿಗೆ ಕೋಟ್ಯಂತರ ರೂಪಾಯಿಗಳ ವ್ಯವಹಾರ ನಡೆಯುತ್ತದೆ. ಅಂತೆಯೇ ಆರ್.ಅಶೋಕ್‌ಗೂ ಗಣನೀಯ ಪ್ರಮಾಣದ ಕಮೀಷನ್ ಸಿಗುತ್ತದೆ. ಈಗಾಗಲೇ ತೆರಿಗೆ, ಬಿಡಿಭಾಗಗಳ ಬೆಲೆಯೇರಿಕೆ, ತೈಲಬೆಲೆ ಏರಿಕೆ ಮುಂತಾದವುಗಳಿಂದ ಸುಸ್ತಾಗಿರುವ ಆಟೋ, ಕ್ಯಾಬ್ ಮಾಲಿಕರು ಇಷ್ಟೊಂದು ಬೃಹತ್ ಮೊತ್ತದ ದುಡ್ಡನ್ನು ಹೊಂದಿಸುವುದಾದರೂ ಹೇಗೆ? ಇದು ಆರ್.ಅಶೋಕ್ ಬಡ ಆಟೋ, ಕ್ಯಾಬ್ ಮಾಲಿಕರನ್ನು, ಚಾಲಕರನ್ನು ಸುಲಿಯುತ್ತಿರುವ ಪರಿ.

ಪರಿಸರ ರಕ್ಷಣೆಯ ಹೆಸರಿನಲ್ಲಿ ಈಗಾಗಲೇ ಹ[illegible] ಆಟೋಗಳಿಂದ ಪ್ರತೀ ವರ್ಷ ತಲಾ 200 ರೂ.ನಂ[illegible] ಗ್ರೀನ್ ಟ್ಯಾಕ್ಸ್ ವಸೂಲಿ ಮಾಡಲಾಗುತ್ತಿದೆ. ಈಗ ಹೊಸ ಆಟೋಗಳನ್ನು ಸುಲಿಯುವ ಕೆಲಸ ಭರದಿಂದ ಸಾಗಿದೆ.

ಈ ಹಿಂದೆ ಇದೇ ಪರಿಸರ ರಕ್ಷಣೆಯ ಹೆಸರಿನಲ್ಲಿ ಬೆಂಗಳೂರಿನಲ್ಲಿರುವ ಲಕ್ಷಾಂತರ ಸಂಖ್ಯೆಯ ಆಟೋಗಳಿಗೆ ಎಲ್‌ಪಿಜಿ ಗ್ಯಾಸ್ ಕಿಟ್ ಅಳವಡಿಸುವ ಮೂಲಕ ಸಾರಿಗೆ ಅಧಿಕಾರಿಗಳು, ಸಚಿವರು ಜಬರ್ದಸ್ತಾಗಿ ನುಂಗಿ ನೀರು ಕುಡಿದಿದ್ದರು. ಇದಕ್ಕಾಗಿ ಆಗ ಬೆಂಗಳೂರಿನ ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳಿಂದ ಸಾಲ ಕೊಡಿಸುವ ಮೂಲಕ ಸಹಾಯದ ನಾಟಕವಾಡುತ್ತಲೇ ಆಟೋ ಮಾಲಿಕರನ್ನು ಸಾಲದ ಶೂಲಕ್ಕೆ ಸಿಲುಕಿಸಿದ್ದರು. ಅಲ್ಲಿ ಮೇಯ್ದು ರುಚಿ ಕಂಡಿರುವ ಸಾರಿಗೆ ಅಧಿಕಾರಿಗಳು ಈಗ ರಾಜ್ಯದ ಉಳಿದ ಭಾಗಗಳಲ್ಲೂ ಇದೇ ಮೇಯುವಿಕೆ ಮುಂದುವರೆಸಲು ಈ ಆದೇಶ ಜಾರಿಗೆ ತಂದಿದ್ದಾರೆ.


ಈ ಆದೇಶದಿಂದ ಆಗುವ ಇನ್ನೊಂದು ತೊಂದರೆ ನೋಡಿ. ಎಲ್ಲೆಲ್ಲಿ ಎಲ್‌ಪಿಜಿ ಕಿಟ್ ಅಳವಡಿಸುವ ಕೇಂದ್ರಗಳಿವೆಯೋ, ಎಲ್ಲೆಲ್ಲಿ ಎಲ್‌ಪಿಜಿ ಇಂಧನ ಪೂರೈಕೆಯ ಕೇಂದ್ರಗಳಿವೆಯೋ ಅಲ್ಲಲ್ಲಿ ಮಾತ್ರ ಕಿಟ್ ಅಳವಡಿಸಬೇಕೆಂದು ಆದೇಶದಲ್ಲಿ ತಿಳಿಸಲಾಗಿದೆ. ಈಗ ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ಪರಿಸ್ಥಿತಿಯನ್ನೇ ತೆಗೆದುಕೊಳ್ಳಿ. ಇಲ್ಲಿ ಈ ನಗರಗಳ ಮಧ್ಯಭಾಗದಲ್ಲಿರುವ ಪ್ರಭಾತ ಎಂಬ ಗ್ಯಾಸ್ ಪೂರೈಕೆಯ ಕೇಂದ್ರವನ್ನು ಬಿಟ್ಟರೆ ಇಡೀ ಅವಳಿ ನಗರಗಳಲ್ಲಿ ಎಲ್ಲೂ ಗ್ಯಾಸ್ ರೀಫಿಲ್ಲಿಂಗ್ ಕೇಂದ್ರಗಳಿಲ್ಲ. ಎಲ್ಲಾ ಆಟೋಗಳಿಗೂ ಎಲ್‌ಪಿಜಿ ಕಿಟ್ ಅಳವಡಿಸಿಬಿಟ್ಟರೆ ಅವರು ಗ್ಯಾಸ್ ತುಂಬಿಸಿಕೊಳ್ಳುವುದಕ್ಕೆ ಎಲ್ಲಿಗೆ ಹೋಗಬೇಕು? ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ, ಇನ್ನೊಂದು ಗಂಭೀರವಾದ ಸಮಸ್ಯೆಯನ್ನು ಸೃಷ್ಟಿಸಿದಂತಾಗುತ್ತದಷ್ಟೆ.

ಸಾರಾಂಶೀಕರಿಸಿ ಹೇಳುವುದಾದರೆ, ಪೆಟ್ರೋಲ್ ಮತ್ತು ಡಿಸೇಲ್ ವಾಹನಗಳಿಗೆ ಹೋಲಿಸಿ ದರೆ ಗ್ಯಾಸ್ ಆಧಾರಿತ ವಾಹನ ಗಳಿಂದ ಕಡಿಮೆ ವಾಯುಮಾಲಿನ್ಯವಾಗುತ್ತದೆ ಎಂಬುದು ನಿಜ. ಈಗಾಗಲೇ ವಾಯುಮಾಲಿನ್ಯ, ಜಲಮಾಲಿನ್ಯ, ಶಬ್ದಮಾಲಿನ್ಯಗಳಿಂದ ಕೆಟ್ಟು ಹೋಗುತ್ತಿರುವ ಅಮೂಲ್ಯ ಪರಿಸರವನ್ನು ರಕ್ಷಿಸಿಕೊಳ್ಳುವುದೂ ನಮ್ಮ ಜವಾಬ್ದಾರಿಯೇ. ಸರ್ಕಾರಕ್ಕೆ, ಆರ್.ಅಶೋಕ್‌ಗೆ ನಮ್ಮ ಅಮೂಲ್ಯ ಪರಿಸರವನ್ನು ರಕ್ಷಿಸಿಕೊಳ್ಳಬೇಕೆಂದು ಅಷ್ಟೊಂದು ಕಾಳಜಿಯಿದ್ದರೆ ಕೇವಲ ಆಟೋ, ಕ್ಯಾಬ್‌ಗಳಿಗೆ ಮಾತ್ರವಲ್ಲ ಎಲ್ಲಾ ವಾಹನಗಳಿಗೂ ಎಲ್‌ಪಿಜಿ ಕಿಟ್ ಅಳವಡಿಸಲಿ. ಅಂತೆಯೇ ಬಡವರ ಆಟೋ, ಕ್ಯಾಬ್‌ಗಳಿಗೆ ಎಲ್‌ಪಿಜಿ ಕಿಟ್ ಅಳವಡಿಸುವ ಸಂಪೂರ್ಣ ವೆಚ್ಚವನ್ನು ಸಾರಿಗೆ ಇಲಾಖೆಯೇ ಭರಿಸಲಿ.

■ ಹುಬ್ಬಳ್ಳಿಯಾಂವ

ಬ್ಯಾರಿ ಅಕಾಡೆಮಿ ಮೇಲೆ ಚೆಡ್ಡಿಗಳ ಕೆಂಗಣ್ಣು


ಯಡ್ಡಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಆಡಳಿತವನ್ನು ಕೇಸರೀಕರಣಗೊಳಿಸುವ ಕೆಲಸವನ್ನು ಸದ್ದಿಲ್ಲದೆ ಮಾಡುತ್ತಿದೆ. ಶಿಕ್ಷಣ ಕ್ಷೇತ್ರವನ್ನು ಕೇಸರೀಕರಣಗೊಳಿಸಲು ಸಚಿವರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ಅರವಿಂದ ಲಿಂಬಾವಳಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಇತ್ತ ಕೃಷಿ ಮಿಷನ್‌ಗೆ ವಕ್ಕರಿಸಿರುವ ಆನಂದ ಎಂಬ ಚೆಡ್ಡಿ ಚತುರ ಕೃಷಿ ಇಲಾಖೆಯ ದುಡ್ಡೆಲ್ಲವೂ ತನ್ನ ಅಣತಿಯಂತೆಯೇ ಖರ್ಚಾಗಬೇಕೆಂದು ಫರ್ಮಾನು ಹೊರಡಿಸಿ, ರೈತರಿಗೆಲ್ಲಾ ಖಾಕಿ ಚೆಡ್ಡಿ ತೊಡಿಸಲು ಹೊರಟಿದ್ದಾನೆ. ಈಗಾಗಲೇ ರೈತಸಂಘ ಈತನ ವಿರುದ್ಧ ತಿರುಗಿ ಬಿದ್ದಿದೆ.



ಮಹಮದ್ ಕಟ್ಪಾಡಿ

ಆರ್‌ಎಸ್‌ಎಸ್ ನಾಯಕರೇ ಬಹಿರಂಗವಾಗಿ ಮುಖ್ಯಮಂತ್ರಿಯನ್ನು ಭೇಟಿಯಾಗಿ, ಹೀಗೇ ಆಡಳಿತ ನಡೆಸಬೇಕು ಎಂಬ ಸೂಚನೆಗಳನ್ನು ನೀಡುತ್ತಿರುವುದರಿಂದ ಮುಂದೆ ಏನೇನು ಅನಾಹುತ ಕಾದಿದೆಯೋ ಗೊತ್ತಿಲ್ಲ. ಈ ನಡುವೆ ಬ್ಯಾರಿ ಸಾಹಿತ್ಯ ಅಕಾಡೆಮಿಯನ್ನು ನಿಷ್ಕ್ರಿಯಗೊಳಿಸಿರುವ ಸುದ್ದಿ ಬಂದಿದೆ.

ಇತ್ತೀಚೆಗಷ್ಟೇ ಎಲ್ಲ ಅಕಾಡೆಮಿಗಳಿಗೆ ಅಧ್ಯಕ್ಷ ಹಾಗೂ ಸದಸ್ಯರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿತ್ತು. ಅಂತೆಯೇ ಬ್ಯಾರಿ ಸಾಹಿತ್ಯ ಅಕಾಡೆಮಿಗೆ ನಮ್ಮ ನಡುವಿನ ಪ್ರಗತಿಪರ ಸಾಹಿತಿ ಫಕೀರ್ ಮಹಮ್ಮದ್ ಕಟ್ಪಾಡಿ ಅವರನ್ನು ಅಧ್ಯಕ್ಷರನ್ನಾಗಿ ಮತ್ತು ಐವರು ಸದಸ್ಯರನ್ನು ನೇಮಕ ಮಾಡಲಾಗಿತ್ತು. ಕುಮಾರಸ್ವಾಮಿ ನೇತೃತ್ವದ ಸರ್ಕಾರ ಈ ಅಕಾಡೆಮಿ ರಚಿಸಿ, ಆದೇಶ ಹೊರಡಿಸಿತ್ತಾದರೂ ನೇಮಕಾತಿ ಮಾಡಿರಲಿಲ್ಲ. ಹೀಗಾಗಿ ಯಡ್ಡಿ ಸರ್ಕಾರ ನೇಮಕಾತಿ ಮಾಡಿರುವುದು ಎಲ್ಲರಲ್ಲಿಯೂ ಆಶ್ಚರ್ಯ ಮೂಡಿಸಿತ್ತು. ಆದರೆ ಈ ನೇಮಕಾತಿ ನಡೆದಿರುವ ಸುದ್ದಿ ಹೊರಬೀಳುತ್ತಿದ್ದಂತೆಯೇ ಚೆಡ್ಡಿ ಚತುರರು ಎಚ್ಚೆತ್ತರು. ಬ್ಯಾರಿ ಅಕಾಡೆಮಿಯೂ ಬೇಡ, ಅದಕ್ಕೆ ಅಧ್ಯಕ್ಷರೂ ಬೇಡ ಎಂದು ಯಡ್ಡಿಯ ಮೇಲೆ ಒತ್ತಡ ಹೇರಿ, ಕಟ್ಪಾಡಿಯವರನ್ನು ನೇಮಕ ಮಾಡಿ ಹೊರಡಿಸಲಾಗಿದ್ದ ಆದೇಶವನ್ನು ತಡೆ ಹಿಡಿಯುವಂತೆ ಮಾಡಿದ್ದಾರೆ.



ಚಿದಾನಂದಮೂರ್ತಿ

ಮುಖ್ಯವಾಗಿ, ಸಂಘಪರಿವಾರದ ವಕ್ತಾರರಾಗಿರುವ ಚೆಡ್ಡಿ ಸಂಶೋಧಕ ಚಿದಾನಂದಮೂರ್ತಿಯೇ ಇದಕ್ಕೆ ಕಾರಣ ಎಂಬ ಮಾತು ಸರ್ಕಾರಿ ವಲಯದಲ್ಲಿ ಕೇಳಿಬಂದಿದೆ. ಹಿಂದೆ ಸರ್ಕಾರ ಬ್ಯಾರಿ ಸಾಹಿತ್ಯ ಅಕಾಡೆಮಿಯನ್ನು ರಚಿಸಿ ಆದೇಶ ಹೊರಡಿಸಿದ್ದಾಗ ಇದೇ ಚಿದಾನಂದ ಮೂರ್ತಿ, ತಲೆ-ಬುಡವಿಲ್ಲದ ವಾದ ಮಂಡಿಸಿ, ಈ ಅಕಾಡಮಿ ರಚನೆಗೆ ವಿರೋಧ ವ್ಯಕ್ತಪಡಿಸಿದ್ದರು. ಈಗ ಯಡ್ಡಿಯ ತಲೆತಿಂದು ಆದೇಶ ಜಾರಿಯಾಗದಂತೆ ನೋಡಿಕೊಂಡಿದ್ದಾರೆ.

ಎಲ್ಲರೂ ವಿರೋಧಿಸಿದವರೇ!

ಕೇವಲ ಚಿಮೂ ಮಾತ್ರ ಈ ಅಕಾಡೆಮಿಯ ನೇಮಕಕ್ಕೆ ವಿರೋಧ ವ್ಯಕ್ತಪಡಿಸಿಲ್ಲ, ದಕ್ಷಿಣ ಕನ್ನಡದ ಬಿಜೆಪಿ ಸಚಿವರು, ಶಾಸಕರು ಕೂಡ ಈ ನೇಮಕಾತಿ ರದ್ದುಪಡಿಸುವಂತೆ ಒತ್ತಡ ಹೇರುತ್ತಿದ್ದಾರೆ. ಆದರೆ ಇದಕ್ಕೆ ಕಾರಣ ಮಾತ್ರ ಚಿಮೂ ನೀಡುವ ಕಾರಣವಲ್ಲ, ನಮಗೆ ಹೇಳದೆ-ಕೇಳದೆ ಈ ಅಕಾಡೆಮಿ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ನೇಮಕ ಮಾಡಲಾಗಿದೆ. ನೇಮಿಸುವಾಗ ಚೆಡ್ಡಿ ಸಿದ್ಧಾಂತದವರಿಗೆ ಹೆಚ್ಚು ಅವಕಾಶ ನೀಡಲಾಗಿಲ್ಲ ಎಂಬುದು ಅವರಿಗಿರುವ ಸಿಟ್ಟು.

ಮಂಗಳೂರಿನ ಉಸ್ತುವಾರಿ ಸಚಿವ ಪಾಲೆಮಾರ್ ವಿರುದ್ಧ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಮೈಯ್ದೀನ್ ಭಾವ ಎಂಬುವವರ ಸಹೋದರ ಬಿ.ಎಂ. ಮಮ್ತಾಜ್ ಅಲಿ ಎಂಬಾತನನ್ನು ಈ ಅಕಾಡೆಮಿಗೆ ಅದ್ಯಾವ ಕಾರಣದಿಂದ ಸದಸ್ಯರಾಗಿ ನೇಮಿಸಿದ್ದಾರೋ ಗೊತ್ತಿಲ್ಲ. ಇದು ಸಚಿವ ಪಾಲೆಮಾರ್‌ಗೆ ಸಿಟ್ಟು ಬರಿಸಿದೆ. ಹೀಗಾಗಿ ಈ ಅಕಾಡೆಮಿಗೆ ಯಾರನ್ನೂ ನೇಮಿಸಬೇಡಿ ಎಂದು ಪಾಲೆಮಾರ್ ಪಟ್ಟುಹಿಡಿದಿದ್ದಾರೆ. ಇನ್ನು ಯಾರ್‍ಯಾರನ್ನೋ ಸದಸ್ಯರನ್ನಾಗಿ ನೇಮಿಸಿರುವುದು ಬ್ಯಾರಿ ಸಾಹಿತ್ಯ ವಲಯದಲ್ಲಿಯೇ ತೀವ್ರ ವಿರೋಧಕ್ಕೆ ಕಾರಣವಾಗಿದೆ. ಒಟ್ಟಾರೆ ಬ್ಯಾರಿ ಸಾಹಿತ್ಯ ಅಕಾಡೆಮಿ ತ್ರಿಶಂಕು ಸ್ಥಿತಿಯಲ್ಲಿದೆ.

'ಮೂಲತಃ ನಾನು ಸಾಹಿತಿ. ಯಾವುದೇ ಧರ್ಮದ ಮೂಲಭೂತವಾದಿಗಳು ಸಮಾಜದಲ್ಲಿ ಅಶಾಂತಿ ಹುಟ್ಟು ಹಾಕುವುದನ್ನು ವಿರೋಧಿಸುತ್ತೇನೆ. ಅಕಾಡೆಮಿಗಳಿರುವುದು ಸಾಹಿತ್ಯದ ಬೆಳವಣಿಗೆಗಾಗಿ. ಸಾಹಿತ್ಯದ ವಿಚಾರದಲ್ಲಿ ರಾಜಕೀಯ ಮಾಡುವುದು ಸರಿಯಲ್ಲ. ಅಧ್ಯಕ್ಷ ಸ್ಥಾನವನ್ನು ಪಡೆಯಲೇಬೇಕೆಂಬ ಆಕಾಂಕ್ಷೆ ನನ್ನಲ್ಲಿಲ್ಲ, ಅದು ದೊರೆತರೆ ಬ್ಯಾರಿ ಸಾಹಿತ್ಯದ ಅಭಿವೃದ್ಧಿಗೆ ಕೆಲಸ ಮಾಡುತ್ತೇನೆ' ಎಂದು ಮಹಮದ್ ಕಟ್ಪಾಡಿ ಹೇಳಿದ್ದಾರೆ. ಈ ಮಾತು ಜೀರ್ಣಿಸಿಕೊಳ್ಳುವ ಶಕ್ತಿ ಈ ಚೆಡ್ಡಿ ಸರ್ಕಾರಕ್ಕಿದೆಯೇ? ■

'ಯುಗ ಗೀತೆ'ಗಳು



1-3: ಜೋಜೋ ಲಾಲಿ ಜೋಜೋಲಾಲಿ....

3-5: ಟ್ವಿಂಕಲ್ ಟ್ವಿಂಕಲ್ ಲಿಟ್ಲ್ ಸ್ಟಾರ್....

5-14: ಅ ಆ ಇ ಈ ಕನ್ನಡದ ಅಕ್ಷರ ಮಾಲೆ

14-25: ಪ್ರೀತಿಯಲ್ಲಿರೋ ಸುಖ....


26-40: ನೂರೊಂದು ನೆನಪು....

41-50: ಯಾರಿಗೆ ಬೇಕು ಈ ಲೋಕ....

51-70: ಎಲ್ಲಿಗೆ ಪಯಣ, ಯಾವುದೋ ದಾರಿ...

70 ರ ನಂತರ: ಹಾಡಿಲ್ಲ, ಬರೀ ವಾದ್ಯ ಸದ್ದು: ಡಂಕನಕ ನರ್ತನ ಡಂಕನಕ ನಕನಕ....

*****



ಆತ ತುಂಬ ಒಳ್ಳೆಯ ಮನುಷ್ಯನಾಗಿದ್ದ, ಆತ ಎಂದೂ ಸಿಗರೇಟು ಸೇದಲಿಲ್ಲ, ಹೆಂಡ ಕುಡಿಯಲಿಲ್ಲ, ಪರಸ್ತ್ರೀಯ ಸಂಗ ಮಾಡಲಿಲ್ಲ, ಆದರೆ ಆತ ಸತ್ತಾಗ ವಿಮಾ ಕಂಪನಿಯವರು ವಿಮಾ ನೀಡಲು ನಿರಾಕರಿಸಿದರು. ಹೀಗೆ ತಿರಸ್ಕರಿಸಲು ಅವರು ನೀಡಿದ ಕಾರಣ: "ಎಂದೂ ಬದುಕಿರದಿದ್ದವನು ಸಾಯಲು ಹೇಗೆ ಸಾಧ್ಯ?" ■

ಹೆದ್ರಿಕೆ ಅನ್ನದು ಈ ಬಂಗಾರಪ್ಪನ ಡಿಕ್ಷನರಿಲೇ ಇಲ್ಲ


ಪಾಕಿಸ್ತಾನದ ಉಗ್ರರು ಮುಂಬಯಿಗೆ ಬಂದು ಮನಬಂದಂತೆ ಹಾರಿಸಿದ ಗುಂಡುಗಳು ದೇಶಮುಖನ ಆಡಳಿತವನ್ನೇ ಕೊನೆಗೊಳಿಸಿದೆಯಲ್ಲಾ, ವಿಲಾಸಿ ಜೀವನಕ್ಕೆ ಹೇಳಿ ಮಾಡಿಸಿದ ದೇಶಮುಖ ತಾಜ್ ಹೋಟೆಲಿಗೆ ಸಿನಿಮಾ ನಿರ್ದೇಶಕ ಮತ್ತು ಸಿನಿಮಾ ಹೀರೋ ಎಂಬ ಆಪಾದನೆಯ ತನ್ನ ಮಗನ ಜೊತೆ ಹೋಗಿ ಬಂದಿದ್ದನ್ನು ನೋಡಿದ ಜನತೆ ಆ ಮುಸುಡಿಯಲ್ಲಿ ಸಿನಿಮಾ ಲೊಕೇಶನ್ ನೋಡುವಂತಹ ಕುತೂಹಲವಿತ್ತೇ ಹೊರತು, ತಾಜ್ ಹಾಳಾದ ಭಾವವಿರಲಿಲ್ಲ ಎಂದು ಸೋನಿಯಾಗೆ ಚಾಡಿ ಹೇಳಿದರಂತಲ್ಲಾ, ಚಾಡಿ ಹೇಳುವವರಿಗಾಗಿಯೇ ಕಾಯುತ್ತ ಕುಳಿತಂತಿರುವ ಸೋನಿಯಾ ದೇಶಮುಖರ ರಾಜೀನಾಮೆಯನ್ನು ನಯವಾಗಿ ಬರೆಸಿಕೊಂಡು, ರಾಣೆ ಎಂಬ ಮಾಜಿ ಶಿವಸೇನೆಯ ಯೋಧನನ್ನು ಕರೆದು "ಮುಂದೆ ನೀನೇ ಮಹಾರಾಷ್ಟ್ರದ ಮಹಾರಾಜ" ಎಂದುಬಿಟ್ಟಳಂತಲ್ಲಾ, ಇದರಿಂದ ಖುಷಿಯಾದ ರಾಣೆ ಸಾಹೇಬರು ಮಹಾರಾಷ್ಟ್ರಕ್ಕೆ ಶಿವಸೇನೆ ಆಡಳಿತದ ರುಚಿ ತೋರಲು ತಯಾರಿ ನಡೆಸುತ್ತಿರುವಾಗಲೇ ಬೆಚ್ಚಿಬಿದ್ದ ಕಾಂಗ್ರೆಸಿಗಳು ಡೆಲ್ಲಿಗೆ ಓಡಿ "ಮೇಡಂ, ಮಹಾರಾಷ್ಟ್ರಕ್ಕೆ ನಮ್ಮ ಪಾರ್ಟಿಯದೇ ಒಂದು ಜಕಾಲ್ ಹುಡುಕಿ ಸಿ.ಎಂ. ಮಾಡಿ, ಆದರೆ ಈ ಮಾಜಿ ಶಿವಸೇನೆ ಟೈಗರ್ ಬೇಡಿ. ಇದು ಕೊನೆಗೆ ನಮ್ಮನ್ನೆಲ್ಲಾ ಬಾಯಿಗೆಸೆದುಕೊಳ್ಳುತ್ತೆ" ಎಂದರಂತಲ್ಲಾ, ಕೂಡಲೇ ಸೋನಿಯಾ ಅಶೋಕ್ ಚವ್ಹಾಣ್ ಎಂಬ ಕಾಂಗ್ರೆ ಸೇವಕನನ್ನು ಮುಖ್ಯಮಂತ್ರಿ ಮಾಡಿ ಕೈ ತೊಳೆದುಕೊಂಡಳಂತಲ್ಲಾ, ಥೂತ್ತೇರಿ!

* * * * * *

ದೇಶದ ತುಂಬೆಲ್ಲಾ ರಾಜಕಾರಣಿಗಳ ಮಕ್ಕಳೇ ಮಂತ್ರಿಗಳು, ಮುಖ್ಯಮಂತ್ರಿಗಳಾಗುತ್ತ ಮುಂದೊಂದು ದಿನ ರಾಹುಲ್ ಗಾಂಧಿಗಾಗಿ ಕಾಯುತ್ತಿರಬೇಕಾದರೆ ಅಂತಹ ಸುಗಮ ಹಾದಿಗೆ ಅಶೋಕ್ ಚವ್ಹಾಣನ ಆಯ್ಕೆ ಸೂಕ್ತವಾಗಿದೆಯಂತಲ್ಲಾ, ಅತ್ತ ಅಶೋಕ್ ಚವ್ಹಾಣ್ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗುತ್ತಿದ್ದಂತೆ ಇತ್ತ ಕರ್ನಾಟಕದ ಅಪ್ಪ-ಮಗನಿಗೊಂದು ಸರಿಯಾದ ಅಸ್ತ್ರ ಸಿಕ್ಕಿದಂತಾಗಿ "ಇನ್ನು ಯಾರಾದರೂ ಅಪ್ಪ ಮಕ್ಕಳ ರಾಜಕಾರಣ ಅಂತ ಆಡಿಕೊಂಡರೆ ಅವರಿಗೆ ಸರಿಯಾದ ಉತ್ತರ ಕೊಡುತ್ತೇವೆ. ಕಾಂಗ್ರೆಸಿಗಳಂತೂ ಅಂತ ಪ್ರಶ್ನೆ ಕೇಳುವ ಹಕ್ಕನ್ನು ಎಂದೋ ಪಡೆದುಕೊಂಡಿದ್ದಾರೆ. ಆದ್ದರಿಂದ ಇನ್ನ ಸೊಸೆಗಿಸೆ ಅಂದರೆ ಅಂತಹ ಮಹಾನುಭಾವರಿಗೆ ನಾವು ಉತ್ತರವನ್ನೆ ಕೊಡುವುದಿಲ್ಲ" ಎಂದರಂತಲ್ಲಾ ಗೌಡರು, ಥೂತ್ತೇರಿ!!!


* * * * * *

ದೇವರಾಜ ಅರಸು, ವೀರೇಂದ್ರ ಪಾಟೀಲ್, ನಿಜಲಿಂಗಪ್ಪ, ಹೆಗಡೆ, ಪಟೇಲರೆಲ್ಲಾ ಮುಖ್ಯಮಂತ್ರಿಯಾಗಿ ಆಳಿದ ಈ ಕರ್ನಾಟಕವನ್ನು ಮುಂದೆ ಶ್ರೀರಾಮುಲು ಎಂಬ ಕ್ರಿಮಿನಲ್ ಆಳಲಿದ್ದಾನಂತಲ್ಲಾ, ಬರೋಬ್ಬರಿ ಅರ್ಧ ಡಜನ್ ಕ್ರಿಮಿನಲ್ ಕೇಸು ಹಾಕಿಸಿಕೊಂಡಿರುವ ಶ್ರೀರಾಮುಲು ಮತ್ತೊಂದಿಷ್ಟು ಕೇಸಿಗೆ ಹೆದರಿ ಡಿವೈಎಸ್‌ಪಿ ಕಾಲು ಹಿಡಿಯಲು ಹೋಗಿದ್ದನ್ನು ದೂರದರ್ಶನದಲ್ಲಿ ನೋಡಿದ್ದ ಕರ್ನಾಟಕದ ಜನತೆ ಅಂತವನು ಮುಖ್ಯಮಂತ್ರಿಯಾದರೆ ಗತಿಯೇನೆಂದು ಬೆಚ್ಚಿ ಕೂತಿದೆಯಂತಲ್ಲಾ. "ರಾಮುಲು ಮುಂದಿನ ಮುಖ್ಯಮಂತ್ರಿ ಎಂದೇಳಿರುವ ಜನಾರ್ದನ ರೆಡ್ಡಿ ಮಾತಿಗೆ ಅಷ್ಟು ಹೆದರುವ ಅಗತ್ಯವಿಲ್ಲಾ. 'ನಾನು ಮುಖ್ಯಮಂತ್ರಿ ಆಗಲ್ಲ, ನೀನೇ ಆಗಣ್ಣ' ಎಂದು ರಾಮುಲು ಬಾಯಿಂದ ಬರಲೆಂಬ ಹುನ್ನಾರದಿಂದ ರೆಡ್ಡಿ ಆಡಿರುವ ಮಾತಿದು" ಎಂದು ಕಾಂಗ್ರೆಸ್‌ನವರು ಸಮಜಾಯಿಸಿ ನೀಡುತ್ತಿರುವಾಗ, ದಳದ ಗುಲಾಮರು "ಅಂತೂ ನಮ್ಮ ಕರ್ನಾಟಕ ಪಾವನವಾಯ್ತು" ಎಂದವಂತಲ್ಲಾ, ಅದಕ್ಕೆ ಬಿಜೆಪಿಯ ಅರಬರೆ ಚೆಡ್ಡಿಗಳು "ಕುಮಾರಸ್ವಾಮಿ ಮುಖ್ಯಮಂತ್ರಿಯಾದಾಗಲೇ ಕರ್ನಾಟಕ ಪಾವನವಾಗಿದೆ ಕಂಡ್ರೀ. ಅಂಥವನ ನಂತರ ಇನ್ನೆಂಥವನಾಗಬೇಕು?" ಎಂದು ಸಮಜಾಯಿಸಿ ಕೊಟ್ಟವಂತಲ್ಲಾ, ಥೂತ್ತೇರಿ!



* * * * * *

ಬುದ್ಧಿಜೀವಿಗಳೆಂದರೆ ಸುಳ್ಳುಗಾರರು, ಪೊಳ್ಳುತನದವರು, ಸುಳ್ಳು ಸುಳ್ಳೇ ಸೆಕ್ಯುಲರಿಷ್ಟರು, ಇಂದ್ರಿಯಾಸಕ್ತರು, ಮಹಾಸ್ವಾರ್ಥಿಗಳು, ಅಧಿಕಾರ ಅಂತಸ್ತಿಗಾಗಿ ಏನು ಬೇಕಾದರೂ ಮಾಡಬಲ್ಲರು. ಇದು ಚೆಡ್ಡಿಗಳ ವ್ಯಾಖ್ಯಾನ! ಆದರೆ ಚೆಡ್ಡಿಗಳ ಸೋದರ ಮಾವಂದಿರು ಅಪ್ಪಟ ಚಿನ್ನಗಳಂತೆ. ಈ ಚಿನ್ನಗಳ ಸಂಖ್ಯೆ ಈಗ ಬೆಳೆಯತೊಡಗಿದೆ. ಉಡುಪಿಭಟ್ಟ, ಎಡೂರಪ್ಪ, ರೇಣುಕಾಚಾರಿ ಇವರಾರಿಗೂ ಒಂದಿಷ್ಟೂ ಇಂದ್ರಿಯಾಸಕ್ತಿಯಿಲ್ಲವಂತೆ. ಎಡೂರಪ್ಪನಿಗಂತೂ ಕುರ್ಚಿ ಅದಾಗಿಯೇ ಹುಡುಕುತ್ತ ಬಂದು ಕೂರಿಸಿಕೊಂಡಿತಂತೆ. "ಆಯಕಟ್ಟಿನ ಜಾಗಕ್ಕೆ ಇಂಜಿನಿಯರ್‌ಗಳ ವರ್ಗಾವಣೆಗೆ ಬರೋಬ್ಬರಿ ಒಂದು ಕೋಟಿ ಕೇಳುತ್ತಿರುವ ಚೆಡ್ಡಿಗಳ ಪಡೆಯಿಂದ ರಾಜ್ಯದ ಕಾಲುವೆ, ಸೇತುವೆ, ರಸ್ತೆಗಳು ಉಳಿಯಲು ಸಾಧ್ಯವೇ? ನೀವೇ ಹೇಳಿ" ಎಂದು ಚೆಡ್ಡಿಗಳನ್ನು ಕೇಳಿದರೆ, "ಅವರೆಲ್ಲಾ ಅಧಿಕಾರದಲ್ಲಿರುವ ಬಿಜೆಪಿಗಳು. ನಾವು ಸಂಘದವರು. ನಮಗೂ ಅವರಿಗೂ ಮಾವ ಭಾವಮೈದುನರ ಸಂಬಂಧ. ನಮ್ಮ ಅಕ್ಕಂದಿರ ಗಂಡಂದಿರು ಮಾಡುವ ಭ್ರಷ್ಟ ಕೆಲಸಕ್ಕೂ ನಮಗೂ ಸಂಬಂಧವಿಲ್ಲ!" ಎನ್ನುತ್ತಿವೆಯಲ್ಲಾ, ಥೂತ್ತೇರಿ!!



* * * * * *

ಬರಲಿರುವ ದಿನಗಳನ್ನು ನೆನೆದು ಬೆಚ್ಚಿದಂತೆ ಕಾಣುತ್ತಿರುವ ನಮ್ಮ ಬಂಗಾರಿಯನ್ನು ಮಾತನಾಡಿಸಿದರೆ ಹೇಗೆ ಅನ್ನಿಸಿತಲ್ಲಾ, ಕೂಡಲೇ ಫೋನ್ ಮಾಡಲಾಗಿ ಸಿಕ್ಕೇಬಿಟ್ಟರು.

ರಿಂಗ್ ಟೋನ್: "ಯಾರೇ ಕೂಗಾಡಲಿ, ಊರೇ ಹೋರಾಡಲಿ ನಿನನೆಮ್ಮದಿಗೆ ಭಂಗವಿಲ್ಲಾ ಎಮ್ಮೇ ನಿನಗೆ...

"ಹಲೋ ಯಾರೂ?"

"ನಾನು ಸಾರ್, ಯಾಹೂ ಅಂತ, ಪತ್ರಕರ್ತ."

"ಹೇಳಿ ಯಾಹೂ ಅವರೆ, ಭಾಳ ದಿನ ಆಯ್ತು, ಸಿಕ್ಕಲೇಯಿಲ್ಲ ನೀವು."

"ನೀವೆ ಸಿಕ್ತಾಯಿಲ್ಲ ಸಾರ್. ಒಂದಿನ ಬೆಂಗಳೂರು, ಮರುದಿನ ಸೊರಬ, ಭದ್ರಾವತಿ, ತೀರ್ಥಹಳ್ಳಿ, ಎಲ್ಲಿ ಕೇಳಿದ್ರು ಈಗೋದ್ರು ಅಂತರೆ. ಅದೇನು ಸಾರ್ ಅಂಗೆ ತಿರುಗ್ತಾಯಿದ್ದಿರಿ?"

"ತಿರುಗ್ಲೇಬೇಕಲ್ಲಾ? ಚುನಾವಣೆ ಬರ್ತಾಯಿದೆ."

"ಚುನಾವಣೆಗೆ ನೀವು ಯಾವತ್ತೂ ಹೆದರಿಲ್ಲ ಸಾರ್; ಈಗ್ಯಾಕೆದ್ರಿಕೆ?"

"ಹೆದ್ರಿಕೆ ಅನ್ನದು ಈ ಬಂಗಾರಪ್ಪನ ಡಿಕ್ಷನರಿಲೆಯಿಲ್ಲ ಗೊತ್ತ?"

"ಮತ್ಯಾಕ್ ಸಾರ್ ಸೋನಿಯಾ ನೋಡಬೇಕು ಅಂತಿರಿ, ದೇವೇಗೌಡ್ರ ಬೇಟಿಯಾಗಬೇಕು ಅಂತಿರಿ?"

"ನಾವು ಸೆಕ್ಯುಲರ್ ಫೋರಸೆಲ್ಲಾ ಒಂದಾಗಬೇಕು ಅದಕ್ಕೆ."


"ಅಲ್ಲಾ ಸಾರ್, ದಿಢೀರಂತ ಬಿಜೆಪಿಗೋಗಿ ಮೋದಿ ಜೊತೆ ನಿಂತಿದ್ರಿ. ಆ ದೇವೇಗೌಡ್ರು ಬಿಜೆಪಿ ಜೊತೆ ಸೇರಿ ಮಗನ್ನ ಮುಖ್ಯಮಂತ್ರಿ ಮಾಡಿಕಂಡು ಇಪ್ಪತ್ತು ತಿಂಗಳು ಸುಖವಾಗಿದ್ರು. ಅದ್ಯಾವಾಗ ನೀವು ಸೆಕ್ಯುಲರಾದ್ರಿ?"

"ಮಿಸ್ಟರ್ ಯಾಹೂ, ಹಳೆದೆಲ್ಲಾ ಬೇಡಿ. ಮುಂದೇನು ಮಾಡಬೇಕು ಅಂತ ನಾವು ಸೀರಿಯಸ್ಸಾಗಿ ಯೋಚನೆ ಮಾಡ್ತಾಯಿದ್ದಿವಿ."

"ಮುಂದೇನೂಯಿಲ್ಲ ಸಾರ್. ದ್ಯಾವೇಗೌಡ್ರಿಗೇಳಿ ಒಂದೈವತ್ತು ಸಾವಿರ ಓಟು ತಗಳೊ ಕ್ಯಾಂಡೇಟ್ ಹಾಕಿಸಿಗೆಳಿ. ಇತ್ತ ಈಶ್ವರಪ್ಪನಿಗೂ, ಎಡೂರಪ್ಪನಿಗೂ ಹೇಳಿ ಒಂದು ಯಪ್ಪತ್ತೈದು ಸಾವಿರ ಓಟು ತಗಳೋ ಕ್ಯಾಂಡೇಟ್ ಬಿಜೆಪಿಯಿಂದ ಹಾಕಿಸಿಗಳಿ. ಕಾಂಗ್ರೆಸ್ಸಿನವ್ರಂತು ಸತ್ತಮನಿಗಿರದ್ರಿಂದ ನಿಮ್ಗಿಂದ್ಲೆ ಬತ್ತದೆ. ಯಾಕ್ ಸಾರ್ ಹೆದರತಿರಿ?"

"ಹೆದರಲ್ಲ, ಆದ್ರು ಬಿಜೆಪಿಗಳತ್ತ ದುಡ್ಡಿದೆ, ಅಧಿಕಾರ ಇದೆ. ನಮ್ಮ ಜಾತಿನ ಹೊರದಾಕಿದಾರೆ. ಬೀಳೂರು ಹರತಾಳು ನನ್ನ ವಿರುದ್ಧನೆ ಬೊಗಳತವೆ." ■

"ಥೂತ್ತೇರಿ!!!"




ಶ್ರೀರಾಮುಲು ಎಂಬ ಕೇಡಿ ಮಂತ್ರಿ ರೌಡಿ ಪಟ್ಟಿಯಲ್ಲಿರುವಾತ, ಜೈಲು ಕಂಡಾತ, ಇವತ್ತಿಗೂ ಕೋರ್ಟಿನ ಕಟಕಟೆಯಲ್ಲಿ ನಿಲ್ಲುವಾತ. ಇಂಥವನನ್ನು ಕರ್ನಾಟಕದ ಭಾವಿ ಮುಖ್ಯಮಂತ್ರಿಯೆಂದು ಆತನಷ್ಟೇ ನಟೋರಿಯಸ್ ಮಂತ್ರಿ ಗಣಿರೆಡ್ಡಿ ಬೊಬ್ಬೆ ಹಾಕುತ್ತಿದ್ದರೆ, ಅದನ್ನು ಕೇಳಿಯೂ ತೆಪ್ಪಗೆ ಕೂತ ಬಿಜೆಪಿ ನಾಯಕರನ್ನು ಏನೆನ್ನಬೇಕು? ಒಂದಲ್ಲ ಎರಡಲ್ಲ ಅದು ಮೂವತ್ತು ಕ್ರಿಮಿನಲ್ ಕೇಸುಗಳ ಹೀನ ಜಾತಕವಿರುವ ರೌಡಿ ಶ್ರೀರಾಮುಲು ಕರ್ನಾಟಕದ ಮುಖ್ಯಮಂತ್ರಿಯಾದನೆಂದರೆ ಕನ್ನಡ ತಾಯಿಗೆ ಆತ್ಮಹತ್ಯೆಯಲ್ಲದೇ ಬೇರೆ ಗತಿಯೆಲ್ಲಿದೆ?

30 ಕ್ರಿಮಿನಲ್ ಕೇಸ್‌ಗಳ ರೌಡಿ ಸಿ.ಎಂ. ಆದರೆ ಏನು ಗತಿ?

■ ರಾ ಸೋಮನಾಥ

ಒಂದಲ್ಲ ಎರಡಲ್ಲ ಅದು ಮೂವತ್ತು ಕ್ರಿಮಿನಲ್ ಕೇಸುಗಳ ಹೀನ ಜಾತಕ. ಇಂಥವನೊಬ್ಬ ಕರ್ನಾಟಕದ ಮುಖ್ಯಮಂತ್ರಿಯಾದನೆಂದರೆ ಕನ್ನಡ ತಾಯಿಗೆ ಆತ್ಮಹತ್ಯೆಯಲ್ಲದೇ ಬೇರೆ ಗತಿಯೆಲ್ಲಿದೆ?


'ಬಳ್ಳಾರಿಯ ರೌಡಿ ಶ್ರೀರಾಮುಲು ಕರ್ನಾಟಕದ ಮುಂದಿನ ಮುಖ್ಯಮಂತ್ರಿಯಾಗುವುದನ್ನು ಆ ದೇವರಿಂದಲೂ ತಪ್ಪಿಸೋದಕ್ಕಾಗಲ್ಲ' ಎಂದು ಗಣ್ಣಿಕಳ್ಳ ಜನಾರ್ದನ ರೆಡ್ಡಿಯಲ್ಲದೇ ಬೇರೆ ಯಾರು ತಾನೇ ಹೇಳಲು ಸಾಧ್ಯ?



ದಿವಾಕರ್ ಬಾಬು

ಇಂಥ ದುರಂತವೊಂದನ್ನು ಕಣ್ಣಾರೆ ಕಾಣುವ ದೌರ್ಭಾಗ್ಯವೊಂದನ್ನು ಕನ್ನಡಿಗರಿಗಾಗಿ ಬಿಜೆಪಿ ಕಲ್ಪಿಸುತ್ತಿದೆ. ಒಬ್ಬ ರೌಡಿ. ಮತ್ತು ಹುಟ್ಟಾ ಕ್ರಿಮಿನಲ್‌ನನ್ನು ಕರ್ನಾಟಕದ ಮುಖ್ಯಮಂತ್ರಿಯನ್ನಾಗಿ ಕಲ್ಪಿಸಿಕೊಳ್ಳುವುದೇ ಮಹಾಪಾಪ. ಇಂಥಾದ್ದರಲ್ಲಿ ಗಣಿಕಳ್ಳ ಜನಾರ್ದನ ರೆಡ್ಡಿ ಈ ರೀತಿಯ ಡೈಲಾಗ್ ಹೊಡೆಯುತ್ತಿದ್ದರೆ ಅದನ್ನು ಕೇಳಿಯೂ ತೆಪ್ಪಗಿರುವ ಬಿಜೆಪಿ ನಾಯಕರಿಗೆ ಪತ್ರಿಕೆ ಈ ಮೂಲಕ ವಾಸ್ತವಾಂಶವನ್ನು ನೆನಪಿಸುತ್ತಿದೆ.


ಕಳೆದ ಚುನಾವಣೆಯಲ್ಲಿ ಬಳ್ಳಾರಿಯ ಕಾಂಗ್ರೆಸ್ ಅಭ್ಯರ್ಥಿ ಅನಿಲ್ ಲಾಡ್ ಪರ ಚುನಾವಣಾ ಪ್ರಚಾರ ಮಾಡುತ್ತಿದ್ದ ಕುದಿತಿನಿ ಶ್ರೀನಿವಾಸ್‌ರನ್ನು ನಡುರಸ್ತೆಯಲ್ಲೇ ಅಟ್ಟಾಡಿಸಿಕೊಂಡು ಹೊಡೆದವನು ಹಾಲಿ ಆರೋಗ್ಯ ಮಂತ್ರಿ ಶ್ರೀರಾಮುಲು. ಈ ಬಗ್ಗೆ ಕೌಲ್‌ಬಜಾರ್ ಬಳ್ಳಾರಿಯ ಪೊಲೀಸರೇ ನಿಂತು ಶ್ರೀರಾಮುಲು ವಿರುದ್ಧ ಅರ್ಧ ಡಜನ್ ಐಪಿಸಿ ಸೆಕ್ಷನ್ನುಗಳನ್ನು ಹಾಕಿ ಎಫ್‌ಐಆರ್ ಹರಿದದ್ದು, ತನ್ನನ್ನು ಬಂಧಿಸಲು ಬಂದ ಪೊಲೀಸರ ಕಾಲಿಗೆ ಬಿದ್ದು ಶ್ರೀರಾಮುಲು ಉರುಳಾಡಿದ್ದು ಇತ್ಯಾದಿ ದೃಶ್ಯಾವಳಿಗಳನ್ನೆಲ್ಲ ಈಗಾಗಲೇ ಕರ್ನಾಟಕದ ಜನತೆ ನೋಡಿದ್ದಾಗಿದೆ. ಆ ಹೊತ್ತಿಗಾಗಲೇ ಶ್ರೀರಾಮುಲು ಮಂತ್ರಿಯಾಗಿದ್ದ. ಇದು ಕಳೆದ ವಿಧಾನಸಭಾ ಚುನಾವಣೆಯ ಹಿಂದಿನ ದಿನವಷ್ಟೇ ಅಂದರೆ 2008 ರ ಮೇ 15 ರಂದು ನಡೆದ ಘಟನೆ.



ಜನಾರ್ದನ ರೆಡ್ಡಿ

ಇದಕ್ಕೂ 25 ದಿನಗಳ ಮೊದಲು ಅಂದರೆ 2008 ರ ಏಪ್ರಿಲ್ 18 ರಂದು ಬಳ್ಳಾರಿಯ ಕಾಂಗ್ರೆಸ್ ಅಭ್ಯರ್ಥಿ ಅನಿಲ್ ಲಾಡ್ ಮನೆ ಮೇಲೆಯೇ ದಾಳಿ ನಡೆಸಿದ ಶ್ರೀರಾಮುಲು ಮತ್ತಾತನ ರೌಡಿ ಪಡೆ ಲಾಡ್ ಮನೆಯ ಕಿಟಕಿ ಗಾಜುಗಳನ್ನೆಲ್ಲ ಚಿಂದಿಯೆಬ್ಬಿಸುತ್ತದೆ. ಅಷ್ಟಕ್ಕೇ ತೃಪ್ತಿಯಾಗದೇ ಲಾಡ್ ಮನೆ ಮುಂದಿದ್ದ ಮೂರೂ ಕಾರುಗಳಿಗೆ ಬೆಂಕಿ ಹಚ್ಚಿ ಐವತ್ತು ಲಕ್ಷ ರೂಪಾಯಿಗಳಷ್ಟು ಹಾನಿ ಮಾಡುತ್ತದೆ. ಆಗಲೂ ಶ್ರೀರಾಮುಲು ಸರ್ಕಾರದ ಗೌರವಾನ್ವಿತ ಮಂತ್ರಿಯಾಗಿದ್ದ.

ತಾನೊಬ್ಬ ಮಂತ್ರಿ, ಆ ಕಾರಣಕ್ಕಾದರೂ ಕ್ರಿಮಿನಲ್ ಕೃತ್ಯಗಳಿಗೆ ಕೈಹಾಕಬಾರದೆಂಬ ಕನಿಷ್ಠ ಪ್ರಜ್ಞೆಯೂ ಇಲ್ಲದವನು ಶ್ರೀರಾಮುಲು. ಆತ ಬಳ್ಳಾರಿ ಕಂಡ ಮೊಟ್ಟ ಮೊದಲ ರಕ್ತಪಿಪಾಸು. ತನ್ನ ಅಕ್ಕನ ಗಂಡ ರೈಲ್ವೇ ಬಾಬು ಎಂಬ ಮತ್ತೊಬ್ಬ ಪಾತಕಿಯನ್ನು ಬರ್ಬರವಾಗಿ ಕೊಚ್ಚಿ ಕೊಂದು ಅತೀ ಸಣ್ಣವಯಸ್ಸಲ್ಲೇ ಜೈಲು ಕಂಡ ಶ್ರೀರಾಮುಲುನಂಥ ಕ್ರಿಮಿನಲ್‌ನನ್ನು ತನ್ನ ಗಣಿ ಲೂಟಿಗೆ ತಕ್ಕಂತೆ ಪಳಗಿಸಿದ್ದು ಖದೀಮ ಜನಾರ್ದನ ರೆಡ್ಡಿ. ಇಸವಿ 2000 ದ ಹೊತ್ತಿಗೆ ಬಳ್ಳಾರಿಯ ಸುತ್ತಮುತ್ತ ತಲೆ ಎತ್ತಿದ ಅರಣ್ಯ ಭೂಮಿಯ ಅದಿರು ಕೊಳ್ಳೆಗೆ ರೆಡ್ಡಿ ಗ್ಯಾಂಗ್ ಕೈಯಿಕ್ಕಲು ಅತಿ ಮುಖ್ಯ ಕಾರಣನಾದವನು ಭಾರತ್ ಮೈನ್ಸ್ ಅಂಡ್ ಮಿನರಲ್ಸ್ ಕಂಪೆನಿಯ ಧಣಿ ಮಾರ್ವಾಡಿ ಬಿ.ಎಂ. ದಿನೇಶ್. ಐದಾರು ಮಂದಿಯ ಪಾಲುದಾರಿಕೆಯಲ್ಲಿ ಆಂಧ್ರದ ಗಡಿಯ ಓಬಳಾಪುರಂನಲ್ಲಿ ಅದಿರು ದೋಚುತ್ತಿದ್ದ ದಿನೇಶ್ ತನ್ನ ಪಾರ್ಟನರ್ ಒಬ್ಬನಿಗೆ ಒಂದೂವರೆ ಕೋಟಿಯಷ್ಟು ಮುಂಡಾಯಿಸಿದ್ದ.



ಅನಿಲ್ ಲಾಡ್

ವಂಚನೆಗೀಡಾದ ಆ ವ್ಯಕ್ತಿ ಹಿಡಿದದ್ದು ಜನಾರ್ದನ ರೆಡ್ಡಿಯನ್ನು. ಆ ಹೊತ್ತಿಗಾಗಲೇ ಎನ್ನೋಬಲ್ ಇಂಡಿಯಾ ಎಂಬ ಬ್ಲೇಡ್ ಕಂಪೆನಿಯೊಂದನ್ನು ಹುಟ್ಟುಹಾಕಿದ್ದ ಗಣಿ ರೆಡ್ಡಿಗೆ ತನ್ನಿಂದ ಮುಂಡಾಯಿಸಿಕೊಂಡಿದ್ದ ಹೂಡಿಕೆದಾರರನ್ನು ಹೆದರಿಸಲು ಶ್ರೀರಾಮುಲುನಂಥ ಪಾತಕಿಯೊಬ್ಬನ ಅಗತ್ಯವಿತ್ತು. ಹಾಗೇ ರೆಡ್ಡಿಯ ತೆಕ್ಕೆಗೆ ಬಂದ ರೌಡಿ ಶ್ರೀರಾಮುಲು ಭಾರತ್ ಮೈನ್ಸ್ ಅಂಡ್ ▶▶▶

ಬ್ರೂಸ್‌ಪೇಟೆಯೊಂದರಲ್ಲೇ ಹತ್ತು ಕ್ರಿಮಿನಲ್ ಕೇಸುಗಳು!

ಬಳ್ಳಾರಿಯ ಬ್ರೂಸ್‌ಪೇಟೆ ಪೊಲೀಸ್ ಠಾಣೆಯ ಕ್ರೈಂ ನಂ. 304/00 ಕೂಡ ಕೊಲೆಯತ್ನದ ಕೇಸೆ. ಇದು ನಡೆದದ್ದು 2000 ದ ಅಕ್ಟೋಬರ್ 10 ರಂದು. 2001 ರ ಜೂನ್ 30 ರಂದು ಕಾಂಗ್ರೆಸ್ ಕೌನ್ಸಿಲರ್‌ಗಳು ನಡೆಸುತ್ತಿದ್ದ ಸಭೆಗೆ ನುಗ್ಗಿದ ಶ್ರೀರಾಮುಲು ಬಂಗಾರದ ಚೈನು ಮತ್ತು ಮೊಬೈಲ್ ಫೋನ್ ದೋಚಿದ್ದು ಬ್ರೂಸ್‌ಪೇಟೆಯ ಎರಡನೇ ಕೇಸು. ಜನಾರ್ದನ ರೆಡ್ಡಿಯ ಅಣ್ಣ ಸೋಮಶೇಖರ ರೆಡ್ಡಿ ಜೊತೆ ಸೇರಿ ಪಾಲಿಕೆ ಕಚೇರಿಯಲ್ಲಿ ಕೊಲೆ ಬೆದರಿಕೆ ಹಾಕಿದ್ದ (Cr No. 201/01) ಶಾಸಕ ದಿವಾಕರ್ ಬಾಬು ಕಚೇರಿಗೇ ನುಗ್ಗಿ ನಾರಾಯಣ ರಾವ್ ಉರ್ಫ್ ಚಿಟ್ಟಿಯ ಮೇಲೆ ಹಲ್ಲೆ ನಡೆಸಿದ್ದು (Cr No. 213/01) ಜಿಲ್ಲಾಧಿಕಾರಿಗಳ ಕಚೇರಿಗೆ ನುಗ್ಗಿ ಕೊಲೆ ಬೆದರಿಕೆ ಹಾಕಿದ್ದು (Cr No. 8/04) 2007 ರ ಸೆಪ್ಟೆಂಬರ್ 24 ರಂದು ಮತದಾರರಿಗೆ ಮದ್ಯ ಮತ್ತು ಸೀರೆ ಹಂಚಲು ಹೋಗಿ ಸಿಕ್ಕಿಬಿದ್ದಿದ್ದು (Cr No. 173/07) 2008 ರ ಮೇ 15 ರಂದು ಗಾಂಧಿನಗರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತ ನಾಣಿಯ ಹತ್ಯೆಗೆ ಯತ್ನಿಸಿದ್ದು ಇದರ ಮಾರನೇ ದಿನ ಧೊಂಬಿಗೆ ಯತ್ನಿಸಿ ಗ್ಯಾಂಗ್ ಸೇರಿಸುತ್ತಿದ್ದ ಶ್ರೀರಾಮುಲುವನ್ನು ಮುಂಜಾಗ್ರತೆ ಕ್ರಮವಾಗಿ ಪೊಲೀಸರು ಬಂಧಿಸಿದ್ದು (Cr No. 54/08) ಇತ್ಯಾದಿ ಕೇಸುಗಳ ಪೈಕಿ ಗಾಂಧಿನಗರ ಪೊಲೀಸ್ ಠಾಣೆಯ ಎರಡು ಕೇಸುಗಳನ್ನು ಬಿಟ್ಟರೆ ಮಿಕ್ಕ ಹತ್ತು ಕ್ರಿಮಿನಲ್ ಕೇಸುಗಳನ್ನು ಇವತ್ತಿಗೂ ಬ್ರೂಸ್‌ಪೇಟೆ ಪೊಲೀಸರೇ ನಡೆಸುತ್ತಿದ್ದಾರೆ.



ಹೆಚ್.ಎಂ. ರೇವಣ್ಣ

ಇಂಥ ಅನೇಕ ಗುರುತರ ಕ್ರಿಮಿನಲ್ ಕೇಸುಗಳಿಗೆಲ್ಲ 'ಬಿ' ರಿಪೋರ್ಟ್ ಹಾಕಿಸಿ ಮುಚ್ಚಿಹಾಕಲು ಶ್ರೀರಾಮುಲು ಮತ್ತು ಆತನ ಗುರು ಗಣಿ ರೆಡ್ಡಿ ಸರ್ಕಸ್ ಮಾಡುತ್ತಲೇ ಇದ್ದಾರೆ. ಸರಿಸುಮಾರು ಅರ್ಧ ಡಜನ್ ಕೇಸುಗಳಲ್ಲಿ ಮಂತ್ರಿಯೇ ಹೋಗಿ ಕಟಕಟೆಯಲ್ಲಿ ನಿಲ್ಲಬೇಕಾದ ಮುಖಭಂಗದಿಂದ ತಪ್ಪಿಸಿಕೊಳ್ಳಲು ಅಂಥ ಕೇಸುಗಳ ವಿರುದ್ಧ ಹೈಕೋರ್ಟಿನಲ್ಲಿ ತಡೆ ತಂದಿದ್ದಾರೆ.

ಹಿಂದೆ ಜೆಡಿಎಸ್ ಸರ್ಕಾರವಿತ್ತು. ಕಾಂಗ್ರೆಸ್ ಆಳ್ವಿಕೆಯಲ್ಲಿ ಮೊಯ್ಲಿ ಮುಖ್ಯಮಂತ್ರಿಯಾಗಿದ್ದ ಕಾಲಕ್ಕೆ ಮಾಗಡಿ ರೇವಣ್ಣನವರ ವಿರುದ್ಧ ಪುಡಿ ಕೇಸೊಂದು ಬಾಕಿಯಿತ್ತೆಂಬ ಒಂದೇ ಕಾರಣಕ್ಕೆ ಸಂಪುಟದಿಂದ ಕಿತ್ತು ಹಾಕಲಾಯ್ತು. ಆದರೆ ಶ್ರೀರಾಮುಲು ಹುಟ್ಟಾ ರೌಡಿ. ಸಣ್ಣ ಕೇಸಲ್ಲ, ಡಜನ್ನುಗಟ್ಟಲೇ ಕೇಸುಗಳಿದ್ದಾಗಲೂ ರಾಜೀನಾಮೆಯ ಮಾತಿರಲಿ ಭಾವಿ ಮುಖ್ಯಮಂತ್ರಿಯೆಂದು ಬಿಂಬಿಸ ಹೊರಟ ಬಿಜೆಪಿಗೆ ಕಾಂಗ್ರೆಸ್ಸಿಗಿದ್ದ ನೈತಿಕತೆಯಾದರೂ ಬೇಡವೇ? ■

ರಪ್ಪ ಘಣಿ ದಿನೇಶ್‌ನನ್ನು ಎತ್ತಾಕಿಕೊಂಡು
ತ್ತೇ ಇಡೀ ಓಬಳಾಪುರಂ ಗಣಿಯನ್ನೇ
ಕೊಂಡ.

ನೂರ್ವಾದಿ ದಿನೇಶ್‌ನ ಪಾಲಾದ
ನೂರು ಕೋಟಿಯನ್ನು ಸೆಟಲ್ ಮಾಡಿ
ಹದ ಒಂದೂವರೆ ಕೋಟಿ
ಪಾಯಿಸಿಕೊಂಡಿದ್ದವನಿಗೂ ಟೋಪಿ ಹಾಕಿ
ಓಬಳಾಪುರಂ ಮೈನಿಂಗ್ ಸಾಮ್ರಾಜ್ಯವನ್ನೇ
ವಶಪಡಿಸಿಕೊಂಡ ಗಣಿ ರೆಡ್ಡಿ ಕ್ರಮೇಣ
ಮುಲುನನ್ನೇ ಅದಕ್ಕೇ ಪಾಲುದಾರನನ್ನಾಗಿ
ಕೊಂಡ.

ಶ್ರೀರಾಮುಲುನಂಥ ರೌಡಿಯನ್ನು
ಪುರಂ ಗಣಿಗೆ ಪಾಲುದಾರರನ್ನಾಗಿ
ಕೊಂಡ ನಂತರ ಎಸ್.ಕೆ. ಮೋದಿ,
ಬಲೇಶ್ವರ ಮೈನಿಂಗ್, ಎಂಬಿಟಿ ಮೈನ್ಸ್,
ಒಂದೊಂದೇ ಗಣಿ ಕಂಪೆನಿಗಳ ಮಾಲಿಕರಿಗೆ
ಕೊಟ್ಟು ಅವರೆಲ್ಲರ ಗಣಿಯನ್ನು ತಾನು
ವುದಕ್ಕೂ ಶ್ರೀರಾಮುಲುನನ್ನೇ
ಬಿಟ್ಟುಕೊಂಡ.

ಣಿ ಕೊಳ್ಳೆಯ ದುಡ್ಡಿರದೇ ಹೋಗಿದ್ದರೆ
ಶ್ರೀರಾಮುಲು ಆಂಧ್ರದ ಪರಿಟಾಲ
ನ್ನೇ ಮೀರಿಸುವಂಥ ಸುಪಾರಿ
ನಾಗುತ್ತಿದ್ದ!

97 ರ ಹೊತ್ತಿಗೇ ಶ್ರೀರಾಮುಲು
ಯ ಕೌಲ್ ಬಜಾರ್ ಪೊಲೀಸ್ ಠಾಣೆಯ
ಪಟ್ಟಿಗೆ ಸೇರಿಬಿಟ್ಟದ್ದ. 1997 ಜುಲೈ 13
ತನ್ನ ಐವರು ಸಹಚರರೊಂದಿಗೆ ಮಾಜಿ
ದಿವಾಕರ್ ಬಾಬು ಬೆಂಬಲಿಗನೊಬ್ಬನನ್ನು
ಸ್ತೆಯಲ್ಲೇ ಕೊಲ್ಲಲು ಯತ್ನಿಸಿದ ಬಗ್ಗೆ ಕೌಲ್
ಪೊಲೀಸ್ ಠಾಣೆಯಲ್ಲಿ ದಾಖಲಾದ
ಈ ಕೇಸಿನ ದಾಖಲೆಗಳು ಇವತ್ತಿಗೂ ಲಭ್ಯ
ನಂಬರ್ 112/97 ರ ಈ ಕೇಸಿನಲ್ಲಿ
ಮುಲು ಗ್ಯಾಂಗ್ ವಿರುದ್ಧ ಐಪಿಸಿಯ 143,
324, 504 ಮತ್ತು 506 ಪ್ರಕರಣಗಳಿದ್ದವು.

ದೇ ಕೌಲ್ ಬಜಾರ್ ಪೊಲೀಸ್ ಠಾಣೆಯ
o. 300/00 ರ ಪ್ರಕಾರ 2000 ದ
ರ್ ನಾಲ್ಕರಂದು ಶ್ರೀರಾಮುಲು ಗ್ಯಾಂಗ್
ಪಯೋಗಿ ರಸ್ತೆಯನ್ನೇ ಹಾಳುಗೆಡವಿದೆ. Cr
0/02 ರ ಮತ್ತೊಂದು ಕೇಸಿನ ಪ್ರಕಾರ
ರ ಜೂನ್ ಐದರಂದು ಕೌಲ್‌ಬಜಾರ್
ಸ್ ಠಾಣೆ ವ್ಯಾಪ್ತಿಯ ದಲಿತರ ಹಾಸ್ಟೆಲ್
ನ್ನು ನೆಲಸಮಗೊಳಿಸಿದ್ದಾನೆ. ಹಾಸ್ಟೆಲಿನಲ್ಲಿದ್ದ
ಸಾವಿರ ರೂಪಾಯಿಗಳನ್ನು ದೋಚಿದ್ದೂ
ನ್ಯಾಯಾಲಯದ ಆದೇಶವನ್ನೇ ಹರಿದು
ಜಾತಿನಿಂದನೆ ಮಾಡಿದ್ದಾನೆ.

ಮೂರೂ ಕೇಸುಗಳಿಗಿಂತಲೂ
ಮುಖ್ಯವಾದದ್ದು ಇದೇ ಕೌಲ್‌ಬಜಾರ್
ಸ್ ಠಾಣೆಯಲ್ಲಿ ದಾಖಲಾದ ಕೇಸು (Cr.
5/02) 2002 ರ ಏಪ್ರಿಲ್ 14 ರಂದು
ರ್ ಬಾಬು ಬೆಂಬಲಿಗನೊಬ್ಬನನ್ನು
ಯ ಕುರಿಹಟ್ಟಿಯ ಅಕ್ವಾಯ್ ಗೇಟ್ ಬಳಿ
ಸ್ತೆಯಲ್ಲೇ ಹಿಡಿದು ಕತ್ತರಿಸಿದ
ಖಲು. ಶ್ರೀರಾಮುಲು ಬೀಸಿದ
ಟಿಗೆ ಆತನ ತಲೆ ಮತ್ತು ಕಾಲು
ಹೋಗಿತ್ತು, ಅದೇದಿನ ಸಂಜೆ ಕೌಲ್‌ಬಜಾರ್
ಸ್ ಠಾಣೆಗೇ ನುಗ್ಗಿದ ಶ್ರೀರಾಮುಲು
ರ ಸಮ್ಮುಖದಲ್ಲೇ ತನ್ನ
ಯೊಬ್ಬನಿಗೆ ಚಾಕು ಹಾಕುತ್ತಾನೆ.
ಜಾರ್ ಪೊಲೀಸ್ ಠಾಣೆಯ Cr No.
ರ ಈ ಕೇಸಿನಲ್ಲಿ ಶ್ರೀರಾಮುಲು ವಿರುದ್ಧ
47, 323, 324, 307 , 504 ಮತ್ತು
ಬಂಧ ಗಂಭೀರ ಪ್ರಕರಣಗಳು
ದವು.

ಲ್‌ಬಜಾರ್ ಪೊಲೀಸ್ ಠಾಣೆಯ Cr.No.
ರ ಪ್ರಕಾರ ಈ ಹಿಂದಿನ ಎರಡೂ
ಮೆಗಳು ಸಂಭವಿಸಿದ ದಿನವೇ ಅಂದರೆ
ದ ಏಪ್ರಿಲ್ 14 ರಂದು ಶ್ರೀರಾಮುಲು
ತನ್ನ ವಿರೋಧಿಗಳ ಮೇಲೆ ದಾಳಿ
ಅಲ್ಲದೇ ಡಿವೈಎಸ್‌ಪಿ ಸೇರಿದಂತೆ
ಬಿಸಿಗೆಂದು ಬಂದಿದ್ದ ಪೊಲೀಸರನ್ನೇ
ಬಡಿದಿದೆ.

ಶ್ರೀರಾಮುಲು ವಿರುದ್ಧ ಬಳ್ಳಾರಿಯ

ಕೌಲ್‌ಬಜಾರ್ ಪೊಲೀಸ್ ಠಾಣೆಯಲ್ಲಿ 2002 ರ ವರೆಗಿನ ಕ್ರಿಮಿನಲ್ ಕೇಸುಗಳಾದರೆ 2005 ರ ಜನವರಿ ಒಂಭತ್ತರಂದು ಏಳನೇ ಕೇಸು ದಾಖಲಾಗಿದೆ. ಅದು Cr. ನಂಬರ್ 04/05. ಕೌಲ್‌ಬಜಾರ್ ಮುಖ್ಯರಸ್ತೆಯಲ್ಲಿದ್ದ ಮನೆಯೊಂದಕ್ಕೆ ನುಗ್ಗಿದ ಶ್ರೀರಾಮುಲು ರೌಡಿ ಪಡೆ ಬೀಗ ಮುರಿದು ಮನೆಯೊಳಗಿದ್ದ ಅಷ್ಟೂ ಸಾಮಾನುಗಳನ್ನು ಹೊರಗೆಸೆದ ಕೇಸದು.

Cr No. 71/07 ರಲ್ಲಿ ಶ್ರೀರಾಮುಲು ಜೊತೆ ಆತನ ಗುರು ಜನಾರ್ದನ ರೆಡ್ಡಿಯೂ ಸಹ ಆರೋಪಿ. ಕುಮಾರಸ್ವಾಮಿ ಸಂಪುಟದಲ್ಲಿ ಪ್ರವಾಸೋದ್ಯಮ ಮಂತ್ರಿಯಾಗಿದ್ದಾಗಲೇ ಶ್ರೀರಾಮುಲು ಗ್ಯಾಂಗ್ ಕೌಲ್‌ಬಜಾರ್ ಪೊಲೀಸ್ ಠಾಣೆಯ ಪಕ್ಕದ ಇಸ್ಮಾಯಿಲ್ ಎಂಬಾತನ ಮನೆಗೆ ನುಗ್ಗಿ ದಾಂಧಲೆ ಮಾಡುತ್ತದೆ.

ತೋರಣಗಲ್ ಪೊಲೀಸ್ ಠಾಣೆಗೇ ನುಗ್ಗಿ ಪೊಲೀಸ್ ಅಧಿಕಾರಿಯೊಬ್ಬನನ್ನು ಥಳಿಸಿದ ಮತ್ತೊಂದು ಕೇಸು 2007 ರ ಆಗಸ್ಟ್ 22 ರಂದು ದಾಖಲಾಗಿದೆ. ಇದಲ್ಲದೇ 2007 ರ ಸೆಪ್ಟೆಂಬರ್ 24 ರಂದು ಬಳ್ಳಾರಿ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಮತದಾರರಿಗೆ ಹಂಚಲು ನಲವತ್ತು ಲಕ್ಷ ಮೌಲ್ಯದ ಸೀರೆಗಳನ್ನು ಕೊಂಡೊಯ್ದಿದ್ದು ಜೊತೆಗೆ ಐದು ಲಕ್ಷ ರೂಪಾಯಿ ನಗದು ಕೊಂಡೊಯ್ಯುತ್ತಿದ್ದ ಬಗ್ಗೆ ಚುನಾವಣಾಧಿಕಾರಿ ಶ್ರೀನಿವಾಸ್ ಕೌಲ್‌ಬಜಾರ್ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದಾರೆ.


ಮೇಲ್ಕಂಡ ಹತ್ತೂ ಕೇಸುಗಳಲ್ಲಿ ಶ್ರೀರಾಮುಲುವೇ ಮೊದಲ ಆರೋಪಿ. ಹನ್ನೊಂದನೇ ಕೇಸಾದರೂ ಎಂಥಾದ್ದು? ಕೌಲ್‌ಬಜಾರ್ ಪೊಲೀಸ್ ಠಾಣೆಯ Cr No. 182/07 ರ ಪ್ರಕಾರ 2007 ರ ಸೆಪ್ಟೆಂಬರ್ 25 ರಂದು ಶ್ರೀರಾಮುಲು ಚುನಾವಣಾ ಪ್ರಚಾರದಲ್ಲಿದ್ದ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ರಿವಾಲ್ವರ್ ಸಮೇತ ದಾಳಿ ಮಾಡುತ್ತಾನೆ. ಆತನ ಜೊತೆಗಿದ್ದವರು ಇಟ್ಟಿಗೆ ಮತ್ತು ಕಲ್ಲುಗಳಿಂದ ಹೊಡೆಯುತ್ತಿದ್ದರೆ ಶ್ರೀರಾಮುಲು ತನ್ನ ರಿವಾಲ್ವರ್ ತೆಗೆದಿದ್ದೇ ವಿರೋಧಿಗಳ ಮೇಲೆ ಗುಂಡು ಹಾರಿಸುತ್ತಾನೆ. ದಾಳಿಗೀಡಾದವರ ನಾಲ್ಕು ಚಿನ್ನದ ಉಂಗುರುಗಳು, ಒಂದು ಬ್ರೇಸ್‌ಲೆಟ್ ಅನ್ನು ಅವತ್ತು ಶ್ರೀರಾಮುಲು ಪಡೆ ಕಿತ್ತೊಯ್ದಿದೆ.

ಆರ್ಮ್ಸ್ ಆಕ್ಟ್, ಕೊಲೆಯತ್ನ, ರಾಬರಿ, ಅಕ್ರಮ ಕೂಟ ಇತ್ಯಾದಿ ಹತ್ತು ಗುರುತರ ಐಪಿಸಿ ಸೆಕ್ಷನ್ನುಗಳನ್ನು ಈ ಒಂದೇ ಪ್ರಕರಣದಲ್ಲಿ ಶ್ರೀರಾಮುಲು ವಿರುದ್ಧ ದಾಖಲಿಸಲಾಗಿದೆ. ಕೌಲ್‌ಬಜಾರ್ ಪೊಲೀಸ್ ಠಾಣೆಯ Cr No. 183/07, 185/07, 190/07, 40/08, 43/08, 76/08 ಇತ್ಯಾದಿ ಕ್ರಿಮಿನಲ್ ಕೇಸುಗಳೆಲ್ಲ ಕೊಲೆಯತ್ನ, ಅಕ್ರಮಕೂಟ, ರಾಬರಿ, ಗೂಂಡಾಗಿರಿ, ಚುನಾವಣಾ ದುಷ್ಕೃತ್ಯಗಳಿಗೆ ಸಂಬಂಧಪಟ್ಟ ಕೇಸುಗಳೇ ಹೊರತು ಯಾರೋ ಬಡಬಗ್ಗರಿಗೆ ನ್ಯಾಯ ದೊರಕಿಸಿಕೊಡಲು ಯುವಕನೊಬ್ಬ ನಡೆಸಿದ ಹೋರಾಟಗಳಲ್ಲ.

ಕೌಲ್‌ಬಜಾರ್ ಪೊಲೀಸ್ ಠಾಣೆಯ ಈ ಹದಿನೇಳೂ ಕೇಸುಗಳಲ್ಲದೇ ಬ್ರೂಸ್‌ಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಹನ್ನೆರಡು (ಬಾಕ್ಸ್ ನೋಡಿ) ಮತ್ತು ಬಳ್ಳಾರಿಯ ಗಾಂಧಿನಗರ ಪೊಲೀಸ್ ಠಾಣೆಯಲ್ಲಿನ ಒಂದು ಕೇಸನ್ನು ಸೇರಿಸಿದರೆ ಒಟ್ಟೂ ಶ್ರೀರಾಮುಲು ಮೇಲೆ ಬಿದ್ದ ಪೊಲೀಸ್ ಕೇಸುಗಳ ಸಂಖ್ಯೆಯೇ ಮೂವತ್ತಾಗುತ್ತದೆ. ಈ ಪೈಕಿ ಅನೇಕ ಕೇಸುಗಳಿನ್ನೂ ಇತ್ಯರ್ಥಗೊಂಡಿಲ್ಲ. ಜಾಮೀನಿನ ಮೇಲೆ ಜೈಲು ಪಾಲಾಗುವುದನ್ನು ತಪ್ಪಿಸಿಕೊಂಡಾತ, ರೌಡಿ ಪಟ್ಟಿಯಲ್ಲಿರುವಾತ, ಜೈಲು ಕಂಡಾತ, ಇವತ್ತಿಗೂ ಕೋರ್ಟಿನ ಕಟಕಟೆಯಲ್ಲಿ ನಿಲ್ಲುವಾತನೊಬ್ಬನನ್ನು ಕರ್ನಾಟಕದ ಭಾವೀ ಮುಖ್ಯಮಂತ್ರಿಯೆಂದು ಆತನಷ್ಟೇ ನಟೋರಿಯಸ್ ಮಂತ್ರಿ ಗಣಿರೆಡ್ಡಿ ಬೊಬ್ಬೆ ಹಾಕುತ್ತಿದ್ದರೆ, ಅದನ್ನು ಕೇಳಿಯೂ ತೆಪ್ಪಗೆ ಕೂತ ಬಿಜೆಪಿ ನಾಯಕರನ್ನು ಏನೆನ್ನಬೇಕು?

ರಾಮರಾಜ್ಯವೆಂದರೆ ಶ್ರೀರಾಮುಲು ರಾಜ್ಯವೆ?

ಅಂಕೋಲ: ಸತೀಶ್ ಗಾಳಿಗೆ ಆಸ್ನೋಟಿಕರ್ ತರಗೆಲೆ



ಸತೀಶ್

ಇಷ್ಟು ಬೇಗ ಮತ್ತೊಂದು ಉಪ ಚುನಾವಣೆಯನ್ನು ಎದುರಿಸಬೇಕಾದ ದೌರ್ಭಾಗ್ಯವಂತರಲ್ಲಿ ಅಂಕೋಲ ಕ್ಷೇತ್ರದ ಮತದಾರರೂ ಇದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಗೆದ್ದಿದ್ದ ಆನಂದ ಆಸ್ನೋಟಿಕರ್ ಎಂಬ ಮರಿ ಆನೆ ಗೆದ್ದ ನಲವತ್ತೇ ದಿನಗಳಲ್ಲಿ ಹಣ ಮತ್ತು ಅಧಿಕಾರದಾಸೆಗೆ ಬಿದ್ದು ತನಗೆ ಟಿಕೆಟ್ ಕೊಟ್ಟಿದ್ದ ಕಾಂಗ್ರೆಸ್‌ಗೂ, ತನ್ನನ್ನು ಗೆಲ್ಲಿಸಿದ್ದ ಜನರಿಗೂ "ಕೈ" ಕೊಟ್ಟು ಬಿಜೆಪಿಯ ಕೆಸರುಗುಂಡಿಗೆ ಬಿದ್ದಿದ್ದರಿಂದ ಜನ ಮತ್ತೆ ಚುನಾವಣೆಯೆಂಬ ಹೊಲಸು ರಾಜಕೀಯವನ್ನು ನೋಡಬೇಕಾಗಿ ಬಂದಿದೆ.


ಆನಂದ್ ಅಸ್ನೋಟಿಕರ್

ಉಳಿದೆಲ್ಲ ಉಪಚುನಾವಣೆಗಿಂತ ಅಂಕೋಲ ಕ್ಷೇತ್ರದ ಚುನಾವಣೆ ಭಾರಿ ಮಹತ್ವ ಪಡೆದುಕೊಂಡಿದೆ. ಆನಂದ ಆಸ್ನೋಟಿಕರ್ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಾಗಿರುವುದು, ಕಾಂಗ್ರೆಸ್ಸಿಗರು ಆತನ ವಿರುದ್ಧ ದೊಡ್ಡ ಮಟ್ಟದಲ್ಲಿ ಕೂಗೆಬ್ಬಿಸಿರುವುದು, ಧೈರ್ಯವಿದ್ದರೆ ಆನಂದ್ ವಿರುದ್ಧ ಸ್ಪರ್ಧಿಸಿ ಗೆಲ್ಲಲಿ ಎಂದು ದೇಶಪಾಂಡೆಗೆ ಬಿಜೆಪಿಯವರು ಸವಾಲೆಸೆದಿರುವುದು ಈ ಚುನಾವಣಾ ಕಣ ರಂಗೇರುವಂತೆ ಮಾಡಿವೆ. ಇಲ್ಲಿ ಗೆಲ್ಲಬೇಕಿರುವುದು ಕಾಂಗ್ರೆಸ್ ಮತ್ತು ಬಿಜೆಪಿಗಳೆರಡಕ್ಕೂ ಸ್ವಪ್ರತಿಷ್ಠೆಯ ವಿಚಾರವಾಗಿದೆ.

ಮೇಲ್ನೋಟಕ್ಕೆ ಆನಂದ್ ಆಸ್ನೋಟಿಕರ್ ವಿರುದ್ಧ ಮತದಾರರಲ್ಲಿ ಅಸಮಾಧಾನ ಹೊಗೆಯಾಡುತ್ತಿರುವುದು ಕಾಣಿಸುತ್ತಿದೆ. ರಾಜಕಾರಣಿಯಾದವನಿಗೆ ಅಧಿಕಾರದ ಆಸೆ ಇರುತ್ತದೆ ನಿಜ. ಆದರೆ ದುಡ್ಡು, ಅಧಿಕಾರಕ್ಕಾಗಿ ಗೆದ್ದ ನಲವತ್ತೇ ದಿನದಲ್ಲಿ ತನ್ನನ್ನೇ ತಾನು ಮಾರಿಕೊಂಡಿದ್ದಾನೆಂದರೆ ಜನ ಅಸಮಾಧಾನಗೊಳ್ಳದಿರುತ್ತಾರೆಯೆ? ಕಾಂಗ್ರೆಸ್ಸಿನಲ್ಲಿ ಹಿರಿಯರಿದ್ದರೂ ಅತ್ಯಂತ ಕಿರಿಯವನಾಗಿದ್ದ ಆನಂದ್‌ಗೆ ಟಿಕೆಟ್ ಕೊಡಲಾಗಿತ್ತು, ಜನ ಆನಂದ್ ಮುಖ ನೋಡಿ ಓಟು ಹಾಕಿರಲಿಲ್ಲ, ಕಾಂಗ್ರೆಸ್ ಮುಖ ನೋಡಿ ಗೆಲ್ಲಿಸಿದ್ದರು. ಈಗ ಅವರೆಲ್ಲರೂ ಮೋಸ ಹೋದ ಭಾವನೆಯಲ್ಲಿದ್ದಾರೆ. ಅದು ಈ ಉಪಚುನಾವಣೆಯ ಮೇಲೆ ಪ್ರಭಾವ ಬೀರಲಿದೆ.


ಕಾಗೇರಿ



ಅಸಲಿಗೆ ಆನಂದ್ ಆಸ್ನೋಟಿಕರ್ ವಿರುದ್ಧ ಜನರಲ್ಲಿ ಹೊಗೆಯಾಡುತ್ತಿರುವ ಈ ಅಸಮಾಧಾನವನ್ನೇ ಕಾಂಗ್ರೆಸ್ ಬಂಡವಾಳ ಮಾಡಿಕೊಳ್ಳಲಿದೆ. ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಸತೀಶ್ ಸೈಲ ಮನೆ ಮನೆಗೂ ತೆರಳಿ ಆನಂದ್‌ನ ವಂಚನೆಯನ್ನು ಬಯಲುಗೊಳಿಸಿ ಮತಯಾಚಿಸುತ್ತಿದ್ದಾರೆ.

ಬಿಜೆಪಿಯಿಂದ ಸ್ಪರ್ಧಿಸುತ್ತಿರುವ ಆನಂದ್ ದಾರಿಯೂ ಅಷ್ಟು ಸುಗಮವಾಗಿಲ್ಲ, ಜಿಲ್ಲೆಯ ಬಿಜೆಪಿ ಬರೋಬ್ಬರಿ ನಾಲ್ಕು ಬಣಗಳಾಗಿ ಹೋಳಾಗಿದೆ. ಬಿಜೆಪಿಯಿಂದ ಕಾಂಗ್ರೆಸ್‌ಗೆ ಸೇರಿ ಮತ್ತೆ ಬಿಜೆಪಿಗೆ ಮರಳಿರುವವರ ಗುಂಪು, ಮೂಲ ಬಿಜೆಪಿಗರ ಗುಂಪು, ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿಯ ಗುಂಪು ಹಾಗೂ ಸಂಸದ ಅನಂತಕುಮಾರ್ ಹೆಗಡೆಯ ಗುಂಪು ಒಳಗೊಳಗೇ ಕಚ್ಚಾಡುತ್ತಿವೆ.

ಆನಂದ್ ಆಸ್ನೋಟಿಕರ್ ಗೆಲ್ಲದಂತೆ ಮಾಡುವುದಕ್ಕಾಗಿ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ಎಲ್ಲ ರೀತಿಯಿಂದ ಪ್ರಯತ್ನಿಸುತ್ತಿದ್ದಾರೆ. ಏಕೆಂದರೆ, ಮುಖ್ಯಮಂತ್ರಿ ಯಡಿಯೂರಪ್ಪನ ಆಪ್ತನಾಗಿ ಹೊರಹೊಮ್ಮಿರುವ ಆನಂದ್ ಆಸ್ನೋಟಿಕರ್ ಗೆದ್ದರೆ ತನ್ನ ಕೈಯಲ್ಲಿರುವ ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನ ಆತನ ಪಾಲಾಗುತ್ತದೆ ಎಂಬ ಭಯ ಕಾಗೇರಿಯನ್ನು ಕಾಡುತ್ತಿದೆ. ಯಡಿಯೂರಪ್ಪನವರಿಗೂ ಕಾಗೇರಿಗೂ ಈಗ ಸಂಬಂಧ ಹಳಸಿದಂತೆ ಕಾಣುತ್ತಿರುವುದು ಇದಕ್ಕೆ ಇನ್ನಷ್ಟು ಇಂಬು ಕೊಟ್ಟಿದೆ. ಹೀಗಾಗಿ, ಈಗಾಗಲೇ ಕಾರ್ಯಪ್ರವೃತ್ತರಾಗಿರುವ ಕಾಗೇರಿ ತಮ್ಮ ಕಾರ್ಯಕರ್ತರ ಗುಪ್ತ ಸಭೆಗಳನ್ನು ನಡೆಸಿ ಆನಂದ್ ಸೋಲಿಗಾಗಿ ಕಾರ್ಯತಂತ್ರ ಹೆಣೆಯುತ್ತಿದ್ದಾರೆ.

ಆನಂದ್ ಆಗಮನದಿಂದ 'ಹೊರಗಿನಿಂದ ಬಂದ ದೆವ್ವ ಮನೆ ದೆವ್ವವನ್ನು ಓಡಿಸಿದಂತಾಗಿದೆ' ಮೂಲ ಬಿಜೆಪಿಗರ ಪರಿಸ್ಥಿತಿ. ಪಕ್ಷದಲ್ಲಿ ಆನಂದ್ ಬೆಳೆದಷ್ಟೂ ಈ ಮೂಲ ಬಿಜೆಪಿಗರು ಅತಂತ್ರವಾಗುತ್ತಾ, ಕಡೆಗಣಿಸಲ್ಪಡುತ್ತಾ ಹೋಗುವುದು ಗ್ಯಾರಂಟಿ. ಹೀಗಾಗಿ ಪಕ್ಷದಲ್ಲಿ ತಮ್ಮ ಸ್ಥಾನಗಳು ಭದ್ರವಾಗಬೇಕೆಂದರೆ ಅವರಿಗೂ ಆನಂದ್ ಸೋಲಬೇಕಾಗಿದೆ. ಅದಕ್ಕಾಗಿ ಅವರೆಲ್ಲಾ ಈ ಬಾರಿ ಗುಪ್ತವಾಗಿಯಾದರೂ ಆನಂದ್ ವಿರುದ್ಧ ಕೆಲಸ ಮಾಡಲಿದ್ದಾರೆ.


ಎಲ್ಲಕ್ಕಿಂತ ಮುಖ್ಯವಾದ ಇನ್ನೊಂದು ವಿಚಾರ ಎಂದರೆ ಗಣಿ ರೆಡ್ಡಿಗಳು ಈ ಬಾರಿ ಹಣದ ಹೊಳೆ ಹರಿಸದಿರುವುದು ಬಿಜೆಪಿಯ ಪಾಲಿಗೆ ತುಂಬಾ ಕಷ್ಟವಾಗಲಿದೆ. ಆಪರೇಷನ್ 'ಕಮಲ'ಕ್ಕೆ ಈ ರೆಡ್ಡಿ ಧಣಿಗಳೇ ಮೂಲ ಕಾರಣ. ದುಡ್ಡನ್ನು ನೀರಿನಂತೆ ಹರಿಸಿ ಬೇರೆ ಬೇರೆ ಪಕ್ಷಗಳಿಂದ ಆನಂದ್ ಆಸ್ನೋಟಿಕರ್ ತರಹದವರನ್ನು ಕೊಂಡುಕೊಂಡು ಬಂದವರೂ ಅವರೇ. ಆ ಮೂಲಕ ಈ ಉಪಚುನಾವಣೆಗೆ ಮೂಲ ಕಾರಣರೂ ಅವರೇ. ಆದರೆ, ಆಗಿದ್ದ ಯಡ್ಡಿ-ರೆಡ್ಡಿ ದೋಸ್ತಿ ಈಗಿಲ್ಲ. ಅವರಿಬ್ಬರ ನಡುವೆ ಸಣ್ಣದೊಂದು ಕದನವೇ ನಡೆಯುತ್ತಿದ್ದು ಅವರ ಸಂಬಂಧ ದಿನದಿಂದ ದಿನಕ್ಕೆ ಹಳಸುತ್ತಾ ಹೋಗುತ್ತಿದೆ. ಹೀಗಾಗಿ, ಕಳೆದ ಚುನಾವಣೆಯಲ್ಲಿ, ಹಾಗೂ ಆಪರೇಷನ್ 'ಕಮಲ'ದಲ್ಲಿ ದುಡ್ಡು ಚೆಲ್ಲಿದಂತೆ ಈ ಬಾರಿಯ ಉಪ ಚುನಾವಣೆಯಲ್ಲಿ ಅವರು ಚೆಲ್ಲಲಾರರು. ಇದು ಬಿಜೆಪಿಯ ಪಾಲಿಗೆ, ಆನಂದ್ ಆಸ್ನೋಟಿಕರ್ ಪಾಲಿಗೆ ಉರುಳಾಗಲಿದೆ.

ಇನ್ನೊಂದೆಡೆ ಈ ಉಪಚುನಾವಣೆ ಕಾಂಗ್ರೆಸ್‌ಗೆ, ಅದರಲ್ಲೂ ವಿಶೇಷವಾಗಿ ಆರ್.ವಿ.ದೇಶಪಾಂಡೆ ಮತ್ತು ಡಿ.ಕೆ.ಶಿವಕುಮಾರ್‌ಗೆ ಸ್ವಪ್ರತಿಷ್ಠೆಯ ಪ್ರಶ್ನೆಯಾಗಿದೆ. ಈ ಇಬ್ಬರು ರಾಜ್ಯ ಕಾಂಗ್ರೆಸ್‌ನ ಚುಕ್ಕಾಣಿ ಹಿಡಿದ ಮೇಲೆ ಎದುರಿಸುತ್ತಿರುವ ಮೊದಲ ಚುನಾವಣೆ ಇದಾದ್ದರಿಂದ ತಮ್ಮ ಚತುರತೆಯನ್ನು ಅವರು ತೋರಲೇಬೇಕಾಗಿದೆ. ಅದರಲ್ಲೂ 'ಧೈರ್ಯವಿದ್ದರೆ ಆನಂದ್ ವಿರುದ್ಧ ದೇಶಪಾಂಡೆ ಸ್ಪರ್ಧಿಸಿ ಗೆಲ್ಲಲಿ' ಎಂದು ಬಿಜೆಪಿ ಸವಾಲು ಹಾಕಿರುವುದು ದೇಶಪಾಂಡೆಯ ಪಿತ್ತವನ್ನು ನೆತ್ತಿಗೇರಿಸಿದೆ; ಗೆದ್ದು ತೋರಿಸಿಯೇ ತೀರಬೇಕೆಂಬ ಹಠವೂ ಅವರಲ್ಲಿ ಹೆಪ್ಪುಗಟ್ಟುತ್ತಿದೆ. ಖುದ್ದು ಗಣಿ ಕುಳ ವಾಗಿರುವ ಕಾಂಗ್ರೆಸ್‌ನ ಸತೀಶ್ ಸೈಲಗೆ ದುಡ್ಡಿಗಾಗಿ ಬರವಿಲ್ಲ, ಗೆಲ್ಲುವುದಕ್ಕೆ ಎಷ್ಟು ದುಡ್ಡು ಬೇಕಾದರೂ ಚೆಲ್ಲುವ ದಕ್ಕೆ ಸಿದ್ಧರಾಗಿ ನಿಂತಿದ್ದಾರೆ.

ಅಲ್ಲದೇ ಕಾಂಗ್ರೆಸ್‌ಗೆ ಇಡೀ ಕ್ಷೇತ್ರದಾದ್ಯಂತ ಉತ್ತಮ ಹಿಡಿತವಿದೆ. ಉತ್ತರ ಕನ್ನಡ ಜಿಲ್ಲಾ ಪಂಚಾಯತ್, ಅಂಕೋಲ ತಾಲ್ಲೂಕು ಪಂಚಾಯತ್ ಕಾಂಗ್ರೆಸ್ ವಶದಲ್ಲಿವೆ. ಅಂಕೋಲ-ಕಾರವಾರದ 30ಕ್ಕೂ ಹೆಚ್ಚು ಗ್ರಾಮ ಪಂಚಾಯತಿಗಳಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದೆ. ಇದು ಈ ಉಪಚುನಾವಣೆಯ ಮೇಲೆ ಗಣನೀಯ ಪ್ರಭಾವ ಬೀರಲಿದೆ. ಮೇಲ್ನೋಟಕ್ಕೆ ಬಿಜೆಪಿಯ ಆನಂದ್‌ಗೆ ಪಾಸಿಟಿವ್ ಪಾಯಿಂಟ್‌ಗಳಿಗಿಂತ ನೆಗೆಟಿವ್ ಪಾಯಿಂಟ್‌ಗಳೇ ಜಾಸ್ತಿಯಾದಂತೆ ಕಂಡರೂ ಕಾಂಗ್ರೆಸ್‌ನ ಸತೀಶ್‌ನ ದಾರಿ ಅಷ್ಟು ಸುಲಭವಾಗಿಲ್ಲ, ಕಳೆದ ಚುನಾವಣೆ ಯಲ್ಲಿ ಆನಂದ್ ವಿರುದ್ಧ ಪಕ್ಷೇತರನಾಗಿ ಸ್ಪರ್ಧಿಸಿದ್ದ ಕಾಂಗ್ರೆಸ್‌ನ ನಗರಸಭಾ ಅಧ್ಯಕ್ಷ ಗಣಪತಿ ಉಳ್ವೇಕರ್, ಸಮಾಜವಾದಿ ಪಕ್ಷದಿಂದ ಸ್ಪರ್ಧಿಸಿದ್ದ ಜಿಪಂ ಸದಸ್ಯ ಆರ್.ಜಿ.ನಾಯ್ಕ ಈಗ ಬಹಿರಂಗವಾಗಿ ಆನಂದ್ ಬೆಂಬಲಕ್ಕೆ ಇಳಿದಿದ್ದಾರೆ. ಸಾರಾಂಶೀಕರಿಸಿ ಹೇಳುವುದಾದರೆ, ಕಾಂಗ್ರೆಸ್‌ಗೆ ಉತ್ತಮ ಅವಕಾಶಗಳಿವೆ. ಬಿಜೆಪಿಗೆ ಬಹಳಷ್ಟು ನೆಗೆಟಿವ್‌ಗಳಿವೆ. ಕಾಂಗ್ರೆಸ್ ಪರಿಸ್ಥಿತಿಯನ್ನು ಸರಿಯಾಗಿ ನಿಭಾಯಿಸಿದರೆ, ಬಿಜೆಪಿಯ ದೌರ್ಬಲ್ಯವನ್ನು, ಆನಂದ್ ವಿರುದ್ಧದ ಅಸಮಧಾನವನ್ನು, ಇಡೀ ಕ್ಷೇತ್ರದ ಮೇಲೆ ಕಾಂಗ್ರೆಸ್‌ಗಿರುವ ಹಿಡಿತವನ್ನು ಬಳಸಿಕೊಂಡರೆ ಕಾಂಗ್ರೆಸ್ ಈ ಉಪಚುನಾವಣೆಯನ್ನು ಗೆಲ್ಲಬಹುದು. ಹಾಗೇನಾದರೂ ಆದರೆ ಅತ್ತ ಕಾಂಗ್ರೆಸ್ಸೂ ಇಲ್ಲ, ಇತ್ತ ಬಿಜೆಪಿಯಲ್ಲೂ ಮೂಲೆಗುಂಪು ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿ ಆನಂದ್ ಆಸ್ನೋಟಿಕರ್ ರಾಜಕೀಯ ಜೀವನ ಆರಂಭದಲ್ಲಿಯೇ ದುರಂತ ಅಂತ್ಯ ಕಾಣುತ್ತದೆ.

ವರದಿಗಾರ

ಶಿವಮೊಗ್ಗ: ಜಿಲ್ಲಾಧಿಕಾರಿ ಪಾಂಡೆಯ ತುಘಲಕ್ ದರ್ಬಾರ್!



ದಲಿತ, ರೈತ, ಸಮಾಜವಾದಿ ಚಳವಳಿಯ ನೆಲೆಯಾದ ಶಿವಮೊಗ್ಗದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಇಂಧನ ಸಚಿವ ಈಶ್ವರಪ್ಪ ಸೇರಿಕೊಂಡು ಪಂಕಜ್‌ಕುಮಾರ್ ಪಾಂಡೆ ಎಂಬ ಜಿಲ್ಲಾಧಿಕಾರಿಯನ್ನು ಮುಂದಿಟ್ಟುಕೊಂಡು ಸಾಕ್ಷಾತ್ ತುಘಲಕ್ ದರ್ಬಾರ್ ನಡೆಸುತ್ತಿದ್ದಾರೆ. ಇತ್ತೀಚೆಗೆ ಈ ಪಾಂಡೆ ಎಂಬ ಪುಣ್ಯಾತ್ಮ 'ಡಿಸಿ ಕಚೇರಿ ಆವರಣದಲ್ಲಿ ಯಾರೇ ಆಗಲಿ, ಧರಣಿ ನಡೆಸುವುದು, ಘೋಷಣೆ ಕೂಗುವುದು, ಭಾಷಣ ಮಾಡುವುದು, ತಮಟೆ ಬಾರಿಸುವುದು ಇನ್ನು ಮುಂದೆ ನಿಷಿದ್ಧ. ಇಲ್ಲಿ ಯಾವಾಗಲೂ ಸೆಕ್ಷನ್ 144 ಜಾರಿಯಲ್ಲಿರುತ್ತದೆ. ಪ್ರತಿಭಟನೆ ಮಾಡುವವರು ಮೂರು ದಿನ ಮೊದಲೇ ಅನುಮತಿ ಪಡೆದು ಹತ್ತು ಜನರು ಮಾತ್ರ ಆವರಣದೊಳಗೆ ಹೋಗಿ ಮನವಿ ಸಲ್ಲಿಸಬಹುದು' ಎಂಬ ಅಸಂಬದ್ಧ ಆದೇಶವೊಂದನ್ನು ಹೊರಡಿಸಿದ್ದಾನೆ. ಇದು ಪ್ರಜಾತಂತ್ರದ ಕಗ್ಗೊಲೆಯಲ್ಲದೆ ಮತ್ತೇನಲ್ಲ.



ಪಾಂಡೆ

ಈ ಆದೇಶ ಬಂದ ಬೆನ್ನಲ್ಲೇ ಡಿಸೆಂಬರ್ 2ರಂದು ರೈತರ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ, ಕರ್ನಾಟಕ ರಾಜ್ಯ ರೈತ ಸಂಘದ ಕೋಡಿಹಳ್ಳಿ ಚಂದ್ರಶೇಖರ್ ಮತ್ತು ಹೆಚ್.ಆರ್.ಬಸವರಾಜಪ್ಪನವರ ನೇತೃತ್ವದಲ್ಲಿ ನೂರಾರು ರೈತರು ಪಾಂಡೆಯ ಈ ಹುಕುಂಅನ್ನು ಧಿಕ್ಕರಿಸಿ ಡಿಸಿ ಕಚೇರಿಯತ್ತ ನುಗ್ಗಿದರು. ಅವರನ್ನು ತಡೆಯಲು ಹಾಕಿದ ಬ್ಯಾರಿಕೇಡನ್ನು ಮುರಿದು ಹೋಗಲು ಅವರು ಅಣಿಯಾಗುತ್ತಿದ್ದಂತೆ ಅಧಿಕಾರಿಗಳಿಗೆ ಅನ್ನದಾತರ ಸಿಟ್ಟು ರಟ್ಟೆಗೆ ಬಂದರೆ ಆಗಬಹುದಾದ ಅನಾಹುತಗಳ ಅರಿವಾಗಿ ಅನಿವಾರ್ಯವಾಗಿ ಪ್ರತಿಭಟನಾಕಾರರನ್ನು ಒಳಕರೆಸಿಕೊಂಡರು. ಆದರೆ ಮರುದಿನವೇ ಪಾಂಡೆ ಎಂಬ ತಿಕ್ಕಲು ಜಿಲ್ಲಾಧಿಕಾರಿ ಕೋಡಿಹಳ್ಳಿಯವರನ್ನೊಳಗೊಂಡಂತೆ 120 ರೈತರ ಮೇಲೆ ಕೇಸು ಜಡಿದಿದ್ದಾನೆ.

ನಿಧಾನವಾಗಿ ಶಿವಮೊಗ್ಗದ ಜನತೆಗೆ ಸತ್ಯದರ್ಶನವಾಗತೊಡಗಿದೆ. ಚೆಡ್ಡಿಗಳಿಗೆ ಸಂಪೂರ್ಣ ಅಧಿಕಾರ ಲಭಿಸಿದರೆ ಅವರು ಅದೆಂತಹ ಪ್ರಜಾಪ್ರಭುತ್ವವನ್ನು ನೀಡಬಲ್ಲರು ಎಂಬ ಅನುಭವವಾಗತೊಡಗಿದೆ. ಈ ಹಿಂದೆ ಇದ್ದ ಜಿಲ್ಲಾಧಿಕಾರಿ ಅನಿಲ್ ಕುಮಾರ್ ಇದ್ದುದರಲ್ಲಿ ಉತ್ತಮ ಅಧಿಕಾರಿ ಎಂದೇ ಹೇಳಬಹುದು. ಈತ ಸ್ವಲ್ಪ ಜನಪರ ಕಾಳಜಿಗಳಿರುವ ಮನುಷ್ಯ. ತೊಂದರೆಗೊಳಗಾದ ಯಾರೇ ಬಂದರೂ ಅವರ ಜಾತಿ, ರಾಜಕೀಯ ಹಿನ್ನೆಲೆ, ವರ್ಗ – ಯಾವೊಂದನ್ನೂ ಪರಿಗಣನೆಗೆ ತೆಗೆದುಕೊಳ್ಳದೇ ಒಬ್ಬ ಪ್ರಾಮಾಣಿಕ ಅಧಿಕಾರಿಯಾಗಿ ತಾವೇನು ಮಾಡಬೇಕೋ ಅದನ್ನು ಮಾಡುತ್ತಿದ್ದರು. ಅದರಲ್ಲೂ ವಿಶೇಷವಾಗಿ ಬಡವರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವ ಹೃದಯ ಅವರದ್ದು.

ಪ್ರಾಯಶಃ ಇಷ್ಟೇ ಆಗಿದ್ದರೆ ಚೆಡ್ಡಿ ಮಂತ್ರಿಮಹೋದಯರಿಗೆ, ಅದರಲ್ಲೂ ವಿಶೇಷವಾಗಿ ಯಡ್ಡಿಗೆ ಅಷ್ಟೊಂದು ತೊಂದರೆಯಾಗುತ್ತಿರಲಿಲ್ಲ. ಆದರೆ ಅನಿಲ್ ಕುಮಾರ್ ಯಾವುದೇ ಪಕ್ಷಗಳ, ರಾಜಕಾರಣಿಗಳ ಬಾಲ ಹಿಡಿಯುವ ಜಾಯಮಾನದವರಲ್ಲ; ರಾಜಕಾರಣಿಗಳ ಇನ್‌ಫ್ಲುಯನ್ಸ್‌ಗೆ ವಿಶೇಷವಾಗಿ ಸೊಪ್ಪು ಹಾಕುವ ಸ್ವಭಾವದವರಲ್ಲ. ಅವರ ಈ ಗುಣವೇ ಚೆಡ್ಡಿ ಯಡ್ಡಿಗೆ ಇರುಸುಮುರುಸು ಮಾಡಿದ್ದು. ತನ್ನ ಸ್ವಂತ ಜಿಲ್ಲೆಯಲ್ಲಿ ತನ್ನ ಮಾತಿಗೆ ಸೊಪ್ಪು ಹಾಕದ ಒಬ್ಬ ಜಿಲ್ಲಾಧಿಕಾರಿಯಿದ್ದಾನೆಂದರೆ ಯಡ್ಡಿಗೆ ಆತನನ್ನು ಎತ್ತಂಗಡಿ ಮಾಡುವ ತನಕ ನಿದ್ರೆಯಾದರೂ ಹೇಗೆ ಬರುತ್ತೆ ಹೇಳಿ.



ಈ ಕಾರಣಕ್ಕಾಗಿಯೇ ಅತ್ತ ಯಡ್ಡಿ ಮುಖ್ಯಮಂತ್ರಿ ಗಾದಿಯೇರುತ್ತಿದ್ದಂತೆಯೇ ಇತ್ತ ಅವರ ತವರು ಜಿಲ್ಲೆ ಶಿವಮೊಗ್ಗದಲ್ಲಿ ಜಿಲ್ಲಾಧಿಕಾರಿ ಅನಿಲ್ ಕುಮಾರ್ ಸ್ಥಾನ ಖಾಲಿಯಾಯಿತು. ಆ ಸ್ಥಾನಕ್ಕೆ ತಮಗೆ ನಿಷ್ಠೆಯಿಂದ ಸೇವೆ ಸಲ್ಲಿಸಬಲ್ಲ ಪಾಂಡೆ ಎಂಬ ಸೇವಕ ಬಂದು ಕುಳಿತ.


ಈ ಪಾಂಡೆಯ ಸ್ವಾಮಿನಿಷ್ಠೆ ದಕ್ಷತೆ ಮತ್ತು ದಿಟ್ಟತನ ಮೆಚ್ಚಬೇಕಾದ್ದೇ. ಅವನಿಗೆ ಸಮಾಜದಲ್ಲಿ ಜನರ ಮೇಲೆ ನಡೆಯುವ ಯಾವ ಅನ್ಯಾಯಗಳೂ ಕಾಣಿಸುವುದಿಲ್ಲ. ಚಳವಳಿ ನಿರತ ಜನಸಾಮಾನ್ಯರು ಈ ಪಾಂಡೆಯ ದೃಷ್ಟಿಯಲ್ಲಿ ಒಂದೋ ಕುಡುಕರಂತೆಯೋ ಅಥವಾ ಮಾಡಲು ಕೆಲಸವಿಲ್ಲದ ನಿರುದ್ಯೋಗಿಗಳಂತೆಯೋ ಕಾಣಿಸುತ್ತಾರೆ. ಜನ ತಮ್ಮ ಅಹವಾಲುಗಳನ್ನು ತೋಡಿಕೊಳ್ಳಲು ಈತನ ಆಫೀಸಿಗೆ ಬಂದರೆ ಈತನ ಕೆಲಸಕ್ಕೆ ತೊಂದರೆಯಾಗುತ್ತದಂತೆ! ಅಂದರೆ ಈತ ಜನರ ಕೆಲಸವನ್ನಲ್ಲದೇ ಮತ್ತಿನ್ಯಾರ ಕೆಲಸವನ್ನು ಮಾಡುತ್ತಿದ್ದಾನೆ? ಜನ ತಮ್ಮ ಸಮಸ್ಯೆಗಳು ನಿಗದಿತ ಸಮಯದಲ್ಲಿ ಬಗೆಹರಿಯದಿದ್ದರೆ ಪ್ರತಿಭಟನೆಯ ದಾರಿ ಹಿಡಿಯುವುದೂ ಸಹಜವೇ. ಪ್ರತಿಭಟನೆಯನ್ನು ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಮಾಡದೇ ಅವನ ಬೆಡ್‌ರೂಮ್‌ಗೆ ಹೋಗಿ ಮಾಡಲಾಗುತ್ತದೆಯೆ? ತಮ್ಮ ತಮ್ಮ ನ್ಯಾಯಬದ್ಧ ಹಕ್ಕುಗಳಿಗಾಗಿ, ಸವಲತ್ತುಗಳಿಗಾಗಿ ಹೋರಾಟ ಮಾಡುವ ಹಕ್ಕನ್ನು ಈ ದೇಶದ ಸಂವಿಧಾನವೇ ಪ್ರತಿಯೊಬ್ಬ ನಾಗರಿಕನಿಗೆ ಕೊಟ್ಟಿದೆ. ಆ ಹಕ್ಕನ್ನು ಕಿತ್ತುಕೊಳ್ಳಲು ಯಾವುದೇ ಅಧಿಕಾರಿಗೂ, ಸರ್ಕಾರಕ್ಕೂ ಹಕ್ಕಿಲ್ಲ.

ಈ ಕನಿಷ್ಠ ಜ್ಞಾನವೂ ಇಲ್ಲದ ಒಬ್ಬ ಜಿಲ್ಲಾಧಿಕಾರಿಯಾಗಿ ಬಂದಿದ್ದಾನೆ ಎಂದರೆ ಅದು ಶಿವಮೊಗ್ಗ ಜನರ ದೌರ್ಭಾಗ್ಯವೋ ಅಥವಾ ಯಡ್ಡಿಯನ್ನು ಗೆಲ್ಲಿಸಿ ಮುಖ್ಯಮಂತ್ರಿ ಮಾಡಿದ ಜನರಿಗೆ ಪ್ರತಿಯಾಗಿ ಯಡ್ಡಿ ಕೊಟ್ಟಿರುವ ಉಡುಗೊರೆಯೋ ಗೊತ್ತಿಲ್ಲ.

ಪಾಂಡೆ ತನಗೆ ಸೇವೆ ಸಲ್ಲಿಸುತ್ತಿರುವ ಸ್ಪೀಡ್ ನೋಡಿ ಖುದ್ದು ಯಡ್ಡಿಯೇ ದಂಗಾಗಿ ಹೋಗಿದ್ದಾನೆ. ಮೊನ್ನೆ ದಸರಾ ಹಬ್ಬದ ಮುನ್ನಾದಿನ ಶಿವಮೊಗ್ಗದ ಲೈಫ್‌ಲೈನ್ ಆಗಿರುವ ಬಿಎಚ್ ರಸ್ತೆಯ ಇಕ್ಕೆಲಗಳಲ್ಲಿಯ ನೂರಾರು ಕಟ್ಟಡಗಳನ್ನು, ಅಂಗಡಿ ಮುಂಗಟ್ಟುಗಳನ್ನು ನೆಲಸಮ ಮಾಡಿದ. ನೂರಾರು ವರ್ತಕರು, ಕಟ್ಟಡ ಮಾಲೀಕರು ತಮ್ಮ ಅಂಗಡಿಗಳನ್ನು ಖಾಲಿ ಮಾಡಲು ಸಮಯ ಕೋರಿ ಪಾಂಡೆಯ ಕೈಕಾಲು ಹಿಡಿದು ಬೇಡಿಕೊಂಡರೂ, ಅವರಿಗೆ ಒಂದೇ ಒಂದು ದಿನದ ಅವಕಾಶವನ್ನು ನಿರಾಕರಿಸಿದ್ದ. ವಾಸ್ತವದಲ್ಲಿ ವರ್ತಕರಾರೂ ರಸ್ತೆಯ ಅಗಲೀಕರಣಕ್ಕಾಗಲೀ, ಅಭಿವೃದ್ಧಿಗಾಗಲೀ ವಿರೋಧ ವ್ಯಕ್ತಪಡಿಸಿರಲಿಲ್ಲ. ತಮ್ಮ ಸರಕು ಸರಂಜಾಮು ರಕ್ಷಿಸಿಕೊಳ್ಳುವುದಕ್ಕೆ ಒಂದಿಷ್ಟು ಸಮಯ ಕೊಡಿ ಎಂಬುದೊಂದೇ ಅವರ ವಿನಮ್ರ ಬೇಡಿಕೆಯಾಗಿತ್ತು. ಆದರೆ, ಪಾಂಡೆಯ ಕಿವಿಯೊಳಗೆ ವರ್ತಕರ ಆಕ್ರಂದನ ಹೋಗಲೇ ಇಲ್ಲ. ಪರಿಣಾಮವಾಗಿ ವರ್ತಕರ ಕಣ್ಣೆದುರೇ ಲಕ್ಷಾಂತರ ರೂಪಾಯಿ ಮೌಲ್ಯದ ಅವರ ಸರಕುಗಳು ನಾಶವಾದವು; ಗುಜರಿ ಕಳ್ಳರು ಪೊಲೀಸರ ಎದುರೇ ರಾಬರಿ ಮಾಡಿದರು.

ಈಗ ಶಿವಮೊಗ್ಗೆಗೆ ಬಂದು ನೋಡಿ. ಎರಡು ತಿಂಗಳಿನಿಂದ ಬಿ.ಹೆಚ್.ರಸ್ತೆ ಸ್ಮಶಾನಮಯವಾಗಿ, ಧೂಳು ತುಂಬಿಕೊಂಡು ಕುಳಿತಿದೆ. ಆರೇಳು ಮಂದಿ ಟ್ರಾಫಿಕ್ ಕೆಲಸದ ಪೇದೆಗಳು ಧೂಳು ಕುಡಿದು, ಆಸ್ಪತ್ರೆಗೆ ದಾಖಲಾಗಿದ್ದಾರೆ. ಆದರೆ ಪಾಂಡೆ ಮಾತ್ರ ಕೆಡವಲು ತೋರಿದ ಉತ್ಸಾಹವನ್ನು ಕಟ್ಟಲು ತೋರುತ್ತಿಲ್ಲ. ಈತನ ಡೆಮಾಲಿಷನ್ ಸ್ಪೀಡ್ ನೋಡಿದವರು ರಸ್ತೆ ಕಟ್ಟುವ ಕೆಲಸವೂ ಅಷ್ಟೇ ಸ್ಪೀಡಾಗಿ ಆರಂಭವಾಗಿ ಮುಗಿದುಹೋಗುತ್ತದೆ ಎಂದು ಭಾವಿಸಿದ್ದರು. ಆದರೆ ಎರಡು ತಿಂಗಳಾಯಿತು. ಕೆಡವಿದ್ದು ಹೇಗಿತ್ತೋ ಹಾಗೆಯೇ ಇದೆ. ಶಿವಮೊಗ್ಗೆಯನ್ನು ಮಸಣ ಮಾಡುವುದಕ್ಕಾಗಿ ಆತ ಅಷ್ಟು ಅವಸರವಸರವಾಗಿ ಡೆಮಾಲಿಷ್ ಮಾಡಿದನೆ?

ಡೆಮಾಲಿಷ್ ಮಾಡುವಾಗ ನಷ್ಟಕ್ಕೊಳಗಾದ ವರ್ತಕರಿಗೆ ಉತ್ತಮ ಪರಿಹಾರ ಕೊಡುವುದಾಗಿ ಪಾಂಡೆ ಪುಂಖಾನುಪುಂಖವಾಗಿ ಬೊಗಳೆ ಬಿಟ್ಟಿದ್ದ. ರಾಜಕಾರಣಿಗಳಂತೆ ಅಧಿಕಾರಿಗಳು ಪೊಳ್ಳು ಭರವಸೆ, ಆಶ್ವಾಸನೆ ನೀಡುವುದಿಲ್ಲ ಎಂದು ನಂಬಿದ್ದ ವರ್ತಕರು ಪರಿಹಾರಕ್ಕಾಗಿ ಕಾದಿದ್ದೇ ಬಂತು. ಇವತ್ತಿನ ತನಕ ಪಾಂಡೆ ಮಾತ್ರ ನಯಾ ಪೈಸಾ ಕೊಟ್ಟಿಲ್ಲ. ಇದರಿಂದ ರೊಚ್ಚಿಗೆದ್ದಿರುವ ವರ್ತಕರು, ಮಾಲೀಕರು, ಯಡ್ಡಿ, ಈಶ್ವರಿ ದ್ರೋಹದ ವಿರುದ್ಧ ತಿರುಗಿಬಿದ್ದಿದ್ದಾರೆ. ಇದೇ ಡಿಸೆಂಬರ್ 8ರಂದು ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದಾರೆ. ಇಲ್ಲಿ ಒಂದು ವಿಚಾರವನ್ನು ಹೇಳಬೇಕು. ನಷ್ಟಕ್ಕೊಳಗಾದ ವರ್ತಕರಲ್ಲಿ ಶೇ. 98 ಮಂದಿ ಕಳೆದ ಚುನಾವಣೆಯಲ್ಲಿ ಬಿಜೆಪಿಗೆ ಬೆಂಬಲ ನೀಡಿದ್ದರು. ಅದಕ್ಕೆ ಪ್ರತಿಯಾಗಿ ಬಿಜೆಪಿಯ ಈಶ್ವರಪ್ಪ ಮತ್ತು ಯಡ್ಡಿ ಜೋಡಿ ಈ ವರ್ತಕರಿಗೆ ದಸರಾ ಹಬ್ಬದ ದಿನದಂದೇ ಅವರ ಬದುಕು ಕಿತ್ತುಕೊಳ್ಳುವ ಡೆಮಾಲಿಷನ್ ಉಡುಗೊರೆ ನೀಡಿದೆ.




ಈ ಪಾಂಡೆ ಹೀಗೆ ಜನವಿರೋಧಿಯಾಗಿ ವರ್ತಿಸುತ್ತಿದ್ದರೆ ಆತನ ವಿರುದ್ಧದ ಜನರ ಆಕ್ರೋಶ ಹೆಚ್ಚಾಗುತ್ತದಲ್ಲದೆ, ಆತನ ರಕ್ಷಣೆಗೆ ನಿಂತಿರುವ ಯಡ್ಡಿ–ಈಶ್ವರಿಯ ಎಂಬ ಚೆಡ್ಡಿದ್ವಯರಿಗೆ ಮುಂದಿನ ಚುನಾವಣೆಯಲ್ಲಿ ಜನ ಪಾಠ ಕಲಿಸಲಿದ್ದಾರೆ.

■ ವರದಿಗಾರ

ಚಿಕ್ಕಮಗಳೂರು: ಕಂಡವರ ಆಸ್ತಿಗೆ ಕೈಯಿಡುವ ಸ್ವಯಂಸೇವಕ

ಈತನ ಹೆಸರು ಜಿ.ಎಸ್. ರಾಮಸ್ವಾಮಿ. 65 ವರ್ಷ ದಾಟಿರುವ ಆರ್‌ಎಸ್... ಸ್ವಯಂ ಸೇವಕ. ಬಾಯಿ ತೆರೆದರೆ ಕೊನೆ ಮೊದಲಿಲ್ಲದಂತೆ ದೇಶಪ್ರೇಮದ... ಪುಂಖಾನುಪುಂಖವಾಗಿ ಭಾಷಣ ಬಿಗಿಯಬಲ್ಲ ಚತುರ. ಆದರೆ ಮಾಡು... ಮಾತ್ರ ಮನೆಮುರುಕ ಕೆಲಸವನ್ನೇ. ಈತ ವಿಮಾ ಕಂಪೆನಿಯ ತನ್ನ ಕೆಲ... ನಿವೃತ್ತನಾಗಿದ್ದಾನಾದರೂ ಕಂಡವರ ಆಸ್ತಿಗೆ ಕೈಯಿಡುವ ತನ್ನ ಪ್ರವೃತ್ತಿಯಿಂದ ಇನ್ನೂ ನಿವೃತ್ತಿ ಪಡೆದಿಲ್ಲ. ಈ ಮನೆಮುರುಕ ಪ್ರವೃತ್ತಿಯಿಂದಾಗಿಯೇ ಈ... ಹೊತ್ತು ಆಗರ್ಭ ಶ್ರೀಮಂತನಾಗಿ ಹೊರಹೊಮ್ಮಿದ್ದಾನೆ.

ಲಪಟಾಯಿಸುವ ಪ್ರವೃತ್ತಿಯಲ್ಲಿ ನಿಸ್ಸೀಮನಾಗಿರುವ ಈತ ಈಗ ತನ್ನ ... ಪಕ್ಕದಲ್ಲಿಯೇ ಇರುವ ತನ್ನ ಅಕ್ಕ ದಿವಂಗತ ನಾಗರತ್ನಮ್ಮ ಮತ್ತು ಅವರ... ವೈ.ಎನ್.ಸೀತಾರಾಮಯ್ಯ ಅವರಿಗೆ ಸೇರಿದ ಮನೆಯನ್ನು ಗುಳುಂ ಮಾಡು... ಸ್ಕೆಚ್ ಹಾಕಿದ್ದಾನೆ. ಆದಕ್ಕಾಗಿ ಈತ ತನ್ನ ಮಗ ಜಿ.ಆರ್.ಅನಂತಸ್ವಾಮಿಗೆ ಈ... ಸೇರತಕ್ಕದ್ದೆಂದು ಹೇಳುವ ವಿಲ್‌ವೊಂದನ್ನು ನಾಗರತ್ನಮ್ಮನವರೇ ಸಾಯುವ ಮು... ಬರೆದಿಟ್ಟಿದ್ದಾರೆಂದು ಪುಂಗಿ ಊದುತ್ತಿದ್ದಾನೆ. ವಾಸ್ತವದಲ್ಲಿ ನಾಗರತ್ನಮ್ಮನವರ ಆಸ್ತಿಯನ್ನು ಗುಳುಂ ಮಾಡುವುದಕ್ಕೆ ಅಪ್ಪ ರಾಮಸ್ವಾಮಿ ಮತ್ತು ಅನಂತ ಸ್ವಾಮಿ ಕೃತಕವಾಗಿ ಸೃಷ್ಟಿಸಿರುವ ನಕಲಿ ವಿಲ್ ಇದು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ಮೂಲಕ ಈ ತಂದೆ ಮಕ್ಕಳಿಬ್ಬರೂ ನಾಗರತ್ನಮ್ಮ ಅವರ ಮೊಮ್ಮಕ್ಕಳಿಗೆ ಸೇರಬೇಕಾದ ಆಸ್ತಿಯನ್ನು ಗುಳುಂ ಮಾಡಲು ಹೊರಟಿದ್ದಾರೆ.




ಅಸಲಿಗೆ ನಡೆದಿದ್ದೇನೆಂದರೆ, ಮೂಲತಃ ಕಡೂರು ತಾಲ್ಲೂಕಿನ ಯಳ್ಳಂಬಳ್ಸೆ ಗ್ರಾಮದವರಾದ ಶ್ಯಾನುಭೋಗ ನಾದಿಗ ಸೀತಾರಾಮಯ್ಯನವರು 1964ರಲ್ಲೇ ಚಿಕ್ಕಮಗಳೂರಿಗೆ ಬಂದು ಅರ್ಜಿ ಬರವಣಿಗೆ, ಸ್ಟಾಂಪ್ ವೆಂಡಿಂಗ್ ಕೆಲಸ ಮಾಡಿಕೊಂಡಿದ್ದರು. ತಮ್ಮ ಪಿತ್ರಾರ್ಜಿತ ಆಸ್ತಿಪಾಸ್ತಿಗಳನ್ನು ... ಬಂದ 9000 ರೂಪಾಯಿಯಲ್ಲಿ ಚಿಕ್ಕಮಗಳೂರಿನಲ್ಲಿ ಮೈಸೂರು ಶ್ರೀಕಂಠಯ್ಯನ... ಈ ಮನೆ ಖರೀದಿಸಿದ್ದರು. 1980ರಲ್ಲಿಯೇ ರಸ್ತೆ ಅಪಘಾತದಲ್ಲಿ ಅವರು ... ಹೊಂದಿದರು. ಅವರು ಯಾವುದೇ ವಿಲ್ ಬರೆಯದಿದ್ದುದರಿಂದ ಈ ಆ... ಅವರ ಎರಡನೇ ಪತ್ನಿ ನಾಗರತ್ನಮ್ಮನವರಿಗೆ ಸೇರಿತು. ನಾಗರತ್ನಮ್ಮನವರೂ 1998 ರಲ್ಲಿ ಬೆಂಗಳೂರಿನ ಮಾರ್ಥಾಸ್ ಆಸ್ಪತ್ರೆಯಲ್ಲಿ ನಿಧನ ಹೊಂದಿ... ಇವರಿಗೆ ಮಕ್ಕಳಿಲ್ಲದ ಕಾರಣ ಹಾಗೂ ಕೊನೆಯ ದಿನಗಳಲ್ಲಿ ಅ... ಸೀತಾರಾಮಯ್ಯನವರ ಮೊದಲನೇ ಪತ್ನಿಯ ಮಗನಾದ ನಾಗರಾಜ... ಆರೈಕೆಯಲ್ಲಿಯೇ ಇದ್ದುದರಿಂದ ತನ್ನ ಆಸ್ತಿ ನಾಗರಾಜ ಅವರ ಮಗ ನಾ... ಅರವಿಂದ್, ಮಗಳು ನಾಗಲಕ್ಷ್ಮಿ ಅವರಿಗೆ ಸೇರಬೇಕೆಂದು ವಿಲ್ ಬರೆದಿಟ್ಟ... 1997ರಲ್ಲಿ ಬರೆದ ಈ ಅಂತಿಮ ವಿಲ್‌ನಲ್ಲಿ ತನ್ನ ತಮ್ಮ ರಾಮಸ್ವಾಮಿ... ಧನದಾಹದ ಬಗ್ಗೆಯೂ ಉಲ್ಲೇಖವಿದೆ. ನಾಗರತ್ನಮ್ಮಳ ಗಂಡ ಅಪಘಾತ... ಸತ್ತಾಗ ನಾಗರತ್ನಮ್ಮಳಿಗೆ ಸೇರಬೇಕಾಗಿದ್ದ ಅವರ ಎಲ್ಲಾ ಹಣವನ್ನು, ಪರಿಹಾರ... ಬಿಕರಿಯಾಗದೇ ಉಳಿದಿದ್ದ ಸ್ಟಾಂಪ್ ಪೇಪರ್‌ಗಳನ್ನು, ಬ್ಯಾಂಕಿನಲ್ಲಿದ್ದ ಹಣ... ಇಂದಿರಾ ವಿಕಾಸ್ ಯೋಜನೆಯಲ್ಲಿ ತೊಡಗಿಸಿದ್ದ ಹಣವನ್ನು – ಹೀಗೆ ಎಲ್ಲ... ರಾಮಸ್ವಾಮಿ ಗುಳುಂ ಮಾಡಿರುವ ಬಗ್ಗೆ ದುಃಖದಿಂದ ಬರೆದಿಟ್ಟಿದ್ದಾರೆ. ... ಸಾಲದೆಂಬಂತೆ ಸೀತಾರಾಮಯ್ಯನವರೇ ತಾಲ್ಲೂಕು ಆಫೀಸಿನ ಎದುರುಗಡೆ ಕಟ್ಟಿ... ಅಂಗಡಿಯನ್ನೂ ಈತ ವಶಕ್ಕೆ ತೆಗೆದುಕೊಂಡಿದ್ದಾನೆ.

ತನ್ನ ಅಕ್ಕ ನಾಗರತ್ನಮ್ಮ ಸಾವನ್ನಪ್ಪುತ್ತಿದ್ದಂತೆಯೇ ಅವರಿಗೆ ಸೇರಿದ ... ಆಸ್ತಿಪಾಸ್ತಿಗಳು ತನ್ನ ಸ್ವಂತ ಮಗನಾದ ಅನಂತಸ್ವಾಮಿಗೆ ಸೇರಬೇಕೆಂದು ಖು... ನಾಗರತ್ನಮ್ಮಳೇ ವಿಲ್ ಬರೆದಿಟ್ಟಂತೆ ರಾಮಸ್ವಾಮಿ ಮತ್ತೊಂದು ಕೃತಕ ನಕಲಿ ... ಸೃಷ್ಟಿಸಿದ್ದಾನೆ. ಅದಕ್ಕೆ ಯಾರ್‍ಯಾರ ಸಹಿ ಬೇಕೋ ಅವುಗಳೆಲ್ಲವನ್ನೂ ಫೋ... ಮಾಡಿಟ್ಟಿದ್ದಾನೆ.

ಇದು ಆರ್‌ಎಸ್‌ಎಸ್ ಸ್ವಯಂಸೇವಕ ರಾಮಸ್ವಾಮಿಯ ದಗಲ್ಬಾಜಿ ದಂ... ಒಂದು ಸ್ಯಾಂಪಲ್ ಅಷ್ಟೆ. ಕೆದಕುತ್ತಾ ಹೋದರೆ ಇಂಥ ಎಷ್ಟೋ ಪ್ರಕರಣ... ಕಣ್ಣಿಗೆ ರಾಚುತ್ತವೆ. ಸಂಘಪರಿವಾರಿಗಳಿಂದ ಇದಕ್ಕಿಂತ ಹೆಚ್ಚೇನು ನಿರೀಕ್ಷಿಸಲು ... ಹೇಳಿ?

■ ವರದಿಗ...


ಗದಗ: ಕಳಕಪ್ಪನ ಕೊಳಕು ರಾಜಕೀಯ


ಕಲಕಪ್ಪ ಬಂಡಿ

ಇದೇನು ಪ್ರಜಾಪ್ರಭುತ್ವವೋ ಅಥವಾ ಪೊಲೀಸ್ ರಾಜ್ಯವೋ ಎಂಬ ಅನುಮಾನ ಈಗ ಗದುಗಿನ ಜನರನ್ನು ಕಾಡುತ್ತಿದೆ. ಪೊಲೀಸರ ಗೂಂಡಾಗಿರಿ ಯಾವ ಮಟ್ಟಕ್ಕೆ ಹೋಗಿದೆಯೆಂದರೆ ರಾಜ್ಯದ ಮುಖ್ಯಮಂತ್ರಿಯ ಎದುರು ಲ್ಲೇ ಗದುಗಿನ ಪೊಲೀಸರು ಗೂಂಡಾಗಳಂತೆ ಎರಗು ರೆ. ಮೊನ್ನೆ ಜೆಡಿಎಸ್ ಕಾರ್ಯಕರ್ತರ ಪ್ರತಿಭಟನೆಗೆ ತ್ತರವಾಗಿ ಪೊಲೀಸರು ನಡೆಸಿದ ಗೂಂಡಾಗಿರಿ ಒಂದು ಸ್ಪಷ್ಟ ನಿದರ್ಶನ.

ರಾಜ್ಯಾದ್ಯಂತ ಬಿಜೆಪಿಗಳ ಚೆಡ್ಡಿಗಿರಿಯಿಂದಾಗಿ ಅಲ್ಪ ಸಂಖ್ಯಾತ ಸಮುದಾಯಗಳು ಆತಂಕದಲ್ಲಿ ಬದುಕುತ್ತಿರುವ ಹೊತ್ತಿನಲ್ಲಿ, ರೈತರು ಪೊಲೀಸರ ಗುಂಡೇಟು ತಿನ್ನುತ್ತಿ ಈ ಹೊತ್ತಿನಲ್ಲಿ, ಅದಕ್ಕೆ ಪ್ರಬಲ ಪ್ರತಿರೋಧ ತ್ತಿರುವ ಪ್ರಜ್ಞಾವಂತ, ಪ್ರಗತಿಪರರೊಂದಿಗೆ ಹೆಗಲು ಬೇಕಿದ್ದ ಕಾಂಗ್ರೆಸ್‌ನ ಧಾಂಡಿಗರು ಕೌದಿ ಹೊದ್ದು ಚು ಬೆಚ್ಚಗೆ ಮಲಗಿಬಿಟ್ಟದ್ದಾರೆ. ಇದ್ದುದರಲ್ಲಿ ಜೆಡಿಎಸ್ ತನ್ನ ಮಿತಿಗಳೊಂದಿಗೆ ಬಿಜೆಪಿಯ ಗೂಂಡಾಗಿರಿಯ ದ್ಧ ಬೀದಿಗಿಳಿದಿರುವುದು ಮೆಚ್ಚಬೇಕಾದ ದ.

ಗದುಗಿನಲ್ಲಿ ನಡೆದುದ್ದನ್ನೇ ನೋಡಿ. ಮಟ್ಟದಲ್ಲಿ ಜೆಡಿಎಸ್ ಮೊದಲು ಸ್‌ನೊಂದಿಗೆ, ನಂತರ ಬಿಜೆಪಿಯೊಂದಿಗೆ ಾವಳಿ ಸರ್ಕಾರ ರಚಿಸಿದರೂ ಗದುಗಿನ ಎಸ್ ಕಾರ್ಯಕರ್ತರು ಮಾತ್ರ ಬಿಜೆಪಿಯ ದ್ಧ ಸೆಟಗೊಂಡೇ ಇದ್ದರು. ರವಿ ದಂಡಿನ, ಲ್ ಮುಳಗುಂದ, ಅಂದಾನಯ್ಯ ಕೋಟಿಮಠ, ಬಸವರಾಜ್ ಅಪ್ಪಣ್ಣನ ರಮೇಶ್ ಕಲ್ಬುರ್ಗಿಗಳಂತಹ ರ್ಯಕರ್ತರ, ನಾಯಕರ ದೊಡ್ಡ ದಂಡೇ ನಲ್ಲಿದೆ. ಬಹಳ ಕ್ರಿಯಾಶೀಲವಾಗಿರುವ ಟೀಮ್ ಬಿಜೆಪಿ ನಾಯಕರ ದಗಲ್ಬಾಜಿ ಗಳನ್ನು ಬಯಲಿಗೆಳೆಯುತ್ತಲೇ ಇದೆ. ಕಾರಣಕ್ಕಾಗಿಯೇ ಬಿಜೆಪಿ ನಾಯಕರ ಣ್ಣಿಗೂ ತುತ್ತಾಗಿದೆ.


ದಾವಲ್ ಮುಳಗುಂದ


ರವಿ ದಂಡಿನ

ಮೊನ್ನೆ ನಡೆದದ್ದು ಈ ಜೆಡಿಎಸ್ ನ ಇಂತಹ ಒಂದು ಪ್ರತಿಭಟನೆ.


ಗದಗ ಜಿಲ್ಲೆಯ ಗಜೇಂದ್ರಗಡ ರೋಣ ತಾಲ್ಲೂಕಿನ ಪ್ರಮುಖ ಪಟ್ಟಣ. ರೋಣದ ಎಮ್ಮೆಲ್ಲೆ ಕೊಳಕಪ್ಪ ಕ್ಷಮಿಸಿ ಕಳಕಪ್ಪ ಬಂಡಿಯ ತವರೂರು ಕೂಡ ಈ ಕೊಳಕಪ್ಪನಂಥ ಗೂಂಡಾನನ್ನು ಎರಡೆರಡು ಗೆಲ್ಲಿಸಿದ ತಪ್ಪಿಗೆ ರೋಣದ ಜನ ಪಶ್ಚಾತ್ತಾಪ ತ್ತಿರುವುದಂತೂ ಸತ್ಯ. ಏಕೆಂದರೆ, ಈತ ತನ್ನ ಕ್ಷೇತ್ರದಲ್ಲಿ ದ ಕೆಟ್ಟ ದಂಧೆಗಳಿಲ್ಲ. ಇವನ ಕಾರಣಕ್ಕಾಗಿಯೇ ಅದೆಷ್ಟೋ ರೈತ ಕುಟುಂಬಗಳು ಕಣ್ಣೀರಿನಲ್ಲಿ ಕೈತೊಳೆಯುತ್ತಿರುವುದು ಸುಳ್ಳಲ್ಲ.

ಇಂಥ ಕೊಳಕಪ್ಪ ಗಜೇಂದ್ರಗಡ ಸರಹದ್ದಿನ 123 ಎಕರೆ ಫಲವತ್ತಾದ ಜಮೀನನ್ನು ರೈತರಿಂದ ಕಿತ್ತುಕೊಂಡು ಕೈಗಾರಿಕಾ ವಸಾಹತು ಮಾಡಲು ಹೊರಟಿದ್ದಾನೆ. ಅದಕ್ಕಾಗಿ ಯಾರ್‍ಯಾರಿಂದ ಎಷ್ಟೆಷ್ಟು ತಿನ್ನಬೇಕೋ ಅಷ್ಟನ್ನು ತಿಂದು ತೇಗಿದ್ದಾನೆ. ಅದೇ ರೀತಿಯಲ್ಲಿ ಹೈನೋದ್ಯಮ ಪ್ರಧಾನವಾಗಿರುವ ಪುರ್ತಗೇರಿ ಎಂಬ ಪುಟ್ಟ ಹಳ್ಳಿಯಲ್ಲಿಯೂ ರೈತರ 51 ಎಕರೆ ಫಲವತ್ತಾದ ಭೂಮಿಯನ್ನು ಹೌಸಿಂಗ್ ಬೋರ್ಡ್ ಮನೆ ನಿರ್ಮಾಣಕ್ಕಾಗಿ ಕಸಿದುಕೊಳ್ಳುತ್ತಿದ್ದಾನೆ. ಈತ ಕೈಗಾರಿಕಾ ವಸಾಹತುಗಾಗಿ, ಗೃಹ ನಿರ್ಮಾಣಕ್ಕಾಗಿ ಈ ರೀತಿ ರೈತರ ಜಮೀನು ಕಿತ್ತುಕೊಳ್ಳುತ್ತಾ ಹೋದರೆ ಆ ತುಂಡು ಭೂಮಿಯನ್ನೇ ನೆಚ್ಚಿಕೊಂಡಿರುವ ನೂರಾರು ರೈತ ಕುಟುಂಬಗಳು ಎಲ್ಲಿಗೆ ಹೋಗಬೇಕು? ಸಮರ್ಪಕವಾದ ಪರಿಹಾರ, ಪುನರ್ವಸತಿಗಳನ್ನು ಮಾಡದೇ ರೈತರ ಜಮೀನನ್ನು ಕಿತ್ತುಕೊಂಡರೆ ಬೇಸಾಯ ಬಿಟ್ಟು ಬೇರೆ ಕಸುಬು ಗೊತ್ತಿಲ್ಲದ ಈ ಅನ್ನದಾತರು ಬದುಕುವುದಾದರೂ ಹೇಗೆ?

ಹೊಟ್ಟೆಗೆ ಅನ್ನ ತಿನ್ನುವುದಾಗಿದ್ದರೆ ಕೊಳಕಪ್ಪ ಇಂತಹ ಪ್ರಶ್ನೆಗಳ ಬಗ್ಗೆ ಒಂದಿಷ್ಟು ಗಂಭೀರವಾಗಿ ಯೋಚಿಸುತ್ತಿದ್ದ. ಆದರೆ ಆತ ಅದೇನು ತಿನ್ನುತ್ತಾನೋ ಗೊತ್ತಿಲ್ಲ. ರೈತರನ್ನು ಒಂದು ಕಡೆಯಿಂದ ಮುಕ್ಕುವುದಕ್ಕೆ ಶುರು ಮಾಡಿದ್ದಾನೆ. ಮೊದಲ ಅವಧಿಗೆ ಎಮ್ಮೆಲ್ಲೆಯಾದಾಗ ದರ್ಗಾ ಕೆಡುವುದಕ್ಕೆ ಸ್ಕೆಚ್ ಹಾಕುವುದರಲ್ಲಿ, ಮುಸ್ಲಿಮರ ವಿರುದ್ಧ ರಕ್ತ ಕಾರುವುದರಲ್ಲಿ, ಪೊಲೀಸರಿಗೆ ಹೊಡೆಯುವುದರಲ್ಲಿಯೇ ತನ್ನ ಅಧಿಕಾರಾವಧಿಯ ಅರ್ಧ ಸಮಯವನ್ನು ಕಳೆದಿದ್ದ. ಈಗ ಎರಡನೇ ಬಾರಿ ಎಮ್ಮೆಲ್ಲೆಯಾದ ಮೇಲಂತೂ ತಮ್ಮದೇ ಸರ್ಕಾರ ಅಧಿಕಾರದಲ್ಲಿರುವುದನ್ನು ಬಳಸಿಕೊಂಡು ರೈತರನ್ನು ಸುಲಿದು ದುಡ್ಡು ಮಾಡುವ ದಂಧೆಯಲ್ಲಿ ತೊಡಗಿದ್ದಾನೆ.

'ಕರ್ನಾಟಕ ಕೈಗಾರಿಕಾಭಿವೃದ್ಧಿ ಮಂಡಳಿ'ಯ ಮೂಲಕ ಗೌಡಗೇರಿಯ ಜಮೀನನ್ನು ವಶಪಡಿಸಿಕೊಂಡ ಮೇಲೆ ತನ್ನ ಹಿಂಬಾಲಕ, ಕಸಬರಿಗೆ ಅವತಾರದ ಚೆನ್ನು ಪಾಟೀಲ್‌ನನ್ನು ಮುಂದಿಟ್ಟುಕೊಂಡು ಅಲ್ಲೊಂದು ಕೈಗಾರಿಕಾ ವಸಾಹತು ಸ್ಥಾಪಿಸಲು ಹೊರಟಿದ್ದಾನೆ. ರೈತರ ಪ್ರಬಲ ವಿರೋಧವಿದ್ದಾಗಿಯೂ ಕೇರ್ ಮಾಡದೇ ಜಮೀನು ಸ್ವಾಧೀನಪಡಿಸಿಕೊಳ್ಳಬೇಕೆಂದು ಕೆಐಎಡಿಬಿ ಮೇಲೆ ಒತ್ತಡ ತಂದಿದ್ದಾನೆ. ಇವನ ಈ ಒತ್ತಡ ರಾಜಕಾರಣ ಈಗಾಗಲೇ ದಾಖಲೆ ಸಮೇತವಾಗಿ ಬಹಿರಂಗಗೊಂಡಿದೆ.

ಕಳಕಪ್ಪನ ರೈತಪೀಡನೆ, ಭೂಕಬಳಿಕೆಯ ಬಗ್ಗೆ ಚೆನ್ನಾಗಿ ಗೊತ್ತಿದ್ದರೂ ಕಾಂಗ್ರೆಸ್ ಪಕ್ಷ ತನ್ನ ನವರಂಧ್ರಗಳನ್ನೂ ಮುಚ್ಚಿಕೊಂಡು ಕುಳಿತಿದ್ದರೆ ಒಂದಿಷ್ಟು ಪ್ರತಿರೋಧ ಒಡ್ಡುತ್ತಿರುವವರು ಜೆಡಿಎಸ್ ಮತ್ತು ರಕ್ಷಣಾ ವೇದಿಕೆಯ ಕಾರ್ಯಕರ್ತರು. ಅದರಲ್ಲೂ ವಿಶೇಷವಾಗಿ ಜೆಡಿಎಸ್‌ನ ದಾವಲ್ ಮುಳಗುಂದ ಎಂಬ ಎಡಚಿಂತನೆಯ ಪ್ರಭಾವವಿರುವ ವ್ಯಕ್ತಿ ಕಳಕಪ್ಪನ ಕಬಳಿಕೆಯ ವಿರುದ್ಧ ಸಮರವನ್ನೇ ಸಾರಿದ್ದರು. ಇದರಿಂದ ಕಳಕಪ್ಪನೂ ಕೆಂಡಾಮಂಡಲವಾಗಿದ್ದ. ಅಷ್ಟರಲ್ಲಿಯೇ ಡಿಸೆಂಬರ್ 6ಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ ಗದಗ-ಬಾಗಲಕೋಟೆ ಬ್ರಾಡ್‌ಗೇಜ್ ರೈಲು ಉದ್ಘಾಟನೆಗೆ ಬರುವುದು ಖಾತ್ರಿಯಾಗುತ್ತಿದ್ದಂತೆ ಯಡಿಯೂರಪ್ಪನ ವಿರುದ್ಧ ಕಪ್ಪು ಬಾವುಟ ಪ್ರದರ್ಶನ ಮಾಡುವ ಮೂಲಕ ಕಳಕಪ್ಪನ ರೈತಪೀಡನೆಯನ್ನು ರಾಜ್ಯಮಟ್ಟದಲ್ಲಿ ಗಮನಕ್ಕೆ ತರಲು ದಾವಲ್ ಪ್ಲಾನ್ ಮಾಡಿದರು. ಇದರ ವಾಸನೆ ಬಡಿದ ಕಳಕಪ್ಪ ಪೊಲೀಸರಿಗೆ ರಾತ್ರಿ ಪಾರ್ಟಿ ಕೊಟ್ಟನೋ ಅಥವಾ ಅಧಿಕಾರ ಬಳಸಿಕೊಂಡು ಆರ್ಡರ್ ಕೊಟ್ಟನೋ ಗೊತ್ತಿಲ್ಲ. ಅಂತೂ ಪೊಲೀಸರು ಮಾತ್ರ ದಾವಲ್ ಹಿಂದೆ ಬಿದ್ದುಬಿಟ್ಟರು. ಆದರೂ ಮುಖ್ಯಮಂತ್ರಿಗೆ ಕಪ್ಪು ಬಾವುಟ ತೋರಿಸುವುದನ್ನು ಅವರಿಂದ ತಪ್ಪಿಸಲಾಗಲಿಲ್ಲ. ತೀರ್ಮಾನದಂತೆಯೇ ಮೊನ್ನೆ ಡಿಸೆಂಬರ್ 6ರಂದು ಎಪಿಎಂಸಿಯಲ್ಲಿನ ವಿವೇಕಾನಂದ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ 'ಆರೋಗ್ಯ ಕವಚ-108' ಕಾರ್ಯಕ್ರಮದ ಉದ್ಘಾಟನೆಗೆ ಯಡ್ಡಿ ಬರುತ್ತಿದ್ದಂತೆ ದಾವಲ್ ನೇತೃತ್ವದ ಜೆಡಿಎಸ್ ದಂಡು ಕಪ್ಪು ಬಾವುಟಗಳೊಂದಿಗೆ ಅಲ್ಲಿಗೆ ಲಗ್ಗೆಯಿಟ್ಟೇಬಿಟ್ಟಿತು.



ಕಳಕಪ್ಪನ ಆದೇಶ ಸಿಗುತ್ತಿದ್ದಂತೆಯೇ ಸರ್ಕಲ್ ಇನ್ಸ್‌ಪೆಕ್ಟರ್ ಓಲೇಕಾರ ಎಂಬ ಓತಿಕ್ಯಾತ ತನ್ನ ಪೊಲೀಸ್ ಪಡೆಯೊಂದಿಗೆ ದಾವಲ್ ತಂಡದ ಮೇಲೆ ಎರಗಿಬಿಟ್ಟಿತು. ಪೊಲೀಸರು ಅವರ ಬಟ್ಟೆಗಳನ್ನೆಲ್ಲಾ ಹರಿದು, ಮೈಮೇಲೆ ತೀವ್ರ ಗಾಯಗಳಾಗುವಂತೆ ಮನಸೋಯಿಚ್ಛೆ ಥಳಿಸಿ ಅವರನ್ನೆಲ್ಲಾ ಜೀಪ್‌ನಲ್ಲಿ ಪ್ಯಾಕ್ ಮಾಡಿಕೊಂಡು ಹೋದರು.

ಸನ್ಮಾನ್ಯ ಮುಖ್ಯಮಂತ್ರಿಗಳ ಎದುರುಗಡೆಯೇ ಪೊಲೀಸರ ಈ ರುದ್ರನರ್ತನ ನಡೆಯುತ್ತಿತ್ತು. ಇದನ್ನೆಲ್ಲಾ ನೋಡಿದ ಯಡ್ಡಿಯ ಮುಖದಲ್ಲೂ ಮಂಗಳಾರತಿ ಮಾಡಿಸಿಕೊಂಡು ಭಾವವಿತ್ತು. ಪೆಚ್ಚುಮೋರೆ ಹಾಕಿಕೊಂಡು ರಿಬ್ಬನ್ ಕತ್ತರಿಸಿ ಅಹವಾಲುಗಳನ್ನು ತಂದಿದ್ದ ಜನರ ಕಡೆಯೂ ತಿರುಗಿ ನೋಡದೇ ಅಲ್ಲಿಂದ ಕಾಲ್ಕಿತ್ತ.

ಕಳಕಪ್ಪ ಬಂಡಿ ಮೊದಲೇ ಕೊಳಕು ಗೂಂಡಾ. ಅಂಥವನಿಗೆ ರಾಜ್ಯದ ಮುಖ್ಯಮಂತ್ರಿಯೇ ಸಾಥ್ ನೀಡಿದ ಮೇಲೆ, ತನ್ನ ಆರ್ಡರ್‌ಗಳನ್ನು ದ್ವಾರಪಾಲಕನಂತೆ ಪಾಲಿಸುವುದಕ್ಕೆ ಸಿಪಿಐ ಓಲೇಕಾರ್‌ನಂತ ಓತಿಕ್ಯಾತವಿದ್ದ ಮೇಲೆ ಇನ್ನೇನು ನಡೆಯುತ್ತದೆ ಹೇಳಿ?

■ ಹುರುಳಿಕುಪ್ಪಿ ವಿನಯ್



ಗುಲಬರ್ಗಾ ನಗರಪಾಲಿಕೆಯಿಂದ ನಿರ್ಗಮಿಸಿದ 'ಹಂದಿ'ಗಳು

ಗುಲಬರ್ಗಾ ಮಹಾನರಕ ಪಾಲಿಕೆಯ ಅಮೇಧ್ಯ ತಿಂದ ಹಂದಿಗಳ ಬಗ್ಗೆ 'ಲಂಕೇಶ್' ವಾರ ಪತ್ರಿಕೆ ತನ್ನ ಕ್ಷಕಿರಣವನ್ನು ಈ ಹಿಂದೆಯೇ ಬೀರಿತ್ತು. ಪತ್ರಿಕೆಯ ಹಾಗೂ ರಾಜುಕುಳಗೇರಿ ಎಂಬ ಗುಲಬರ್ಗಾದ ಯುವ ಹೋರಾಟಗಾರನ ಪ್ರಯತ್ನದ ಫಲವಾಗಿ ಇದೀಗ ಈ 'ಹಂದಿ'ಗಳೆಲ್ಲ ತಾವು ತಿಂದ ಅಮೇಧ್ಯ ಕಕ್ಕುವ ಪರಿಸ್ಥಿತಿ ನಿರ್ಮಾಣವಾಗಿದೆ.

ತೀರಾ ಇತ್ತೀಚೆಗೆ ಮಹಾನಗರ ಪಾಲಿಕೆಯ ಕಮಿಷನರ್ ಆಗಿ ನಿಯುಕ್ತಗೊಂಡ ಡಾ.ಕೆ.ಜಗದೀಶ್ ಏಳು ಜನ ಇಂಜಿನಿಯರ್‌ಗಳಾದ ಮೊಹ್ಮದ ಹಾಜಿ, ಮಲ್ಲಿಕಾರ್ಜುನ ಅಲ್ಲೀಪೂರ, ಆರೀಫ್ ಹುಸೇನ್, ಕೆ.ವಿ.ಜೋಷಿ, ರವಿ ಪಾಟೀಲ, ಮಾಜೇದ್ ಹಾಗೂ ಆರೀಫ್ ಹುಸೇನ್ ಎಂಬುವವರನ್ನು ಅಮಾನತ್ತಿನಲ್ಲಿಟ್ಟಿದ್ದಾರೆ. ಇದಕ್ಕೆಲ್ಲ ಶಿಖರಪ್ರಾಯವೆಂಬಂತೆ ಮುಧೋಳ ಎಂಬ ಪಾಲಿಕೆಗೆ ಬಹಳಷ್ಟು ವರ್ಷಗಳಿಂದ ಝಂಡಾ ಊರಿಕೊಂಡು ಕುಳಿತಿದ್ದ ಕಮಿಷನರ್ ಎಂಬ 'ಹಂದಿ'ಯನ್ನು ಮೊದಲು ಹೊರಗೆ ಅಟ್ಟಲಾಗಿದೆ.


ರಾಜುಕುಳಗೇರಿ

ಪಾಲಿಕೆಗೆ ಬರುವ ರಾಜ್ಯ ಹಣಕಾಸು ಆಯೋಗ (ಎಸ್.ಎಫ್.ಟಿ), ಸಿ.ಎಂ. ಪ್ಯಾಕೇಜ್, ಅಭಿವೃದ್ಧಿ ಅನುದಾನ ಹೀಗೆ ಹತ್ತಾರು ಅನುದಾನಗಳಡಿಯ ಹಣವನ್ನು ತಮ್ಮ ಜೇಬಿಗೆ ಇಳಿಸಿಕೊಂಡು (30 ರಿಂದ 40 ಲಕ್ಷ ರೂಪಾಯಿಗಳನ್ನು) ನಗರಪಾಲಿಕೆಯನ್ನು ನರಕಪಾಲಿಕೆಯನ್ನಾಗಿಸಿದ್ದರು. ಆದರೆ ರಾಜು ಕುಳಗೇರಿ ಎಂಬ ಯುವಕ ಮಾತ್ರ ಇವರನ್ನು ನಕ್ಷತ್ರಿಕನಂತೆ ಬೆನ್ನುಹತ್ತಿ ಲೋಕಾಯುಕ್ತರಿಗೆ, ಮಹಾನಗರ ಪಾಲಿಕೆಯ ರಾಜ್ಯದ ಕಮೀಷನರ್‌ಗೂ ದೂರು ನೀಡಿದ್ದ, ಪತ್ರಿಕೆಗಳಿಗೂ ಮಾಹಿತಿ ನೀಡಿದ್ದ. ಈ ಒತ್ತಡಗಳಿಗೆ ಕೊನೆಗೂ ಮಣಿದ ಆಡಳಿತ ಯಂತ್ರ ಈ ಹಂದಿಗಳನ್ನು ಇದೀಗ ಹೊರ ಹಾಕಿ ಪಾಲಿಕೆಯನ್ನು ಸ್ವಚ್ಛಗೊಳಿಸಿದೆ.

ಹೇಗಾದರೂ ಸೈ ಮತ್ತೆ ತಮ್ಮ ಮೂಲ ಬಿಲವನ್ನು ಸೇರಿಕೊಂಡು ಮತ್ತದೆ ಕಬಳಿಕೆಯನ್ನು ಮುಂದುವರೆಸಬೇಕೆಂಬ ಉಮ್ಮೇದಿನಲ್ಲಿರುವ ಈ 'ಹಂದಿ'ಗಳಿಗೆ ನಗರಾಭಿವೃದ್ಧಿ ಸಚಿವ ಸರಿಯಾದ ಜಾಗ ತೋರಿಸಬೇಕಿದೆ. ■

ಮತಾಂತರ ಎಂದ ತಕ್ಷಣ ಅವರು ಬೆಚ್ಚಿಬೀಳುವುದೇಕೆ?

ಮೇಲ್ವರ್ಗದ ಜನರು ಮತಾಂತರ ಎಂದ ತಕ್ಷಣ ಬೆಚ್ಚಿಬೀಳುವುದೇಕೆ? ಅವರು ತಮ್ಮ ಧರ್ಮಕ್ಕೆ ಯಾರೂ ಮತಾಂತರವಾಗುವುದಿಲ್ಲವೆಂದು ಆಗಲೇ ತೀರ್ಮಾನಿಸಿಬಿಟ್ಟಿದ್ದಾರೆಯೇ? ಹೀಗೆ ತೀರ್ಮಾನಿಸುವುದು ತಾವು ಪ್ರತಿಪಾದಿಸುತ್ತಿರುವ ಧರ್ಮದ ಬುನಾದಿ ದುರ್ಬಲವೆಂದು ಬಹಿರಂಗವಾಗಿ ಅಂಗೀಕರಿಸುವುದಕ್ಕೆ ತುಲ್ಯವಲ್ಲವೇ?

ಸಂಘ ಪರಿವಾರದ ಹಿತಾಸಕ್ತಿಗೆ ಪೂರಕವಾದ ವಿಷಯಗಳಲ್ಲಿ ಮನಸೋ ಇಚ್ಛೆ ಎಸ್ಸೆಮ್ಮೆಸ್ ಸಂಖ್ಯೆಯನ್ನು ಮುದ್ರಿಸಿಕೊಳ್ಳುತ್ತಿರುವ, ಪರಿವಾರದ ಅಘೋಷಿತ ದೈನಿಕವಾಗಿರುವ ವಿಜಯ ಕರ್ನಾಟಕವು ಮತಾಂತರದ ವಿಷಯದಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ತಿನ ಮಾರ್ಗದರ್ಶಕ ಎಸ್.ಎಲ್. ಭೈರಪ್ಪನವರ ಲೇಖನವನ್ನು ತರಿಸಿಕೊಂಡು ಕ್ರೈಸ್ತರ ನೊಂದ ಮನಸ್ಸಿನ ಗಾಯಕ್ಕೆ ಬರೆ ಎಳೆದಿತ್ತು. 'ಮತಾಂತರ' ಕುರಿತ ಸಂವಾದವನ್ನು ಹೊಸ(?) ಎತ್ತರಕ್ಕೆ ಕೊಂಡೊಯ್ದು ಸತ್ಯದ ಮೇಲೆ ಬೆಳಕು ಚೆಲ್ಲುವ ಜವಾಬ್ದಾರಿಯನ್ನು ಓದುಗರ ಮೇಲೆ ಹೊರಿಸಿದ್ದ ತಾನು ಈ ಸಂವಾದಕ್ಕೆ ವೇದಿಕೆಯಾಗಿದ್ದೇನೆಯೇ ಹೊರತು, ವಕ್ತಾರನಲ್ಲ ಎಂದು ಬರೆದುಕೊಂಡಿದ್ದ ಆ ಪತ್ರಿಕೆ ಭೈರಪ್ಪನವರ ಉಪಸಂಹಾರದೊಂದಿಗೆ ಸಂವಾದವನ್ನು ಕೊನೆಗೊಳಿಸಿದ್ದು ಅದರ ಕೇಸರಿ ಮುಖವನ್ನು ಮತ್ತೆ ಸಾಬೀತುಪಡಿಸಿತ್ತು.

"ಒಮ್ಮೆ ಮನೆಗೆ ಕಳ್ಳರು ನುಗ್ಗಿದರೆ ಮತ್ತೊಮ್ಮೆ ನುಗ್ಗದಂತೆ ಮಾಡಲು ಮನೆಯ ಕಿಟಕಿ ಬಾಗಿಲು ಸೂರು ಗೋಡೆಗಳನ್ನು ಗಟ್ಟಿಯಾಗಿ ಕಟ್ಟಿಕೊಳ್ಳಬೇಕು. ಹಲವು ಬಾರಿಯ ಅನುಭವದಿಂದಲೂ ಪಾಠ ಕಲಿಯದೆ ಮನೆಯನ್ನು ಹಾಗೆಯೇ ಬಿಟ್ಟುಬಿಟ್ಟರೆ ಆ ಮನೆ ರಿಪೇರಿಗೆ ಅರ್ಹವಾಗದಷ್ಟು ಕೆಟ್ಟದಾಗಿದೆ ಎಂದು ಅರ್ಥವಲ್ಲವೇ? ಎಂತಹ ತೀಕ್ಷ್ಣ ಬಿಸಿಲು, ಬಿರುಗಾಳಿ, ಮಳೆಗೂ ಆ ಮನೆಯಲ್ಲಿಯೇ ಉಳಿದುಕೊಂಡು ಉಸಿರುಕಟ್ಟಿ ಸಾಯಬೇಕೆಂದು ಬಲಾತ್ಕರಿಸುವುದು ಅಮಾನವೀಯ ನಡವಳಿಕೆಯಾಗುವುದಿಲ್ಲವೇ?" ಎಂದು ಭೈರಪ್ಪ ವಾದಿಸುತ್ತಾರೆ. ಆದರೆ ಮಾನವೀಯ ಅನುಕಂಪವುಳ್ಳವರು ರಿಪೇರಿಯ ಸಾಧ್ಯತೆಯೇ ಇಲ್ಲದ ಆ ಮನೆಯನ್ನು ತೊರೆದು ಗಟ್ಟಿಮುಟ್ಟಾದ ಮನೆಯ ಆಶ್ರಯ ಪಡೆಯಿರಿ ಎಂದು ಹೇಳಿದರೆ ಅದು ಕುತರ್ಕವಾಗುವುದು ಹೇಗೆ? ಇನ್ನು ರಿಪೇರಿಯ ಸಾಧ್ಯತೆ ಇದ್ದರೂ, ರಿಪೇರಿ ಮಾಡದೆ ಹಾಗೆಯೇ ಬಿಟ್ಟುಬಿಡುವವರ ಮಾನಸಿಕ ಆರೋಗ್ಯವನ್ನು ತಪಾಸಣೆಗೆ ಒಳಪಡಿಸಬೇಕೆಂದು ಹೇಳಿದರೆ ಅದನ್ನು ತಪ್ಪೆನ್ನಲಾದೀತೆ? ಜಾತಿ ಪದ್ಧತಿಯಿಂದ ರೋಸಿಹೋದ ಅಸ್ಪೃಶ್ಯರ ಮಟ್ಟಿಗೆ ರಿಪೇರಿಗೆ ಅನರ್ಹವಾದ ಮನೆ ಸುರಕ್ಷಿತ ತಾಣವಾಗುವುದು ಹೇಗೆ?

ಡಾ. ಅಂಬೇಡ್ಕರ್‌ರವರ ದೂರದೃಷ್ಟಿಯ ಪರಿಣಾಮವಾಗಿ ನಮ್ಮ ರಾಷ್ಟ್ರವು ಪ್ರಜಾಸತ್ತಾತ್ಮಕ ಸ್ವರೂಪದ ಸಂವಿಧಾನವನ್ನು ಅಂಗೀಕರಿಸುವಂತಾಯಿತು. ಸಂವಿಧಾನ ಸಭೆಯಲ್ಲಿ ಅಂಬೇಡ್ಕರ್ ಮಾಡಿದ ಭಾಷಣ ಮತ್ತು ಅದಕ್ಕೆ ವ್ಯಕ್ತವಾದ ಪ್ರತಿಕ್ರಿಯೆಗಳು ಕಡತಗಳಲ್ಲಿ ದಾಖಲಿದೆ. ಅಂಬೇಡ್ಕರ್‌ರವರ ಪ್ರಖರ ವಾದದ ಮುಂದೆ ಮೇಲುಜಾತಿಯವರಿಗೆ ಅವರ ವಿಚಾರಗಳನ್ನು ಅನುಮೋದಿಸುವುದಲ್ಲದೆ ಬೇರೆ ದಾರಿ ಇರಲಿಲ್ಲ. ಇಂದು ಅಸ್ಪೃಶ್ಯರು ಸ್ವಲ್ಪವಾದರೂ ಚೇತರಿಸಿಕೊಂಡಿದ್ದರೆ ಅದಕ್ಕೆ ಸಂವಿಧಾನದ ಪ್ರಜಾಸತ್ತಾತ್ಮಕ ಸ್ವರೂಪ ಕಾರಣವೇ ಹೊರತು ಮನುವಾದಿಗಳ ಔದಾರ್ಯವಲ್ಲ. ಭೈರಪ್ಪನವರಿಗೆ ಮನುಸ್ಮೃತಿಯ ಬಗ್ಗೆ ಅಷ್ಟೊಂದು ಅಸಹನೆ ಇರುವುದಾದರೆ ಸುತ್ತಿ ಬಳಸಿ ಮಾತನಾಡುವುದಕ್ಕಿಂತ ಅದರ ರದ್ದತಿಗೆ ಮಠಾಧಿಪತಿಗಳನ್ನು ನೇರವಾಗಿ ಒತ್ತಾಯಿಸಬಹುದಲ್ಲವೇ?

ಅಸ್ಪೃಶ್ಯರ ಮತಾಂತರವನ್ನು ಆಕ್ಷೇಪಿಸುತ್ತಿರುವ ಭೈರಪ್ಪನವರು ಮನುಸ್ಮೃತಿಯ ಕೆಲವು ಶ್ಲೋಕಗಳನ್ನು ಗಮನಿಸಬೇಕಾಗಿದೆ. ಶೂದ್ರನಾದವನು ಹಕ್ಕಿನಿಂದ ಬ್ರಾಹ್ಮಣನೊಡನೆ ಧರ್ಮದ ಕುರಿತು ಚರ್ಚಿಸಲು ಬಂದರೆ ಕಾಸಿದ ಎಣ್ಣೆಯನ್ನು ಆತನ ಮುಖಕ್ಕೆ ಎರಚಿ, ಕಿವಿಯಲ್ಲಿ ಹಾಕಿ ಮೈಮೇಲೆ ಸುರಿಯಬೇಕು (ಮನುಸ್ಮೃತಿ 8/272). ಶೂದ್ರನಾದವನು ಬ್ರಾಹ್ಮಣನ ಸರಿಸಮಾನ ಕುಳಿತುಕೊಳ್ಳಲು ಬಂದರೆ, ಕಬ್ಬಿಣದ ಬರೆಕೊಟ್ಟು ಗುರುತು ಹಾಕಬೇಕು ಅಥವಾ ತಿಗ ಕಿತ್ತಬೇಕು (8/281). ಬ್ರಾಹ್ಮಣನಾದವನು ಯಾವುದೇ ಸಂಕೋಚವಿಲ್ಲದೆ ಶೂದ್ರನ ಆಸ್ತಿಯನ್ನು ಕಸಿದುಕೊಳ್ಳಬಹುದು. ಬ್ರಾಹ್ಮಣರ ಸೇವೆಗಾಗಿಯೇ ಹುಟ್ಟಿದ ಶೂದ್ರನಿಗೆ ತನಗಾಗಿ ಯಾವುದೇ ಆಸ್ತಿ ಮಾಡುವ ಹಕ್ಕಿಲ್ಲ. ಅವನ ಗಳಿಕೆಯೆಲ್ಲವೂ ಅವನ ಸ್ವಾಮಿಯಾದ ಬ್ರಾಹ್ಮಣನದು (8/817).



ಬ್ರಾಹ್ಮಣನು ಎಷ್ಟೇ ಮೂರ್ಖ ಮತ್ತು ದುರಾಚಾರಿಯಾಗಿದ್ದರೂ ಪೂಜ್ಯನೇ ಆಗಿರುತ್ತಾನೆ. ಶೂದ್ರನು ಎಷ್ಟೇ ಸದಾಚಾರಿ ಮತ್ತು ವಿದ್ವಾಂಸನಾಗಿದ್ದರೂ ಗೌರವಕ್ಕೆ ಅರ್ಹನಲ್ಲ. ಯಾಕೆಂದರೆ ಯಾವನೇ ಮೂರ್ಖನು ಕೆಟ್ಟ ಆಕಳನ್ನು ಬಿಟ್ಟು ಒಳ್ಳೆಯ ಕತ್ತೆಯ ಹಾಲನ್ನು ಹಿಂಡಲಾರನು (8/33). ಶೂದ್ರರ ಹತ್ಯೆಯು ಬೆಕ್ಕು, ಮುಂಗುಲಿ, ಕಪ್ಪೆ, ನಾಯಿ, ಕತ್ತೆ, ಉಡ, ಕಾಗೆ, ಗೂಬೆಗಳ ಹತ್ಯೆಗೆ ಸಮಾನ (11/131). ಇಂತಹ ನೂರಾರು ಶ್ಲೋಕಗಳು ಮನುಸ್ಮೃತಿಯಲ್ಲಿದೆ. ಅವುಗಳನ್ನು ಬರೆದಿಟ್ಟವರು ಮುಸ್ಲಿಮರೇ ಅಥವಾ ಕ್ರೈಸ್ತರೇ?

ದಲಿತ ಗಂಡಸರು ಮೇಲುಜಾತಿಯ ಹೆಣ್ಣುಗಳನ್ನು ಮದುವೆಯಾಗುವುದು, ಸಾಮೂಹಿಕ ಸಹಭೋಜನ ಇತ್ಯಾದಿಗಳೆಲ್ಲವೂ ಅಪರೂಪದ ಪ್ರಸಂಗಗಳೇ ಹೊರತು ಮನುಧರ್ಮವು ಸಾರ್ವತ್ರಿಕವಾಗಿ ಅಂಗೀಕರಿಸಿದ ಕಾರ್ಯಗಳಲ್ಲ ಎಂದು ಹೇಳುವ ಭೈರಪ್ಪನವರು ಕೂದಲು ಸೀಳುವ ತರ್ಕಕ್ಕೆ ಜೋತುಬೀಳುವ ಬದಲು ನೇರವಾಗಿ ಮನುಸ್ಮೃತಿಯ ರದ್ಧತಿ ಮತ್ತು ಮಠಗಳಲ್ಲಿ ಶೂದ್ರ ದಲಿತ ಸ್ವಾಮಿಯನ್ನು ನೇಮಿಸಬೇಕೆಂದು ಹೇಳಿದರೆ ಹಿಂದೂ ಧರ್ಮದ ಔನ್ನತ್ಯಕ್ಕೆ ಒಳಿತಲ್ಲವೇ? ಆದರೆ ಅವರು ತಮ್ಮ ಲೇಖನದಲ್ಲಿ ಈ ಕೆಲಸವನ್ನು ಯಾವತ್ತೂ ಮಾಡಿಯೇ ಇಲ್ಲ. ಅಸ್ಪೃಶ್ಯನೊಬ್ಬ ಇಸ್ಲಾಮಿಗೆ ಮತಾಂತರವಾಗಿ ಧಾರ್ಮಿಕ ವಿಧಿವಿಧಾನಗಳನ್ನು ಕಲಿತರೆ ಆತ ಮಸೀದಿಯಲ್ಲಿ ಪ್ರಾರ್ಥನೆಯ ನೇತೃತ್ವ ವಹಿಸಿ ಇಮಾಮ್ ಆಗಿ ಕಾರ್ಯನಿರ್ವಹಿಸಬಲ್ಲ. ಹಿಂದೂಶಾಸ್ತ್ರಗಳನ್ನು ಅರಿತ ಅಸ್ಪೃಶ್ಯನಿಗೆ ದೇವಸ್ಥಾನಗಳಲ್ಲಿ ಸ್ವಾಮಿಯಾಗಿ ಕಾರ್ಯನಿರ್ವಹಿಸುವ ಅವಕಾಶವಿದೆಯೇ? ವೇದಗಳನ್ನು ಆಲಿಸಿದರೆ ಕಿವಿಗೆ ಕಾದ ಸೀಸದ ಎರಕ ಹೊಯ್ಯುವ ವ್ಯವಸ್ಥೆಯಲ್ಲಿ ಆತ ಆಲಿಸುವುದಾದರೂ ಹೇಗೆ? ಆಲಿಸದೆ ಕಲಿಯುವುದು ಸಾಧ್ಯವಿದೆಯೇ? ವರ್ಣಾಶ್ರಮ ಧರ್ಮದ ದಬ್ಬಾಳಿಕೆಯಿಂದ ಬೇಸತ್ತ ಶೂದ್ರರು, ದಲಿತರು ಮನುಷ್ಯರಾಗಿ ಬಾಳುವ ಕನಸಿನೊಂದಿಗೆ ಇಸ್ಲಾಮ್ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರವಾಗುತ್ತಲೇ ಇರುವುದನ್ನು ಕಂಡು ಅವರ ಮೇಲೆ ದಾಸ್ಯತ್ವದ ನೊಗವನ್ನು ಹೇರಿ, ಅದನ್ನೇ ಶಾಸನಬದ್ಧಗೊಳಿಸಿದ ವಿಚಾರಧಾರೆಯ ವಕ್ತಾರರು ಕೆರಳುವುದು ಸಹಜ.


ಕ್ರೈಸ್ತ ಮತ್ತು ಇಸ್ಲಾಮ್ ಧರ್ಮಗಳು ವಿವಿಧ ಸಂಸ್ಕೃತಿಗಳ ನಾಶಕ್ಕೆ ಕಾರಣವಾಯಿತೆಂದು ಹೇಳುವ ಭೈರಪ್ಪನವರು ವರ್ಣಾಶ್ರಮ ಧರ್ಮಕ್ಕೆ ಪ್ರತಿಭಟನೆಯಾಗಿ ಇಲ್ಲಿಯೇ ಹುಟ್ಟಿದ ಬೌದ್ಧಧರ್ಮದ ಗತಿ ಏನಾಯಿತೆಂದು ಮರೆಯುತ್ತಾರೆ. ಬೌದ್ಧ ಧರ್ಮದ ನಾಶಕ್ಕಾಗಿ ವರ್ಣಾಶ್ರಮದ ವಕ್ತಾರರು ಎಂತಹ ಅಮಾನವೀಯ ದೌರ್ಜನ್ಯವನ್ನೆಸಗಿದರೆಂದು ಇತಿಹಾಸದಲ್ಲಿ ದಾಖಲಾಗಿದೆ. ಬೌದ್ಧರ ಪ್ರಬಲ ಕೇಂದ್ರವಾಗಿದ್ದ ನಾಗಾರ್ಜುನಕೊಂಡವನ್ನು ಧ್ವಂಸಗೊಳಿಸಿ, ಅಲ್ಲಿದ್ದ ಬೌದ್ಧ ವಿಹಾರಗಳು, ಸ್ತೂಪಗಳು ಮತ್ತು ಸ್ಮಾರಕಗಳನ್ನು ನಿರ್ನಾಮಗೊಳಿಸಿದ ರೀತಿಯನ್ನು ನೋಡಿದರೆ ಎದೆ ನಡುಗುತ್ತದೆ. ತಮ್ಮ ಒಣ ವೇದಾಂತದಿಂದ ಬೌದ್ಧ ಧರ್ಮವನ್ನು ಸೈದ್ಧಾಂತಿಕವಾಗಿ ಸೋಲಿಸುವುದು ಅಸಾಧ್ಯವೆಂದು ಮನಗಂಡ ವರ್ಣಾಶ್ರಮದ ವಕ್ತಾರರು ಕೊನೆಗೆ ಬುದ್ಧ ಕೂಡಾ ವಿಷ್ಣುವಿನ ಅವತಾರವೆಂದು ರಾಜಿಗೆ ಬಂದು ಸೋಲೊಪ್ಪಿಕೊಂಡು ನಗೆಪಾಟಲಿಗೀಡಾದುದನ್ನು ಇತಿಹಾಸ ಮರೆಯುತ್ತದೆಯೇ? ಭಾರತದಲ್ಲಿ ಹುಟ್ಟಿದ ಹಲವಾರು ಚಿಂತನೆಗಳನ್ನು ವರ್ಣಾಶ್ರಮ ಧರ್ಮವು ನುಂಗಿ ನೀರು ಕುಡಿದಿದೆ. ಆದರೆ ಇಸ್ಲಾಮ್ ಮತ್ತು ಕ್ರೈಸ್ತ ಧರ್ಮದೊಂದಿಗೆ ಅದರ ಆಟ ನಡೆಯಲಿಲ್ಲ ಮತ್ತು ಮುಂದಕ್ಕೆ ನಡೆಯುವುದೂ ಇಲ್ಲ. ಭೈರಪ್ಪನವರ ಲೇಖನ ಓದಿದಾಗ ಅವರ ಅಸಹನೆ ಏಕೆಂದು ಅರ್ಥವಾಗುತ್ತದೆ.

ಇಸ್ಲಾಮ್ ವಿಗ್ರಹಾರಾಧನೆ ಮತ್ತು ಬಹುದೇವವಾದವನ್ನು ಖಂಡಿಸುತ್ತದೆ. ದೇವೇಕತ್ವವೇ ಅದರ ಬುನಾದಿ. ಹಾಗೆಂದ ಮಾತ್ರಕ್ಕೆ ಬೇರೆಯವರು ಆರಾಧಿಸುವ ಪೂಜಾ ಸಾಮಗ್ರಿಗಳನ್ನು ಗೇಲಿ ಮಾಡುವ ಅಧಿಕಾರ ಮುಸ್ಲಿಮರಿಗಿಲ್ಲ. ಕುರ್‌ಆನ್ ಇದನ್ನು ಸ್ಪಷ್ಟವಾಗಿ ಹೇಳಿದೆ. ಏಕೆಂದರೆ ವಿಗ್ರಹಗಳನ್ನು ಗೇಲಿ ಮಾಡಿದರೆ ಅವರು ಕುಪಿತರಾಗಿ ಪ್ರಪಂಚದೊಡೆಯನಾದ ಅಲ್ಲಾಹನನ್ನೇ (ದೇವ) ಗೇಲಿಮಾಡುವ ಸಾಧ್ಯತೆ ಇದೆ. ವಿಗ್ರಹಾರಾಧಕರಿಂದ ಆ ತಪ್ಪನ್ನು ಮಾಡಿಸುವ ತಪ್ಪು ಮುಸ್ಲಿಮರಿಂದ ಸಂಭವಿಸಬಾರದು ಎಂದರ್ಥ. ಚಂದ್ರ ಮತ್ತು ನಕ್ಷತ್ರಗಳನ್ನು ಭೈರಪ್ಪನವರು ಇಸ್ಲಾಮಿನ ಖಾತೆಗೆ ಜಮೆ ಮಾಡಿದ್ದಾರೆ. ಈ ಸೃಷ್ಟಿಗಳು ಇಸ್ಲಾಮಿನಲ್ಲಿ ಪವಿತ್ರ ಮತ್ತು ಪೂಜಾರ್ಹವಾಗಿದೆಯೆಂದು ಭೈರಪ್ಪ ಎಲ್ಲಿ ಕಲಿತರು? ಇಸ್ಲಾಮಿನಲ್ಲಿ ಪ್ರವಾದಿ ಸಂತರೂ ಸೇರಿದಂತೆ ಯಾರು ಮತ್ತು ಯಾವುದು ಕೂಡಾ ಒಂದು ಅಣುವಿನ ಸೃಷ್ಟಿಕರ್ತನೂ ಅಲ್ಲ. ಆದುದರಿಂದ ಅವರ‍್ಯಾರೂ ಆರಾಧನೆಗೆ ಅರ್ಹರಲ್ಲ. ಆರಾಧನೆಗಳೆಲ್ಲವೂ ಅಲ್ಲಾಹನಿಗೆ ಮಾತ್ರ ಮೀಸಲು.

ರಾಮಾಯಣ, ಮಹಾಭಾರತ, ವೇದೋಪನಿಷತ್, ಸ್ಮೃತಿ ಇತ್ಯಾದಿಗಳನ್ನು ಎಳೆದು ತಂದು ಮನುಧರ್ಮದ ದಾರ್ಶನಿಕ ಕಗ್ಗಂಟನ್ನು ಬಿಡಿಸಲು ಭೈರಪ್ಪನವರು ತುಂಬಾ ಹೆಣಗಾಡಿದ್ದಾರೆ. ಅವರ ಬರಹವನ್ನು ಓದುವಾಗ ಮನುಧರ್ಮ ಮಾಡುತ್ತಿರುವ ಅನಗತ್ಯ ಚರ್ಚೆ, ಅದರಲ್ಲಿರುವ ಅಕಾಲಿಕ ಕಲ್ಪನಾ ಚಿತ್ರಗಳು, ಸೃಷ್ಟಿಸುತ್ತಿರುವ ಕೃತಕ ಸಮಸ್ಯೆಗಳು, ಅದರಲ್ಲಿರುವ ಅನಿಯಂತ್ರಿತ ಭಾವನಾ ವಿಲಾಸಗಳು, ಲಂಗುಲಗಾಮಿಲ್ಲದ ಊಹಾಪೋಹ ಮತ್ತು ಸಂದೇಹಗಳನ್ನು ತಿಳಿಯುವುದು ಸಾಧ್ಯವಾಯಿತು. ಹಾವು, ಗೋವು, ಇಲಿ ಮುಂತಾದ ಸೃಷ್ಟಿಗಳು ದೇವರಾಗುವ ಜನಸಾಮಾನ್ಯರಿಗೆ ಅರ್ಥವಾಗದ ದಾರ್ಶನಿಕ ಕಗ್ಗಂಟು ಕೂಡಾ ಭಾರತದಲ್ಲಿ ಇಸ್ಲಾಮ್ ಮತ್ತು ಕ್ರೈಸ್ತ ಧರ್ಮದ ಪುರೋಗಮನಕ್ಕೆ ತನ್ನದೇ ಆದ ಕೊಡುಗೆ ನೀಡಿದೆ ಎನ್ನುವುದನ್ನು ಮರೆಯಲಾಗದು.

ಮುಸ್ಲಿಮರಾಗಲೀ, ಕ್ರೈಸ್ತರಾಗಲೀ ಮತಾಂತರವನ್ನು ನಿಷೇಧಿಸಬೇಕೆಂದು ಒತ್ತಾಯಿಸುವುದಿಲ್ಲ. ಅವರ ಧರ್ಮದಲ್ಲಿರುವವರು ಹಿಂದೂ ಧರ್ಮವನ್ನು ಸ್ವೀಕರಿಸಿದರೆ ಅದನ್ನು ಆಕ್ಷೇಪಿಸುವುದಿಲ್ಲ. ಆದರೆ ಮೇಲ್ವರ್ಗದ ಜನರು ಮತಾಂತರ ಎಂದ ತಕ್ಷಣ ಬೆಚ್ಚಿಬೀಳುವುದೇಕೆ? ಅವರು ತಮ್ಮ ಧರ್ಮಕ್ಕೆ ಯಾರೂ ಮತಾಂತರವಾಗುವುದಿಲ್ಲವೆಂದು ಆಗಲೇ ತೀರ್ಮಾನಿಸಿಬಿಟ್ಟಿದ್ದಾರೆಯೇ? ಹೀಗೆ ತೀರ್ಮಾನಿಸುವುದು ತಾವು ಪ್ರತಿಪಾದಿಸುತ್ತಿರುವ ಧರ್ಮದ ಬುನಾದಿ ದುರ್ಬಲವೆಂದು ಬಹಿರಂಗವಾಗಿ ಅಂಗೀಕರಿಸುವುದಕ್ಕೆ ತುಲ್ಯವಲ್ಲವೇ? ನಿಮ್ಮ ಧರ್ಮದಲ್ಲಿ ಮೋಕ್ಷ ಸಾಧ್ಯವಿದೆಯೆಂದಾದರೆ ಜನರನ್ನು ಅದರ ಸ್ವೀಕಾರದಿಂದ ಏಕೆ ತಡೆಯುವಿರಿ?

■ ಜಬ್ಬಾರ್ ಕಾಟಿಪಳ್ಳ, ಮಂಗಳೂರು




ನುಡಿಸಿರಿಯಿಂದ ಕಲಿಯಬೇಕಿರುವ ಕಸಾಪ

ಕನ್ನಡ ಸಾಹಿತ್ಯ ಪರಿಷತ್ತು ನಡೆಸುವ ಸಮ್ಮೇಳನಗಳು ಬಹುತೇಕವಾಗಿ ಕನ್ನಡದ ಜಾತ್ರೆ ಮಾತ್ರವಾಗಿರುತ್ತದೆ. ಅಲ್ಲಿ ಪ್ರತಿಯೊಂದಕ್ಕೂ ಕೊರತೆ, ಕ್ಯೂ. ಕಸಾಪ ಏರ್ಪಡಿಸುವ ಗೋಷ್ಠಿಗಳಲ್ಲಿ ಮಂಡಿತವಾಗು ವಿಷಯಗಳಿಗೆ ಸಂಬಂಧಿಸಿದ ಚರ್ಚೆ ಆಗುವುದಕ್ಕಿಂತ ಬೇರೆ ಇನ್ನಾವುದೋ ಚಟುವಟಿಕೆಯ ಕುರಿತ ಚರ್ಚೆಗಳೆ ತಾರಕಕ್ಕೆ ಏರಿರುತ್ತದೆ. ಒಂದೊಂದು ಸಲವಂತೂ ಸಾಹಿತ್ಯ ಸಮ್ಮೇಳನ ತನ್ನ ಅರ್ಥ ಕಳೆದುಕೊಂಡು ರಾಜಕೀಯ ಸಮ್ಮೇಳನವಾಗಿಯೆ ಮಾರ್ಪಡಾಗುತ್ತದೆ.



ಆದರೆ ಇದಕ್ಕೆ ತೀರಾ ವ್ಯತಿರಿಕ್ತವಾಗಿ ವ್ಯಕ್ತಿಯೊಬ್ಬರು ಯಾವುದೇ ಲಾಭ ಪಡೆಯದೆ ಮಾಡುತ್ತಿರುವ ಮೂರು ದಿನಗಳ ಸಾಹಿತ್ಯದ ಸಮ್ಮೇಳನ ನೋಡಬೇಕಾದರೆ ಮಂಗಳೂರು ಸಮೀಪದ ಮೂಡಬಿದರೆಯ 'ನುಡಿಸಿರಿ' ಎಂಬ ಕಾರ್ಯಕ್ರಮಕ್ಕೆ ನೀವು ಹೋಗಲೇಬೇಕು. ಡಾ.ಮೋಹನ್ ಆಳ್ವ ಅವರ ಆಯೋಜಿಸಿ, ನಿರ್ವಹಿಸುವ ಈ ನುಡಿಸಿರಿಯ ಐದಾರು ವರ್ಷಗ ಸಮ್ಮೇಳನಗಳಿಗೆ ಬಾರದೆ ಇರುವ ಕನ್ನಡದ ಸಾಹಿತಿಗಳ್ಯಾರು ಇಲ್ಲವೆಂದರೆ ತಪ್ಪಾಗಲಿಕ್ಕಿಲ್ಲ.


ನಲ್ಲೂರು ಪ್ರಸಾದ್

ಸಮಯ ಪರಿಪಾಲನೆ, ಅಚ್ಚುಕಟ್ಟುತನ, ವೇದಿಕೆಯ ಅಲಂಕಾರವಲ್ಲೂ ದಕ್ಷಿಣ ಕನ್ನಡ ಜಿಲ್ಲೆಯ ಸಂಸ್ಕೃತಿ, ಸಭ್ಯತೆ ಎದ್ದು ಕಾಣುತ್ತದೆ. ಕನ್ನಡದ, ಕರ್ನಾಟಕದ ನಾಡುನುಡಿಗಾಗಿ ಶ್ರಮಿಸುತ್ತಿರುವ ವ್ಯಕ್ತಿಗಳನ್ನು ಕರೆದು ಹೃದಯಸ್ಪರ್ಶಿಯಾಗಿ ಸನ್ಮಾನಿಸುವ ರೀತಿ ಕಾಟಾಚಾರಗಳೆಂಬಂತೆ ನಡೆದುಹೋಗುವುದಿಲ್ಲ.

ರಾಜಕೀಯ, ಸಿನಿಮಾ ಹಾಗೂ ಧಾರ್ಮಿ ನಾಯಕರಿಂದ ಹೊರತುಪಡಿಸಿದ ಈ ಸಮ್ಮೇಳನಗಳು ಯುವ ಜನತೆಯಲ್ಲಿ ಉಲ್ಲಾಸವನ್ನು, ಹುರುಪನ್ನು ತುಂಬುತ್ತವೆ. ಸಾಕಷ್ಟು ಜನಗಳಿಂದ ಗಿಜಿಗುಡುತ್ತಿದ್ದರೂ ಗದ್ದಲ-ಗೊಂದಲಗಳಿಗೆ ಇಲ್ಲಿ ಆಸ್ಪದ ಇರುವುದಿಲ್ಲ. ಕಾರ್ಯಕ್ರಮದಲ್ಲಿ ಭಾಗವಹಿಸಿ ತನ್ನ ವಿಚಾರ ಮಂಡಿಸುವ ಅತಿಥಿಯೋರ್ವನಿ ಇಲ್ಲಿ ಆತಿಥ್ಯ ನೀಡಲಾಗುವುದಿಲ್ಲ. ಪ್ರತಿಯೊಬ್ಬ ಆಸಕ್ತ ಕೇಳುಗನಿಗೂ ಸಮರ್ಪಕ ಆತಿಥ್ಯ ಊಟ- ಉಪಚಾರ.

ಕನ್ನಡ ಸಾಹಿತ್ಯ ಪರಿಷತ್ತು ಈ ಮೋಹನ ಆಳ್ವ ನಡೆಸುತ್ತಿರುವ 'ನುಡಿ ಸಿರಿ' ಸಮ್ಮೇಳನಗಳಿಂದ ಬಹಳಷ್ಟು ಕಲಿತುಕೊಳ್ಳಬೇಕಿದೆ.

■ ವಿಶ್ವಾರಾಧ್ಯ ಸತ್ಯಂಪೇಟೆ


ಯಾರ ಭಾರತ? ಯಾರ ಪ್ರತೀಕ?

...ಮುಂಬೈ ಮೇಲೆ ದಾಳಿ ನಡೆದ ಸಂದರ್ಭದಲ್ಲಿ ...ತ ಪ್ರಖ್ಯಾತವಾಗಿರುವ ಛತ್ರಪತಿ ಶಿವಾಜಿ ಟರ್ಮಿನಸ್ ...) ಮೇಲೆಯೂ ಭಯೋತ್ಪಾದಕರು ದಾಳಿ ಮಾಡಿ ...ಟಿವಿ ಚಾನೆಲ್‌ಗಳು ಅದರತ್ತ ತಿರುಗಿಯೂ ನೋಡದಿ ...ಅಚ್ಚರಿಯ ಸಂಗತಿ. ವಾಸ್ತವವಾಗಿ ಸಿಎಸ್‌ಟಿ ...ನಗರದ ನಿಜವಾದ ಪ್ರತೀಕ. ಹಲವಾರು ವರ್ಷ ...ಈ ರೈಲ್ವೇ ನಿಲ್ದಾಣದ ಮೂಲಕವೇ ನೂರಾರು ...ಯರು ಉತ್ತರ ಪ್ರದೇಶ, ಬಿಹಾರ, ರಾಜಸ್ಥಾನ, ...ಬಂಗಾಳ ಮತ್ತು ತಮಿಳುನಾಡಿನಂತಹ ರಾಜ್ಯ ...ಮುಂಬೈಗೆ ಹರಿದುಬಂದು, ಸ್ವತಃ ಮುಂಬೈ ...ಗಿ ಪರಿವರ್ತನೆಗೊಂಡಿದ್ದಾರಲ್ಲದೆ ಮುಂಬೈ ನಗರಿ ...ನಿರ್ಮಿಸುವಲ್ಲಿ ಮರಾಠಿಗಳಷ್ಟೇ ಶ್ರಮಿಸಿದ್ದಾರೆ.

...ಟಿವಿ ಚಾನೆಲ್‌ಗಳು ಇದನ್ನು ಗುರುತಿಸುವುದಿಲ್ಲ ...ಅಲ್ಲ, ಸಿಎಸ್‌ಟಿ ಪ್ಲಾಟ್‌ಫಾರ್ಮ್ ಮೇಲೆ ಬಿದ್ದಿದ್ದ ...ಕ್ಕೂ ಹೆಚ್ಚು ಜನರ ಶವಗಳೂ ಅವರ ಕಣ್ಣಿಗೆ ...ದಿಲ್ಲ. ಅಲ್ಲಿ ಸತ್ತವರು ಯಾರು ಎಂದು ನಮಗೆ ... ಯಾವ ಬರ್ಖಾ ದತ್ ಕೂಡ ಆ ಕಡೆ ...ಲ್ಲ. ಬದಲಾಗಿ ತಾಜ್ ಹೋಟೆಲ್‌ನಲ್ಲಿ ಧ್ವಂಸ ...ದ ಪೀಠೋಪಕರಣಗಳನ್ನು ತೋರಿಸುವಲ್ಲಿ ಮಗ್ನಳಾಗಿ ...ರ್ಕಾರಿ ಜೆಜೆ ಆಸ್ಪತ್ರೆಯಲ್ಲಿ ಯಾರೂ ಗುರುತಿಸದೆ ...6 ಶವಗಳತ್ತ ಯಾವ ಟಿವಿ ಕ್ಯಾಮೆರಾಗಳೂ ...ಲ್ಲ. ಬದಲಾಗಿ ತಾಜ್ ಹೋಟೆಲ್‌ನಲ್ಲಿ ಬಲಿ ...ಸೆಲೆಬ್ರಿಟಿಗಳ ಶವಗಳ ಸ್ಕೂಪ್ ಶಾಟ್‌ಗಾಗಿ ...ತ್ತಿದ್ದವು.

...ತಃ ಬಿಹಾರ ಮತ್ತು ಉತ್ತರ ಪ್ರದೇಶಗಳಿಂದ ...ಗೆ ವಲಸೆ ಬಂದಿದ್ದ ಬಡಕಾರ್ಮಿಕರೇ ಆಸ್ಪತ್ರೆಯಲ್ಲಿ ...ದ ಶವಗಳಾಗಿದ್ದರು. ಯಾಕೆಂದರೆ ಅವರು ...ಗೆ ಬಂದಿಳಿದಾಗ ಅವರ ಬಳಿ ಸೆಲ್‌ಫೋನ್ ...ಪ್ಯಾನ್ ಕಾರ್ಡ್‌ಗಳಿರಲಿಲ್ಲ, ಆದ್ದರಿಂದ ಅವರನ್ನು ...ಲಾಗಿರಲಿಲ್ಲ. ಅಷ್ಟೇ ಅಲ್ಲ, ಸಿಎಸ್‌ಟಿ ಮೇಲೆ ...ದು 60 ಗಂಟೆಗಳು ಉರುಳಿದರೂ ಅಲ್ಲಿ ನಡೆ... ಎಂದು ವಿವರಿಸಲು ಒಂದೇ ಒಂದು ಚಾನೆಲ್ ...ಗಲಿಲ್ಲ.

...ಓಬೆರಾಯ್ ಮತ್ತು ಟ್ರೈಡೆಂಟ್‌ನಂತಹ ಸ್ಥಳಗಳು ...ಟ್ಟಿಲೆ ಬಂದ್ ಆದರೂ ಆದರಿಂದ ಮುಂಬೈಯಲ್ಲಿ ... ಜೀವನ ಸಾಗಿಸುತ್ತಿರುವ ಜನಸಾಮಾನ್ಯರಿಗೆ ...ತೊಂದರೆಯೂ ಆಗುವುದಿಲ್ಲ. ಆದರೆ ಒಂದೇ ...ಗಂಟೆ ಕಾಲ ಅಲ್ಲಿನ ಟ್ರೈನ್ ಮತ್ತು ಬಸ್‌ನಂತಹ ...ವ್ಯವಸ್ಥೆಗಳು ಸ್ತಬ್ಧಗೊಂಡರೂ ಸಾಮಾನ್ಯರ ಬದುಕಿ ...ರುಪೇರಾಗುತ್ತದೆ. ಆದರೆ ಇಂತಹ ಸಾಮಾನ್ಯ





ಅಂಶದತ್ತಲೂ ಚಾನೆಲ್‌ಗಳು ತಮ್ಮ ಗಮನ ಹರಿಸಲಿಲ್ಲ.

ತಾಜ್ ಹೋಟೆಲ್ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದಕ್ಕೆ ಟಿವಿ ಚಾನೆಲ್‌ಗಳು ನೀಡುತ್ತಿರುವ ಸಬೂಬು ಅದು ಒಂದು ಐತಿಹಾಸಿಕ ಕಟ್ಟಡ ಎಂಬುದು. ಆದರೆ ಸಿಎಸ್‌ಟಿ ಕೂಡ ತಾಜ್‌ನಷ್ಟೇ ಮುಖ್ಯವಾದ ಐತಿಹಾಸಿಕ ಕಟ್ಟಡ. ವ್ಯತ್ಯಾಸ ಯಾವುದೆಂದರೆ: ತಾಜ್ ಹೋಟೆಲ್ ಸಾಹುಕಾರರ, ಬಲಿಷ್ಠರ ತಂಗುದಾಣ. ಅದು ಅಧಿಕಾರ, ಹಣ, ರಾಜಕೀಯ ಮತ್ತು ದಗಾಕೋರರ ಪ್ರತೀಕ. ಆದರೆ ಮುಂಬೈ ನಗರವನ್ನು, ಈ ದೇಶವನ್ನು ನಿರ್ಮಿಸಿದ ಸಾಮಾನ್ಯ ಜನರ ಪ್ರತೀಕ ಸಿಎಸ್‌ಟಿ ರೈಲ್ವೆ ನಿಲ್ದಾಣ.

ಈ ಹಿಂದೆ ಟ್ರೈನ್ ಮತ್ತು ಮಾರುಕಟ್ಟೆಗಳ ಮೇಲೆ ಭಯೋತ್ಪಾದಕರ ದಾಳಿ ನಡೆದಾಗ ಅವುಗಳಿಂದ ಮುಂಬೈನ ಸಾಮಾನ್ಯ ನಾಗರಿಕರು ಬೇಗನೆ ಚೇತರಿಸಿಕೊಂಡಿದ್ದನ್ನು ಇದೇ ಚಾನೆಲ್‌ಗಳು ಕೊಂಡಾಡಿದ್ದವು. ಯಾಕೆಂದರೆ ಆಗ ಜನಸಾಮಾನ್ಯರ ಆ ಚೇತರಿಸಿಕೊಳ್ಳುವ ಶಕ್ತಿ ಹಣವಂತ ಉದ್ಯಮಿಗಳಿಗೆ ನೆರವಾಗಿತ್ತು; ಯಾವ ಕಾರ್ಖಾನೆಯೂ ಸ್ಥಗಿತಗೊಳ್ಳದಂತೆ ನೆರವಾಗಿತ್ತು. ಆದರೆ ಈಗ ಭಯೋತ್ಪಾದಕರ ದಾಳಿಗೆ ಗುರಿಯಾದ ಅದೇ ಭಯೋತ್ಪಾದಕರಿಗೂ ಅರ್ಥವಾಗಿದೆ: ಅವರು ಸಾಮಾನ್ಯ ಜನರನ್ನು ಕಂಗೆಡಿಸಲು ಹಲವಾರು ಪ್ರಯತ್ನಗಳನ್ನು ಮಾಡಿದ್ದರೂ, ಅವರ ಮಾರುಕಟ್ಟೆ ಮತ್ತು ಟ್ರೈನ್‌ಗಳನ್ನು ಸ್ಫೋಟಿಸಿದ್ದರೂ, ಅದರಿಂದ ಸಾಮಾನ್ಯ ಜನರು ವಿಚಲಿತರಾಗಿರಲಿಲ್ಲ, ಬದಲಾಗಿ ಅವರಿಗೆ ಬದುಕುವುದೇ ಒಂದು ಹೋರಾಟವಾಗಿರುವಾಗ ಅವರು ಚೇತರಿಸಿಕೊಂಡು ಮರುದಿನದಿಂದಲೇ ತಮ್ಮ ಬದುಕನ್ನು ಎಂದಿನಂತೆ ಸಾಗಿಸಲಾರಂಭಿಸುತ್ತಾರೆ. ಸರ್ಕಾರಿ ಪ್ರಾಯೋಜಿತ ಹಣದುಬ್ಬರ ಮತ್ತು ಮಾರುಕಟ್ಟೆ ನಿಯಂತ್ರಿತ ಹೊರಗಿಡುವಿಕೆಯಂತಹ ಭಯೋತ್ಪಾದನೆಯನ್ನು ಪ್ರತಿದಿನ ಎದುರಿಸುವ ಸಾಮಾನ್ಯ ನಾಗರಿಕ ಇವತ್ತು ಭಯೋತ್ಪಾದಕ ದಾಳಿಯಿಂದ ವಿಚಲಿತರಾಗುವುದಿಲ್ಲ, ನೋವು ಆತನ ದಿನನಿತ್ಯದ ಸಂಗಾತಿಯಾಗಿದೆ. ಆದ್ದರಿಂದಲೇ ಭಯೋತ್ಪಾದಕರು ಈ ಬಾರಿ ಹಣದ ಮತ್ತು ಅಧಿಕಾರದ ಪ್ರತೀಕವಾದ ತಾಜ್ ಹೋಟೆಲ್ ಮೇಲೆ ದಾಳಿ ಮಾಡಿದರು.

ಹಣವಂತ ಉದ್ಯಮಿಗಳು ಅಂತಹದ್ದೇ ಚೇತರಿಸಿಕೊಳ್ಳುವ ಶಕ್ತಿಯನ್ನು ಪ್ರದರ್ಶಿಸದೆ ಕಿರಿಚಾಡಿದ್ದಾರೆ. ತಮ್ಮ ಮನರಂಜನಾ ಕೇಂದ್ರಗಳಾದ ಹೋಟೆಲ್‌ಗಳಿಗೆ, ಸ್ವಿಮ್ಮಿಂಗ್ ಪೂಲ್‌ಗಳಿಗೆ ಬಂದೋಬಸ್ತನ್ನು ಸರ್ಕಾರ ನೀಡಬೇಕೆಂದು ಯಾವ ಮುಜುಗರವೂ ಇಲ್ಲದೆ ಅಗ್ರಹಿಸಿದ್ದಾರೆ. ಯಾಕೆಂದರೆ ಭಾರತ ಮತ್ತು ಮುಂಬೈನ ಹಣವಂತರು ಮೊದಲ ಬಾರಿಗೆ ನೋವಿನೊಂದಿಗೆ ಎದುರಾಗಿದ್ದಾರೆ.

ಈ ಸಂದರ್ಭದಲ್ಲಿ ಮಾನವಹಕ್ಕುಗಳ ಬಗ್ಗೆಯೂ ಟಿವಿ ಚಾನೆಲ್‌ಗಳು ಪ್ರಶ್ನಿಸಿವೆ. NDTVಯ ಅರ್ನಬ್ ಗೋಸ್ವಾಮಿಯಂತೂ "ಭಯೋತ್ಪಾದಕ ದಾಳಿಯಲ್ಲಿ ಧೀರ ಪೊಲೀಸ್ ಅಧಿಕಾರಿಗಳು ಬಲಿಯಾಗಿರುವಾಗ ಮಾನವ ಹಕ್ಕುಗಳ ಬಗ್ಗೆ ಸದಾ ಕಿರುಚಾಡುವವರು ಈಗ ಎಲ್ಲಿದ್ದಾರೆ?" ಎಂದು ಏರಿದ ದನಿಯಲ್ಲಿ ಪ್ರಶ್ನಿಸಿದ. ಆತನಿಗೆ ಒಂದು ಮರುಪ್ರಶ್ನೆಯನ್ನು ಕೇಳಬಹುದು: "ಅಂತಹದ್ದೇ ಅಧಿಕಾರಿಗಳು ಜನಸಾಮಾನ್ಯರ ಹಕ್ಕುಗಳನ್ನು ಉಲ್ಲಂಘಿಸುತ್ತಿದ್ದಾಗ ನೀನೆಲ್ಲಿದ್ದೆ?" ಈ ದೇಶದಲ್ಲಿ ಪ್ರತಿನಿತ್ಯ ದಲಿತರ ಮತ್ತು ಆದಿವಾಸಿಗಳ ಮೇಲಾಗುವ ದೌರ್ಜನ್ಯಗಳನ್ನು ಯಾವುದೇ ಚಾನೆಲ್ 24 ಗಂಟೆಗಳ ಕಾಲ ನಿರಂತರವಾಗಿ ತೋರಿಸಿದ ಉದಾಹರಣೆ ಇದೆಯೇ?

ಅಂದಮಾತ್ರಕ್ಕೆ, ಭಯೋತ್ಪಾದಕರ ದಾಳಿಯಲ್ಲಿ ಮರಣ ಹೊಂದಿದ ಪೊಲೀಸ್ ಅಧಿಕಾರಿಗಳು ಮತ್ತು ಕಮಾಂಡೋಗಳ ಬಲಿದಾನವನ್ನು ಕಡೆಗಣಿಸಲಾಗುವುದಿಲ್ಲ. ಅದು ದೊಡ್ಡ ನಷ್ಟ ಮತ್ತು ನೋವಿನ ಸಂಗತಿ.

ಇವತ್ತು ಎಲ್ಲರ ಕೆಂಗಣ್ಣಿಗೆ ಗುರಿಯಾಗಿರುವುದು ರಾಜಕಾರಣಿಗಳು. ಆದರೆ ಎಲ್ಲ ರಾಜಕೀಯ ಮತ್ತು ರಾಜಕಾರಣಿಗಳನ್ನು ಖಂಡಿಸುವುದರಿಂದ ಒಂದೇ ನಾಣ್ಯದ ಎರಡು ಮುಖಗಳಂತಿರುವ ಭಯೋತ್ಪಾದಕರು ಮತ್ತು ಸರ್ವಾಧಿಕಾರಿಗಳನ್ನು ಪ್ರೋತ್ಸಾಹಿಸಿದಂತಾಗುತ್ತದೆ. ವಿಪರ್ಯಾಸದ ಸಂಗತಿ ಯಾವುದೆಂದರೆ ಭಯೋತ್ಪಾದಕರು ಮತ್ತು ಸರ್ವಾಧಿಕಾರಿಗಳೊಂದಿಗೆ ವ್ಯವಹರಿಸಲು ಹಣವಂತರು ಮತ್ತು ಬಲಿಷ್ಠರು ಇಚ್ಛಿಸುತ್ತಾರೆ.

ಈ ದುರಂತದಲ್ಲಿ ಮಡಿದ ಸಾಮಾನ್ಯ ಜನರಿಗೆ ಯಾರೂ ಕಂಬನಿಗರೆದಿಲ್ಲ. ಸಿಎಸ್‌ಟಿಯಲ್ಲಿ ತಮ್ಮ ಬಂಧುಗಳನ್ನು ಕಳೆದುಕೊಂಡವರು, ತಾಜ್ ಹೋಟೆಲ್‌ನಲ್ಲಿ ಹಣವಂತರು ಒಂದು ಊಟಕ್ಕೆ ಪಾವತಿಸುವ ಬಿಲ್‌ಗೆ ಸಮಾನವಾದ ಒಂದು ತಿಂಗಳ ಸಂಬಳಕ್ಕಾಗಿ ದುಡಿಯುತ್ತಿದ್ದು ಸತ್ತವರು... ಇವರ್‍ಯಾರೂ ಟಿವಿ ಚಾನೆಲ್‌ನವರ ಲೆಕ್ಕಕ್ಕೆ ಜಮೆ ಆಗಲಿಲ್ಲ...

■ ಜ್ಞಾಣಿ ಸಂಕರನ್, ತಮಿಳು ಬರಹಗಾರ

ಪ್ರಭಾಕರ್ ರಾವ್ ಡೀಲ್ ವೀರನಲ್ಲ

...ಳೆದ (ಡಿ.10ರ) ಸಂಚಿಕೆಯ ಶೋಭಾ ಕರಂದ್ಲಾಜೆ ...ದ ಲೇಖನದಲ್ಲಿ ಅವರ ಕಾರ್ಯದರ್ಶಿ ಡಾ. ...ಕರ್‌ರಾವ್ ಉಲ್ಲೇಖ ಕಂಡು ಈ ಪ್ರತಿಕ್ರಿಯೆ.

...ಭಾಕರ್‌ರಾವ್ ಅವರನ್ನು ಕಳೆದ ಮೂವತ್ತು ...ಗಳಿಂದ ನಾನು ಬಲ್ಲೆ. ನನ್ನ ಬ್ಯಾಚ್‌ನಲ್ಲೇ ಬಿ.ಎ. ...ಪದಕ ಪಡೆದ ಈತ, ನಾನು ಇಂಗ್ಲಿಷ್ ಎಂ.ಎ. ...ವಾಗ ಅರ್ಥಶಾಸ್ತ್ರ ಓದಿದ್ದ.

...ದಕುಟುಂಬದ ಹಿನ್ನೆಲೆಯಿರುವ ...ರ್ ಪುತ್ತೂರಲ್ಲಿ ಉಪನ್ಯಾಸಕನಾಗಿದ್ದಾಗ ...ಪ್ರಾಯ ಮೇಷ್ಟ್ರಾಗಿದ್ದ. ಕೆಎಎಸ್ ...ರಿಯಾದ ಬಳಿಕವೂ ಕೈಬಾಯಿ ...ಂಡ ವರದಿಗಳಿಲ್ಲ. ಶೋಭಾ, ಈತನ ...ರ್ಥಿಯಾಗಿದ್ದವಳು. ಮೇಷ್ಟ್ರು ಎಂಬ ...ದಲ್ಲಿ ದುಂಬಾಲು ಬಿದ್ದು ಆತನನ್ನು ...ಚೇರಿಗೆ ಬರಮಾಡಿಕೊಂಡಿದ್ದು.




...ಂಚ ಆಧ್ಯಾತ್ಮದ ಗುಂಗು ಇರುವ ...ರ ವಿಧಾನಸೌಧದ ಒಳಗೆ Out ...rts ಆಗಿ ಕಾಣಿಸುತ್ತಾನೆ. ನಾನು ...ಪ್ರಭಾಕರ ರಾವ್ ಭ್ರಷ್ಟನಲ್ಲ, ಡೀಲು ...ಆಗಿಲ್ಲ.

...ರಾಜಕೀಯದ ಕೊಚ್ಚೆ ಗುಡಿಸುವ ಭರದಲ್ಲಿ ...ಮೇಲೆ ರಾಡಿ ಎರಚಿದಂತೆ ನನಗೆ ತೋರಿದ ...ಈ ಪ್ರತಿಕ್ರಿಯೆ.

...ಗೀ ವ್ಯವಸ್ಥೆಯೊಳಗೆ ಏನೂ ಮಾಡಲಾಗದೇ, ...ದು ಬದುಕಿರುವ ಸ್ವಚ್ಛ ಅಧಿಕಾರಿಗಳಿದ್ದಾರೆ. ...ದರೂ ದಿನದೂಡಿ ಪಾರಾದರೆ ಸಾಕು ...ಸಿದವರನ್ನಾಗಿ ಪಹಾಸುರಾದವರಿದ್ದಾರೆ. ...ಳಿಕ ಅಂತಹ ಅಧಿಕಾರಿಗಳಲ್ಲೊಬ್ಬ ಎಂದು ನನ್ನ ಗ್ರಹಿಕೆ. ಇದೇ ಮಾತನ್ನು ನನ್ನ ಸಹಪಾಠಿಗಳಾದ ಇತರ ಹತ್ತೆಂಟು ಅಧಿಕಾರಿಗಳ ಬಗ್ಗೆ ಹೇಳುವ ಧೈರ್ಯ ನನಗಿಲ್ಲ!

-ಕೆ.ಪಿ. ಸುರೇಶ, ಕಗ್ಗಲಿಪುರ, ಬೆಂಗಳೂರು.



ತಮ್ಮ 10-12-2008ರ ಸಂಚಿಕೆಯಲ್ಲಿ ಸಾರಾ ಅಬೂಬಕ್ಕರ್‌ರವರು ವಿ.ಕ.ದವರ ಸೋಕಾಲ್ಡ್ ಮುಕ್ತ ಸಂವಾದಕ್ಕೆ ಬರೆದ ಲೇಖನವನ್ನು ಮೂಲರೂಪದಲ್ಲಿ ಓದಿದಾಗಲೇ ಅಂದಾಜಾಗಿದ್ದು ವಿ.ಕ.ದ ಸಂಪಾದಕರು ಸಾರಾರ ಲೇಖನವನ್ನು ಎಷ್ಟೊಂದು ವಿರೂಪಗೊಳಿಸಿ ಪ್ರಕಟಿಸಿದ್ದಾರೆ ಎಂದು.

ವಿ.ಕ.ದ ಮುಕ್ತ ಸಂವಾದಕ್ಕೆ ನಾನೂ ಒಂದು ಸಣ್ಣ ಲೇಖನ ಬರೆದು ಕಳುಹಿಸಿದ್ದೆ. ಅದು ಸಂಪಾದಕರ ಕಸದಬುಟ್ಟಿ ಸೇರಿದ್ದು ಒಳ್ಳೆದಾಯಿತು. ಇಲ್ಲದಿದ್ದರೆ ನಾನು ಬರೆದದ್ದೊಂದು, ಪ್ರಕಟವಾದಾಗ ಓದುಗರಲ್ಲಿ ಹುಟ್ಟುವ ಅಭಿಪ್ರಾಯ ಇನ್ನೊಂದು ಆಗಿ ನಾನು ಮುಜುಗರ ಎದುರಿಸಬೇಕಾಗುತ್ತಿತ್ತು. ವಿ.ಕ.ದ ಓದುಗರು ವಾಚಕರವಾಣಿಗೆ ಬರೆದ ಸಾಧಾರಣ ಪತ್ರಕ್ಕೂ ಸಂಪಾದಕರು ಹೇಗೆ ಕತ್ತರಿ ಆಡಿಸುತ್ತಾರೆಂದರೆ, ಓದುಗರ ಪತ್ರದ ಮೂಲ ಆಶಯವೇ ಕಳೆದುಹೋಗಿ ತದ್ವಿರುದ್ಧ ಅರ್ಥ ಹುಟ್ಟುವಷ್ಟು ಪತ್ರ ಪರಿವರ್ತನೆ ಆಗಿರುತ್ತದೆ. ಹಾಗಾಗಿ ಬಹಳಷ್ಟು ಪ್ರಜ್ಞಾವಂತರು ವಿ.ಕ.ಗೆ ಪತ್ರ ಬರೆಯುವ ಗೋಜಿಗೆ ಹೋಗುವುದಿಲ್ಲ.

'ಬಾಂದಳದಿಂದ ಕಳಚಿಬಿದ್ದ ಮತ್ತೊಂದು ನಕ್ಷತ್ರವಾದ ವಿ.ಪಿ.ಸಿಂಗ್' ರ ಬಗ್ಗೆ 29-11-2008ರ ವಿ.ಕ.ದ ಸಂಚಿಕೆಯಲ್ಲಿ ಬರೆದ ಲೇಖನದಲ್ಲಿ ಕೀಳು ಸಂಸ್ಕಾರದ ಭಾಷೆ ಬಳಸಿದ್ದಕ್ಕೆ ಮಾಜಿ ಸಂಸದ ಕೋದಂಡರಾಮಯ್ಯ 2-12-2008ರ 'ವಾಚಕರ ವಿಜಯ'ದ ಮೂಲಕ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದಾಗ ಮಾರನೇ ದಿನವೇ ಸ್ವತಃ ಪ್ರತಾಪಸಿಂಹನೇ 'ಸಮೀರ್ ಪೈಸಾರಿ' ಎಂಬ ಸುಳ್ಳು ಹೆಸರಲ್ಲಿ ಕೋದಂಡರಾಮಯ್ಯ ವಿರುದ್ಧ ಪತ್ರ ಬರೆದು ವಿ.ಕ.ದ ವಾಚಕರವಾಣಿಯಲ್ಲಿ ಪ್ರಕಟಿಸಿದ್ದ. ವಿ.ಕ.ದಲ್ಲಿರುವವರಿಗೆ ಪತ್ರಿಕೋದ್ಯಮದ ಕನಿಷ್ಠ ಎಥಿಕ್ಸ್ ಸಹ ಇಲ್ಲವೆಂದು ತೋರಿಸುತ್ತದೆ.

ಕನ್ನಡಪ್ರಭ ಪತ್ರಿಕೆ ನಕ್ಸಲರನ್ನು ಬೆಂಬಲಿಸುವ ಪತ್ರಿಕೆಯೆಂದು ಗೃಹಸಚಿವ ವಿ.ಎಸ್. ಆಚಾರ್ಯರು ತಮ್ಮ ಬ್ಲಾಗ್‌ನಲ್ಲಿ ಆಪಾದಿಸಿದ್ದು ಕಂಡು ಆಶ್ಚರ್ಯವಾಗುತ್ತದೆ. ನಾನು ಕಳೆದ ವರ್ಷ ಕನ್ನಡಪ್ರಭಕ್ಕೆ ಕಳುಹಿಸಿದ್ದ ಕೊಂಚ ನಕ್ಸಲರ ಪರವಾಗಿದ್ದ ನನ್ನ ಲೇಖನವನ್ನೇನೋ ತಮ್ಮ 07-09-2007ರ ಸಂಚಿಕೆಯಲ್ಲಿ ಪ್ರಕಟಿಸಿದ್ದರೂ ಮೂರೇ ದಿನದ ನಂತರ ನನ್ನ ಲೇಖನಕ್ಕೆ ಪ್ರತಿಕ್ರಿಯಿಸುತ್ತಾ ಪ್ರಗತಿಪರ ಸಾಹಿತಿ ಜಿ.ಕೆ. ಗೋವಿಂದ ರಾಯರು ನಕ್ಸಲರ ಹಿಂಸೆಯನ್ನು ಖಂಡಿಸಿ ಬರೆದ ಲೇಖನವನ್ನೂ ಪ್ರಕಟಿಸಿ ಕನ್ನಡಪ್ರಭದವರು ತಮ್ಮ ನಿಷ್ಪಕ್ಷ ನಿಲುವನ್ನು ತೋರಿಸಿದ್ದರು.

-ಪ್ರವೀಣ್ ಎಸ್. ಶೆಟ್ಟಿ
ಮಂಗಳೂರು

ಒಂಬತ್ತು ದಶಕಗಳ ಇತಿಹಾಸ, ಪರಂಪರೆ ಇರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಕಾರ್ಖಾನೆಯು ಬಹುರಾಷ್ಟ್ರೀಯ ಕಂಪೆನಿಗಳ ಪೈಪೋಟಿಯ ನಡುವೆಯೂ ಹಿಂದಿನ ನಷ್ಟವನ್ನೆಲ್ಲ ಭರಿಸಿ ಲಾಭದಲ್ಲಿ ಮುನ್ನುಗ್ಗುತ್ತಿರುವ ಸರ್ಕಾರಿ ಒಡೆತನದ ಪ್ರತಿಷ್ಠಿತ ಸಂಸ್ಥೆಯಾಗಿದೆ. ತನ್ನ ಇತಿಹಾಸದಲ್ಲಿ ಪ್ರಥಮ ಬಾರಿಗೆ ಕರ್ನಾಟಕ ಸರ್ಕಾರಕ್ಕೆ 2007-08ನೇ ಸಾಲಿನಲ್ಲಿ ರೂ. 2,70,50,000-00 ಲಾಭಾಂಶ ನೀಡಿದೆ. ಇದಕ್ಕೆಲ್ಲ ಮುಖ್ಯ ಕಾರಣ ಕಾರ್ಮಿಕರ ದುಡಿಮೆ ಹಾಗೂ ಕಾರ್ಖಾನೆಯನ್ನು ನಡೆಸಿಕೊಂಡುಹೋಗುತ್ತಿರುವ ವ್ಯವಸ್ಥಾಪಕ ನಿರ್ದೇಶಕ ಬಿ.ಹೆಚ್. ಅನಿಲ್‌ಕುಮಾರ್ ಅವರ ಪ್ರಯತ್ನಗಳು ನಮ್ಮ ಕಾರ್ಖಾನೆಯನ್ನು ಲಾಭದಾಯಕವಾಗಿ ನಡೆಸುತ್ತಿರುವ ಇಂತಹ ಹಿರಿಯ ಐಎಎಸ್ ಅಧಿಕಾರಿಗೆ ಡಿಸೆಂಬರ್ 3ರ ಸಂಚಿಕೆಯಲ್ಲಿ ಪ್ರಕಟವಾದ ಲೇಖನದಲ್ಲಿ ಪರಮಭ್ರಷ್ಟ, ಖದೀಮ ಮುಂತಾದ ಪದಗಳನ್ನು ಬಳಸಿರುವುದು ಇಲ್ಲಿಯ ಸಮಸ್ತ ಕಾರ್ಮಿಕರ ಮನಸ್ಸಿನಲ್ಲಿ ನೋವನ್ನು ಉಂಟುಮಾಡಿದೆ.

ನಮ್ಮ ವ್ಯವಸ್ಥಾಪಕ ನಿರ್ದೇಶಕರಾಗಲಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ವಿ.ಉಮೇಶ್ ಭಾ.ಆ.ಸೇ.ರವರಾಗಲಿ ಅಥವಾ ನಮ್ಮ ಹಿಂದಿನ ಪ್ರಧಾನ ಕಾರ್ಯದರ್ಶಿ ಕೆ.ಎಂ. ಶಿವಕುಮಾರ್ ಭಾ.ಆ.ಸೇ.ರವರಾಗಲಿ ಈ ಸಂಸ್ಥೆಯನ್ನು ಖಾಸಗಿಯವರಿಗೆ ನೀಡುವ ಉದ್ದೇಶ ಹೊಂದಿರುತ್ತಾರೆ ಎಂಬುದು ಸತ್ಯಕ್ಕೆ ದೂರವಾದುದು. ನಮ್ಮ ಕಾರ್ಖಾನೆಯನ್ನು ಮುಂಬಯಿಯ ಇಮಾಮಿ ಫಾರ್ಮಸ್ಯುಟಿಕಲ್ ಕಂಪೆನಿಗೆ ಮಾರುವ ಯಾವುದೇ ಪ್ರಸ್ತಾವನೆಯಿರುವುದಿಲ್ಲ. ಕಾರ್ಖಾನೆಯ ಸಂಪನ್ಮೂಲಗಳನ್ನು ಕಾರ್ಖಾನೆಯ ಏಳಿಗೆಗಾಗಿ ಬಳಸಿ ಸಾಬೂನು ಕಂಪೆನಿಗಳ ಪೈಪೋಟಿಯ ನಡುವೆ ಕಂಪೆನಿಯು ಇನ್ನೂ ಹೆಚ್ಚು ಅಭಿವೃದ್ಧಿ ಪಥದತ್ತ ಸಾಗಲು ಪ್ರಯತ್ನಿಸಲಾಗುತ್ತಿದೆ.

ಕಂಪೆನಿಯ ಉನ್ನತಿಗಾಗಿ ಕಾರ್ಯಕ್ರಮಗಳನ್ನು ರೂಪಿಸಿಕೊಂಡು, ಪ್ರಸ್ತುತ ವರ್ಷದಲ್ಲಿ ಕಂಪೆನಿಯು ಇನ್ನೂ ಹೆಚ್ಚು ಲಾಭಗಳಿಸುವತ್ತ ಮುನ್ನಡೆಯುತ್ತಿದೆ. ಪ್ರತಿಷ್ಠಿತ ಕಂಪೆನಿಯು ಕರ್ನಾಟಕದ ಐತಿಹಾಸಿಕ ಮೈಸೂರು ಸ್ಯಾಂಡಲ್ ಸೋಪ್ ದೀರ್ಘಕಾಲದವರೆಗೆ ಮುಂದುವರೆಸಿಕೊಂಡು ಹೋಗಲು ಸಾಧ್ಯವಾಗುವಂತೆ ಸತತ ಪ್ರಯತ್ನ ಮಾಡಲಾಗುತ್ತಿದೆ.

-ಸಮಸ್ತ ... ನೌಕರರು (... ...) ... ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್, ಬೆಂಗಳೂರು

ಬುಡಕಟ್ಟಿನ ಲೀಡ್ರು ಸ್ವಸಿ ನಿಲ್ಲುಸ್ದೆ ಇನ್ಯಾರ ನಿಲ್ಲುಸ್ತನೆ

"ಮೆಂಡ್ಯ ಜಿಲ್ಲೆಯ ಮಾದ್ರಿ ಜಿಲ್ಲೆ ಮಾಡ್ತನಂತೆ" ಎಂದ ಉಗ್ರಿ.

"ಯಾರೂ?"

"ಎಡೂರಪ್ಪ."

"ಮಾದ್ರಿ ಜಿಲ್ಲೆನೂ ಬ್ಯಾಡ, ಕುಂತಿ ಜಿಲ್ಲೆನು ಬ್ಯಾಡ. ಅದೇನವುನ ಕ್ಯಲಸ ಮುಗಿಸಿಗಂಡೋಗು ಅನ್ನಾ" ಎಂದ ಕಾಳಮಾವ.

"ಮಾದ್ರಿ ಜಿಲ್ಲೆ ಇವುನೇನು ಮಾಡ್ತನೆ? ಕಾಲಾದಿಂದ

ಚಂಗಲುನೀಮೆಯ
ಕಟ್ಟೆಪುರಾಣ
ಬಿ. ಚಂದ್ರೇಗೌಡ

ಇದು ಮಾದ್ರಿ ಜಿಲ್ಲೆನೆ, ಅಲವೇನ್ನಾ?" ಎಂದ ಸೀರ.

"ಅಲ್ಲಾ, ಬರೀ ಮದ್ದೂರು ಯಲಕ್ಷನ್ನಿಗೆ ಮಾದ್ರಿ ಜಿಲ್ಲೆ ಮಾಡ್ತಿನಿ ಅಂದವುನಲ್ಲಾ? ಇನ್ನ ಇಡೀ ಜಿಲ್ಲೆಲಿ ಯಲಕ್ಷನ್ ನ್ಯಡಿಯಂಗಿದ್ರೆ ಇನ್ನೇನೇಳತಿದ್ನಾ? ಅಂತಾ" ಎಂದು ಉಗ್ರಿ ನಕ್ಕ.

"ಮದ್ದೂರುಲ್ಯಾರ್ಲ ಯಲಕ್ಷನ್ನಿಗೆ ನಿಂತೋರು?" ಎಂದಳು ಜುಮ್ಮಿ.

"ಡಿ.ಸಿ. ತಮ್ಮಣ್ಣ ಅಂತ ಒಂದಳೇ ಗಾಡಿಯಿತ್ತು ಕಣೆ. ಓಲ್ಡ್ ಮಾಡಲ್ ಇಂಜಿನ್ನು ಅದು. ಅತ್ತಗೆ ದ್ಯಾವೇಗೌಡನಿಗೂ ರಗತ ಸಮಂಧ ಅಂತನೆ, ಇತ್ತಗೆ ಯಸ್ಸೆಂ ಕಿಷ್ಣನಿಗೂ ಸಮಂಧಾ ಅಂತಾನೆ. ಅಂಗುಂದಕಂಡೆ ಅಧಿಕಾರನ್ನಲ್ಲ ಅನುಭವಿಸಿ ಈಗ ಎಡೂರಪ್ಪನತ್ರಕೋಗ್ಯವುನೆ."

"ಅಂಗರೆ ಬಿಜೆಪಿ ಕ್ಯಾಂಡೇಟು ಅವುನೆಯಾ ಅನ್ನು."

"ಇನ್ಯಾರಿದ್ದರೆ, ಇಲ್ಲಿ? ಆ ಗತಿಗ್ಯಟ್ಟ ಬಿಜೆಪಿಗಳು ಇಂತ ಮತಿಗ್ಯಟ್ಟೋರ ಹಿಡಕಂಡು ಹಳೆಗಾಡಿಗೆ ವಸ ಬಣ್ಣ ವಡದು ಬುಡತವೆ."

"ಗೆದ್ದನೇನ್ಲ ಅವುನು?"

"ಕಷ್ಟ. ಸಿದ್ದರಾಜನೆಡ್ತಿ ಕಲುಪನ ಸ್ಟ್ಯಾಂಗಾಗ್ಯವುಳೆ" ಎಂದ ಸೀರ.

"ಅಂಗೇನುವಿಲ್ಲ ಕಣೊ ಸೀರಮಾವ. ಸಿದ್ದರಾಜನಿಗೆ ವಳ್ಳೆ ಹೆಡತಿಯಾಗಿದ್ಲು, ಹಿಂಗಾಯ್ತದೆ ಅಂತ ಅವಳೇನು ಕನಸು ಕಂಡೋಳಲ್ಲ, ಸಿದ್ದರಾಜನಿಗೆ ವಳ್ಳೆ ಹೆಸರಿದ್ದದರಿಂದ ಇವುಳಿಗೆ ಅನುಕೂಲಾಗಬವುದು" ಎಂದ ಉಗ್ರಿ.

"ಆದ್ರು ಜೆಡಿಎಸ್ನಲ್ಲಿ ಹೆಂಗುಸ್ರು ಬಾಳಕೆ ಬರದಿಲ್ಲ ಕಂಡ್ಯ" ಎಂದಳು ಜುಮ್ಮಿ.

"ಬಾಳಕೆ ಬರದಿಲ್ಲ ಅಂತಿಯಲ್ಲೇ, ಬೇಕಾದ್ರೆ ಜೆಡಿಎಸ್ನಲ್ಲಿ ಅವುರಿಗೆ ಯಾವ ಸ್ಥಾನಮಾನನೂ ಕೊಡದಿಲ್ಲ ಅನ್ನು."

"ಅದ್ನೆ ಹೇಳಿದ್ದು ನಾನು" ಎಂದು ಜುಮ್ಮಿ ವಾಲಾಡಿದಳು.

"ಕುಮಾರಸ್ವಾಮಿ ಹೆಡತಿನೂ ನಿಂತಗತ್ತಾಯಿದ್ದಳಂತೆ?" ಎಂದ ಸೀರ.

"ಅವುಳೆಲ್ಲಿ ನಿಂತಗುಂಡಳೂ?" ಎಂದ ಕಾಳಮಾವ.

"ಮದುಗಿರಿಲಿ ನಿಂತಳಂತೆ ಕಣಮಾವ."

"ಮದುಗಿರಿಲಿ ಯಲಕ್ಷನ್ನಿಗೆ ನಿಂತಗಳೊ ಅಂತ ಗಂಡ್ಸು ಯಾರು ಇರಲಿಲ್ವೆ?"

"ಇದ್ದರಂತೆ, ಇರೋರ್ನೆಲ್ಲ ಈ ಚೆನ್ನಿಗಪ್ಪನಂಗೆ ಇದ್ದರಂತೆ. ಅದ್ಕೆ ಅಂತ ನನಮಕ್ಕಳ ಸವಾಸವೇ ಬ್ಯಾಡ ಅಂತ ಅನಿತಕ್ಕನ್ನ ಯಳಕಂಡೋಗಿ ನಿಲ್ಲುಸ್ತಯಿದ್ದರಂತೆ."

"ಅವುಳೇನು ಅಂತ ಚಾಲಾಕಿ ಹೆಂಗಸಲ್ಲ ಕಂಡ್ಯ, ತಂಬಟ್ಟಿದ್ದಂಗವುಳೆ" ಎಂದಳು ಜುಮ್ಮಿ.

"ಅವುಳೇನೋ ತಂಬಟ್ಟಿದ್ದಂಗವುಳೆ, ರೇವಣ್ಣನೆಡ್ತಿ ರಸಗುಲ್ಲ ಇದ್ದಂಗವುಳೆ ಕಣೇ. ಯಂಥಾ ಸುಂದ್ರಿ ಅಂತಿ. ಅವಳಷ್ಟು ಸುಂದ್ರಿ ಅಂತ ರೇವಣ್ಣನಿಗೆ ಗೊತ್ತದೊ ಇಲ್ಲವೊ ಅನ್ನೊ ಅನುಮಾನ ನನಿಗೆ" ಎಂದ ಉಗ್ರಿ ನಕ್ಕ.

"ಯಾಕ್ಲ ಅಂಗಂತೀ"

"ಯಾಕೆ ಅಂದ್ರೆ, ರೇವಣ್ಣನ ಹೆಡ್ತಿ ನೋಡಿದ್ರೆ ಯಾರಿಗೆ ಆಗ್ಲಿ ಗೌರವ ಬತ್ತದೆ ಕಣೆ. ಅಂಥೋಳ ಮದಿವಾದೋನು ವಳ್ಳೆ ಮಾತಾಡ್ತನೆ, ವಳ್ಳೆ ಮನ್ಸ ಆಯ್ತನೆ, ಜನ ಗೌರವ ಕೊಡಂಗಿರತನೆ, ಸಾರ್ವಜನಿಕವಾಗಿ ಕಂಕಳಿಗೆ ಕೈಯಾಕಿ ಮೂಸದಿಲ್ಲ, ಮೂಗಿಗೆ ಬೆಟ್ಟಾಕಿ ಕ್ಯರಿಯದಿಲ್ಲ, ಜೊಲ್ಲು ಸುರಸದಿಲ್ಲ, ಚೆನ್ನಾಗಿ ಹಲ್ಲುಜ್ಜುತನೆ. ಆದ್ರೆ ಈ ರೇವಣ್ಣನ್ನ



ನೋಡಿದ್ರೆ ಭವಾನಕ್ಕನ ಬಗ್ಗೆ ತಲೆನೆ ಕೆಡಿಸಿಗಂಡಂಗೆ ಕಾಣದಿಲ್ಲ ಕಣೆ."

"ಅಂಥಾ ಸುಂದ್ರಿನೇನ್ಲ ರೇವಣ್ಣನೆಡ್ತಿ?" ಎಂದ ಸೀರ.

"ಊಕಣ ಮಾವ, ಕೈತ್ವಳಕಂಡು ಮುಟ್ಕಂಗವುಳೆ."

"ಅಂಗರವುಳೂ ಎಲ್ಯಾರ ನಿಂತಗಬೇಕಾಗಿತ್ತು?"

"ನಿಲ್ಲುಸ್ತರೆಯಿರು. ನೀನೇನು ಆತುರ ಮಾಡಬ್ಯಾಡ. ದ್ಯಾವೇಗೌಡನ ತಲೆಯಾವಾಗ್ಲು ಮಕ್ಕಳು, ಮರಿ, ಬೀಗರು, ಬಿಜ್ಜರಿಗೆ ವಳ್ಳೆ ಕ್ಷೇತ್ರ ಹುಡುಕುತ್ತಾಯಿರತದೆ. ಸಿಕ್ತು ಅಂದೇಟಿಗೆ ಅಲ್ಲಿ ಕಾರ್ಯಕರ್ತರಿಗೆ ಹಿಂಗ್ನಿ ಅಂತರೆ. ಅವ್ರು ಅಂಗಂತವೆ. ಆಗೋಗಿ ನಾಟಹಾಕದ ಅನ್ನು."

"ಒಹೋಹೋ, ಅಂಗೆ ಅನ್ನು."

"ವಸದಾಗಿ ಕೇಳ್ತಿಯಲ್ಲೊ ನೀನು. ಅವುನು ಮಾಡಿದ್ದು ಅದೆಯ. ಈಗ ಮದುಗಿರಿಲಿ ... ಅದೆಯಾ."

"ಅಲ್ಲೇನು ಮಾಡಿದಾ?"

"ಒಬ್ಬ ಸರಕಾರಿ ನೌಕರನ್ನ ಕ್ಯಾಂಡೇಟು ... ಅವುನು ರಿಟ್ಯರ್ ತಗಳಂಗಿಲ್ಲ, ಯಲಕ್ಷನ್ನಿಗೆ ... ಅಂತ ಎಡೂರ ಕಾನೂನು ಮಾಡಿದ. ಸರಿ ದ್ಯಾ... ಕಡಿಯೋರು ಅಂಗರೆ ಯ್ಯಾರೂ... ಅನಿತಕ್ಕನ್ನ ನಿಲ್ಲಿಸಿ ಅಂದ್ರು. ಇವುರು... ಅಂದರಂತೆ."

"ಅದ್ಕೆ ಕಣೊ ಉಗ್ರಿ ಲ್ಯಂಕೇ... ಹಿಂದೆ ದ್ಯಾವೇಗೌಡುನ್ನ ಬುಡಕಟ್ಟಿನ... ಅಂದಿದ್ದ. ಅದಿನ್ನು ನಿಜಾಯ್ತಾ ಆದೆ ... ಎಂದುಕೊಂಡು ವಾಟಿಸ್ಕೆ ಬಂದೆ."

"ಬುಡಕಟ್ಟಿನ ಲೀಡ್ರು ಅಂ..." ಎಂದಳು ಜುಮ್ಮಿ.


"ಬುಡುಬುಡುಕೆ ಲೀಡ್ರು ಅಂತ..."

"ಸರಿಯಾಗೇಳ್ಕ, ಸಲವಾಲ್ದ ನನ್ನ..."

"ಸಾರಿ ಕಣಕ್ಕ ಹೇಳ್ತೀನಿ. ಬು... ಲೀಡ್ರು ಅಂದ್ರೆ ಲೀಡ್ರಾದವುನು ತನ್ನ ಮಕ್ಕಳು ಮ... ಬೀಗರು ಸೊಸೆರ ಯೋಗಕ್ಷೇಮ ನೋಡ್ತನೆ. ... ಆಸ್ತಿಮಾಡಿಕೊಡ್ತನೆ, ಅವುರಿಗೆ ಏನೂ ಆ... ತಲಕಾಯ್ತನೆ. ಅದೇ ಟೀಮಿಗೆ ಇನ್ಯಾರ ಬಗ್ಗೆನೂ ... ಯೋಚನೆ ಮಾಡದಿಲ್ಲ, ಮಾಡಿದ್ದೆ ಆದ್ರೆ ಹಾಸನ... ಪುಟ್ಟೆಗೌಡ ಮಂತ್ರಿ ಆಗಿರತ್ತಿದ್ದ. ರಾಮನಗರದಲ್ಲಿ ... ಬ್ಯಾಳಿತಿದ್ದ. ಮದುಗಿರಿಲಿ ಇನ್ಯಾರೋ ನಿನ್ನಂ... ಕ್ಯಾಂಡೇಟಾಯ್ತಿದ್ದು, ಬ್ಯಾಳಿತಿದ್ದು, ಮಂತ್ರಿ ಆಯ್ತಿದ... ಅಂಗಾಗದಾದ್ರೆ ಅನಿತಕ್ಕ ಆಗಲೇಳು ಅನ್ನದಾದ್ರೆ ... ಬುಡಕಟ್ಟಿನ ಲೀಡ್ರ ತೀರಮಾನ ಆಗಿರತದೆ. ಬು... ಲೀಡ್ರು ಯಾರು ಅಂತ ಈಗ ಗೊತ್ತಾಯ್ತೇನಕ್ಕ" ವಾಟಿಸ್ದೆ.

ಸಂವಿಧಾನವೇ ಅಶುಭ!

ಸೊಜೀದಾಶ್ಚರ್ಯ ಆಗಿತ್ತು, ಚಿಂತೆ ಆಗಿತ್ತು, ದುಃಖ ಆಗಿತ್ತು, ಬೇಸರ ತರಿಸಿತ್ತು, ಇನ್ನೂ ಏನೇನು ಆಗಬಹುದೋ ಅವೆಲ್ಲ ಆಗಿತ್ತು, ಮುಂಬೈ ಸ್ಫೋಟ ನಡೆದು ಆಗಲೇ ಮೂರು ದಿವಸಗಳಾಗಿವೆ. ಆದರೂ ಒಂದೇ ಒಂದು ಸುದ್ದಿ ಇಲ್ಲ ಎಂದರೆ ಏನು ಅರ್ಥ ಎಂದು ಮನಸ್ಸು ಕಾತರಗೊಂಡಿತ್ತು, ಜ್ಯೋತಿಷಿಗಳೇನು ನಿರ್ವಂಶರಾದರೆ ಎಂಬ ಅನುಮಾನ ಕಾಡಿತ್ತು, ಸಾಮಾನ್ಯವಾಗಿ ಇಂತಹ ಅವಘಡಗಳು ಆದಾಗಲೆಲ್ಲ ಯಾವ ಗ್ರಹ ಯಾವ ಮನೆಯಲ್ಲಿ ಕುಳಿತಿದ್ದರಿಂದ ಇದು ಘಟಿಸಿತು ಎಂದು ಅರ್ಥೈಸಲು ಮುಗಿಬೀಳುತ್ತಿದ್ದರಲ್ಲ ಅವರು. ಹೀಗೆ ಸಂಭವಿಸುತ್ತೆ ಎಂದು ಯಾವಾಗಲೂ ಭವಿಷ್ಯ ನುಡಿದದ್ದಿಲ್ಲ ನಿಜ. ಆದರೆ ನಂತರ ಕಾರಣವನ್ನು ಸುಸಂಬದ್ಧವಾಗಿ ನೀಡುತ್ತಿದ್ದರಲ್ಲ, ಮುಂಬೈ ಘಟನೆ ಕುರಿತಂತೆ ಯಾಕೆ ಸುಮ್ಮನಿದ್ದಾರೆ ಎಂಬ ಚಿಂತೆಯಲ್ಲಿ ಮುಳುಗಿದ್ದವ ನಾನು. ನನ್ನಂತೆಯೇ ತಲೆ ಕೆಡಿಸಿಕೊಂಡಿರುವ ಭಾರತೀಯ ಸದ್ಗೃಹಸ್ಥರಿಗೆ ಒಂದನೇ ತಾರೀಖಿನ ದಿನಪತ್ರಿಕೆ ಸಮಾಧಾನ ತರುವ ವರ್ತಮಾನ ಹೊತ್ತು ತಂದಿತು. ಮುಂಬೈ ಘಟನೆಗೆ ಕಾರಣ ತಿಳಿಸಿತ್ತು, ಅದೇನು ಕಾರಣ ಅಂದರೆ– 26 ಸಂಖ್ಯೆಯೇ ಅಶುಭ!



ಅಲ್ಲ ಈ ಸಂಖ್ಯೆಗೂ ಈ ದುರ್ಘಟನೆಗೂ ಎಲ್ಲಿಯ ಸಂಬಂಧ ಎಂದು ಹೇಳುವ ಅಜ್ಞಾನಿಗಳ ತಿಳಿವಳಿಕೆಗಾಗಿ ಅದನ್ನು ಇನ್ನಷ್ಟು ವಿವರಿಸಲಾಗಿದೆ. ಸಂಖ್ಯಾಶಾಸ್ತ್ರದ ಪ್ರಕಾರ ಎರಡು ಚಂದ್ರನನ್ನು ಪ್ರತಿನಿಧಿಸಿದರೆ ಆರು ಶುಕ್ರನೊಂದಿಗೆ ಗುರುತಿಸಿಕೊಂಡಿದೆ. ಇವೆರಡೂ ಒಟ್ಟಾಗಿ ಸೇರಿದರೆ ಅನಾಹುತ ಖಾತರಿ! 26 ರಲ್ಲಿ ಇದು ಆಗಿದೆ!

ಹೌದು ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಅರವತ್ತೆರಡು ವರ್ಷಗಳು ಸಂಭವಿಸಿದೆಯಲ್ಲಾ, ಆರರ ಶುಕ್ರ ಎರಡರ ಗುರುವಿನೊಂದಿಗೆ ಸೇರಿರುವುದೂ ಕಾರಣ ಇರಬಹುದಾ ಅಂದರೆ ಹೆಣ್ಣು ಗಂಡನ್ನು ಕೂಡಿದರೇನು? ಗಂಡು ಹೆಣ್ಣನ್ನು ಕೂಡಿದರೇನು? ಪರಿಣಾಮ ಮಾತ್ರ ಅದೇ ಅಲ್ಲವೆ ಎನ್ನುತ್ತದಂತೆ ಸಂಖ್ಯಾಶಾಸ್ತ್ರ!

ಅರೆರೆ ಜನವರಿ 26 ಗಣರಾಜ್ಯೋತ್ಸವದ ದಿವಸ ಅಲ್ಲವಾ. ಅದೂ ಅಶುಭವೇ ಎಂದರೆ ಗಂಡು ಹೆಣ್ಣಿನ ಸಮಾಗಮ ಹೇಗೆ ಪ್ರತಿಬಾರಿಯೂ ಫಲಕಾರಿಯಾಗುವುದಿಲ್ಲವೋ ಅದೇ ರೀತಿ ಎಲ್ಲ ಗುರು-ಶುಕ್ರ ಸಮಾಗಮದಲ್ಲೂ ಅವಘಡ ಸಂಭವಿಸಬೇಕಾಗಿಲ್ಲ ಎನ್ನುತ್ತದಂತೆ ಸಂಖ್ಯಾಶಾಸ್ತ್ರ!

ಒಂದು ವೇಳೆ ಜನವರಿ 26 ರಂದು ಯಾವುದಾದರೂ ದುರ್ಘಟನೆ ನಡೆದೇ ಹೋದರೆ... ಗುರು-ಶುಕ್ರ ಸಮಾಗಮ ಯಶಸ್ವಿಯಾಯಿತು ಎಂದೇ ಅರ್ಥ! ಆಗ ಜನವರಿ 26 ಅಶುಭ! ಅಂದರೆ ಗಣರಾಜ್ಯೋತ್ಸವ ಅಶುಭ! ಇನ್ನೂ ಮುಂದುವರೆದು ಹೇಳಬಹುದಾದರೆ ಸಂವಿಧಾನವೇ ಅಶುಭ!!

ಇದುವರೆಗೆ 13 ಅಶುಭ ಸಂಖ್ಯೆ ಎಂದು ಭಾವಿಸಿದ್ದೆವು. ಕೆಲವು ಪಾಶ್ಚಾತ್ಯ ದೇಶಗಳಲ್ಲಿ 13 ನೇ ಮಹಡಿಯೇ ಇರುವುದಿಲ್ಲವಂತೆ. 12 ರ ನಂತರ ಹದಿನಾಲ್ಕಕ್ಕೆ ಹಾರುತ್ತಾರಂತೆ. ಭಾರತೀಯರೇನೂ ಇದರಲ್ಲಿ ಹಿಂದೆಬಿದ್ದಿಲ್ಲ, ನಮ್ಮ ಶಾಸಕರ ಭವನದಲ್ಲಿ 420 ನೇ ಕೊಠಡೀನೆ ಇಲ್ಲ! 419 ರ ನಂತರ 419A ಇದೆ! ನಂತರ 421! ಐಪಿಸಿ 420 ನೇ ವಿಧಿ ಪ್ರಕಾರ ಶಿಕ್ಷೆಗೆ ಒಳಗಾಗಬಹುದಾದ ಭೂಪರೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಶಾಸಕರಾಗಿದ್ದರೂ ಆ ಸಂಖ್ಯೆಯ ಕೊಠಡಿಯಲ್ಲಿರಲು ಏನೋ ಮುಜುಗರ ಪಾಪ!

ನನಗೊಂದು ಅನುಮಾನ. 26 ಅಶುಭ ಸಂಖ್ಯೆ. ಎರಡಕ್ಕೆ ಆರನ್ನು ಸೇರಿಸಿದರೆ ಎಂಟಾಗುತ್ತದೆ. ಈ ಎಂಟು ಅನ್ನೋದು ವಿನಾಶ ಸೂಚಕವಂತೆ! ಹಾಳಾದ ಮುದಿ ಮನಸ್ಸಿಗೆ ಎಂಟರ ಚಿತ್ರ ಏನೇನನ್ನೋ ನೆನಪಿಸುತ್ತದೆ. ಅದೂ ಅನಿಷ್ಟ ಸೂಚಕವೋ ಏನೋ! ಇರಲಿ. ಹಾಳು ಈ ಇಪ್ಪತ್ತಾರರ ಸಂಖ್ಯೆಯ ಸಹವಾಸವೇ ಬೇಡ. ವಿದೇಶೀಯರು ತರಹ 13 ನೇ ಮಹಡಿ ಬದಲಾಗಿ 14 ನೇ ಮಹಡಿ ಬರುವಂತೆ 25 ರ ನಂತರ 27 ಬಂದರೆ ಆಗಬಹುದಾ. ಅದು ನಿರಂತರ ಗೊಂದಲಕ್ಕೆಡೆ ಮಾಡುತ್ತದೆ ಎಂದರೆ ಶಾಸಕರ ಭವನ ಹಾಗೆ 25 ಅದನಂತರ 25A ಬಳಸಿದರೆ ಹೇಗೆ...

ಇನ್ನೂ ಒಂದು ಅನುಮಾನ ಅಂದರೆ ನಮ್ಮದು ಭಾರತೀಯ ಪರಂಪರೆ ತಾನೆ. 26 ನೇ ತಾರೀಖು ಅನ್ನೋದು ಭಾರತೀಯ ಪಂಚಾಂಗದಲ್ಲೂ ಇಪ್ಪತ್ತಾರೇ ಇರುತ್ತಾ... ಇಲ್ಲದ ಮೇಲೆ ಆ ಸಂಖ್ಯೆಯೂ ಅಶುಭವಾ ಅಂತ! ಹೀಗೇ ಎಣಿಸುತ್ತಾ ಹೋದರೆ ಅಶುಭವೇ ಎಲ್ಲ ಶುಭವೇ ಇಲ್ಲ ಅನ್ನುವ ಹಾಗೆ ಆಗಬಹುದಾ ಅಂತ....

ಈ ರಾಜಕಾರಣಿಗಳ ಪಾಡು ಯಾರಿಗೂ ಬ್ಯಾಡ.

ನರೇಂದ್ರ ಮೋದಿ ನೋಡಿ.

ಭಾವೀ ಪ್ರಧಾನಿ ಅಂತಾನೆ ಬಂಬಿಸ್ತಿರೋದು ಭಾಜಪ. ಅದರ ಪಾಂಗಿನ ನೇರಕ್ಕೆ ನಡೆದುಕೊಳ್ಳೋದು ತನ್ನ ಪರಮಪವಿತ್ರ ಕರ್ತವ್ಯ ಅಂತ ಭಾವಿಸಿದೋರು! 'ಭಯೋತ್ಪಾದಕರೆಲ್ಲ ಮುಸಲ್ಮಾನರು' ಎಂಬ ತಾರಕ ಮಂತ್ರ ಹಾಡುತ್ತಿದ್ದ ಅವರಿಗೆ ಕಾವಿ ತೊಟ್ಟು ಸಾಧ್ವಿ, ಗುರು ಎಂದೆಲ್ಲ ಕರೆಸಿಕೊಳ್ಳುತ್ತಿದ್ದವರೆಲ್ಲ ಭಯೋತ್ಪಾದಕರು ಎಂದು ಬಹಿರಂಗವಾದಾಗ ಕೆಡುಕೆನಿಸಿತ್ತು, ಅದು ಅವರಿಗೆ ಇದುವರೆವಿಗೆ ತಿಳಿದಿರಲಿಲ್ಲ ಅಂತ ಅಲ್ಲ, ಅದು ಬಯಲಾಯಿತಲ್ಲ ಅಂತ! 'ಹಿಂದೂಗಳು ಭಯೋತ್ಪಾದಕರಾಗಿರಲು ಸಾಧ್ಯವಿಲ್ಲ' ಎಂದು ಇನ್ನು ಮುಂದೆ ಹೇಳುವಂತಿಲ್ಲ, ಮುತಾಲಿಕ್ ತರಹ ಹರಕುಬಾಯಿಯಾಗಿದ್ದರೆ ಆ ಸಾಧ್ವಿಯ ಶಾಪ ಇವರನ್ನು ಸುಮ್ಮನೇ ಬಿಡುವುದಿಲ್ಲ ಎಂದು ಕೊಬ್ಬಿದ ಬೀದಿ ಗೂಳಿ ತರಹ ಹೂಂಕರಿಸಬಹುದಾಗಿತ್ತು. ಆದರೆ ಇವರು ಹಾಲಿ ಮುಖ್ಯಮಂತ್ರಿ ಭಾವೀ ಪ್ರಧಾನಿ ಅಲ್ವಾ ಆದಕ್ಕೆ ಎಎಸ್‌ಟಿ ಮುಖ್ಯಸ್ಥ ಮಹೇಂದ್ರ ಕರ್ಕರೆಗೆ ಮಾನಸಿಕ ಹಿಂಸೆ ನೀಡಿದರು. ಇದರಿಂದ ಜರ್ಝರಿತರಾಗಿದ್ದ ಕರ್ಕರೆ ಮುಂಬೈ ದಾಳಿಯಲ್ಲಿ ಹುತಾತ್ಮರಾದರಲ್ಲ, ಸಂತುಷ್ಟರಾದರು ಭಾವಿ ಪ್ರಧಾನಿ! ಗುಜರಾತ್ ಸರ್ಕಾರದಿಂದ ಒಂದು ಕೋಟಿ ರೂಪಾಯಿ ನೀಡುವುದಾಗಿ ಘೋಷಿಸಿದರು. ಮುಸಲ್ಮಾನ ದಾಳಿಯಲ್ಲಿ ಮರಣ ಹೊಂದಿದವರಿಗೆಲ್ಲ ಈ ರೀತಿ ಹೇಳ್ತಾನೆ ಇರ್ತಾರಂತೆ. ಆನಂದಧಾಮ ದಾಳಿಯಲ್ಲಿ ಸೊಂದವರಿಗೂ ಇದೇ ಮಾಡಿದ್ದರಂತೆ. ಆದರೆ ಯ... ಪರಿಹಾರ ಸಿಕ್ಕಿಲ್ಲವಂತೆ. ಅದಲ್ಲ ವಿಷಯ. ಒಂದು ... ಸಮಾಧಾನ ಆದರೂ ಸಿಕ್ಕಿತಲ್ಲ! ಆದರೆ ಶ್ರೀಮತಿ ... ಮೋದಿ ಹಣವನ್ನು ತಿರಸ್ಕರಿಸಿದರಂತೆ! ಎಲ್ಲ... ತಿರಸ್ಕರಿಸುತ್ತಾ ಹೋದರೆ ಹಿಂದೂ ರಾಜ್ಯ ಯ... ಸ್ಥಾಪಿಸುವುದು ಯಾವ ಯುಗಕ್ಕೆ ಎಂಬುದಾಗಿ ... ಚಿಂತಿಸುತ್ತಾ ಯಾರಿಗೂ ಮುಖ ತೋರಿಸದ ಹಾ... ಯಂತೆ.

ಇದು ಹಿಂದೂ ಮೋದಿ ಪುರಾಣ ಆಯಿತಾ... ಕಮ್ಯುನಿಸ್ಟ್ ವಿಎಸ್ ಕತೆ ಕಡೆ ಗಮನ ಹರಿಸೋಣ...

ಪಾಪ ಅಚ್ಯುತಾನಂದ ಸಾಹೇಬರು ದೆಹ... ಯಾವುದೋ ಸಭೆಗೆ ಹೋಗಿದ್ದರಂತೆ. ... ಹೈದರಾಬಾದಿಗೆ ಹೋಗಬೇಕಿತ್ತಂತೆ. ಮೇಜರ್ ಸ...

ಅಣಕ...
ಎಚ್.ಎಲ್. ಕೇಶವಮೂ...

ಹುತಾತ್ಮನಾಗಿದ್ದನಲ್ಲ ಅವರ ತಂದೆ ಉನ್ನಿಕೃಷ್ಣನ್‌ಗೆ ಸ... ಸೂಚಿಸೋಕೆ ಅಂತ ಬೆಂಗಳೂರಿಗೆ ಬಂದ... ರಾಜಕಾರಣಿಗಳು ಅಂದರೆ ಕೊಳಕು ಮನಸ್ಸಿ... ಅನ್ನೋದು ಉನ್ನಿಕೃಷ್ಣನ್ ಅಭಿಪ್ರಾಯ ಇರಬಹ... ನಮ್ಮ ಮನೆಗೆ ಬರುವುದು ಬೇಡ ಎಂದು ಹೇಳಿದ... 'ನನ್ನ ಮಗ ಕೇರಳಕ್ಕೆ ಸೀಮಿತವಾಗಿಲ್ಲ, ಆತ ... ಭಾರತಕ್ಕೆ ಸೇರಿದವನು' ಅಂತಾನೂ ತಿಳಿಸಿದ್ದರಂತೆ... ವಿ... ಕಮ್ಯುನಿಸ್ಟರಲ್ಲವಾ. ವಿಶ್ವದ ಕಾರ್ಮಿಕರೆಲ್ಲ ಒಂದಾಗಿ ... ಪಕ್ಷಕ್ಕೆ ಪ್ರಾಂತೀಯತೆ ಪಾಠ ಕಲಿಸಿಕೊಡಬೇಕೆ. ಉನ್ನಿ... ಹೆಸರಿನ ಮಾಯೆ ಮೋಡಿ ಹಾಕಿರಬೇಕು. ನಿನ್ನ ... ಬರಲು ನನಗೆ ನಿನ್ನ ಒಪ್ಪಿಗೆ ಯಾಕೆ ಬೇಕು ... ಕಮ್ಯುನಿಸ್ಟ್ ಧೋರಣೆಯಲ್ಲೇ ಹೋದರಂತೆ. ಕರೆ... ಬರುವವನಿಗೆ ಏನಾಗಬೇಕೆಂದು ಸರ್ವಜ್ಞ ಕವಿ ಹೇಳಿದ... ಅದೇ ರೀತಿ ನಡೆಯಿತಂತೆ.

ಇಷ್ಟೇ ಆಗಿದ್ದರೆ ಕೆಲವರು ಅವರನ್ನು ಕೆಲ... ಇವರನ್ನು ಬೈದುಕೊಂಡು ಬಾಯಿ ಚಪಲ ತೀರಿಸಿ... ಬಹುದಾಗಿತ್ತು, ಆದರೆ ಮುದಿ ರಾಜಕಾರಣಿ ಮ... ತಡೆಯಲಿಲ್ಲ, ಅದು ಮೇಜರ್ ಸಂದೀಪ್ ಮನೆ ಅಲ್ಲ...

...ಬಿಟ್ಟಿನ ಲೀಡ್ರು ಇನ್ನೊಂದು ಗುಣ ಏನಪ್ಪ ಅಂದ್ರೆ, ಇನ್ನೊಂದು ...ನೋರು ಸತ್ರೆ ಅವರ ಮನಿಗೆ ಟಿಕೇಟ್ ಕೊಡ್ತಾನೆ. ಅಲವೇನೋ?"
...ಉಗ್ರಿ.
...ರ್ಗಜಾಂಪಲ್ಲು?"
...ಗ್‌ಜಾಂಪಲ್ಲು ಅಂದ್ರೆ ಇಲ್ಲೆ ಚಗರಿಗೌಡ ಸತ್ತಾಗ ಇದೇ ದೇವೇಗೌಡ್ರು ...ಹೆಡತಿಗೆ ಟಿಕೆಟ್ ಕೊಟ್ಟಿದ್ರು. ಈಗ ಮದ್ದೂರಲ್ಲಿ ಸಿದ್ದರಾಜು ಹೆಡತಿಗೆ ...ನೆ."
...ಟಿಕ್ ಕೊಟ್ಟುವುನೆ ಗೊತ್ತೇನೋ? ಪಾರ್ಟಿ ಆಯ್ಕೆ ಮಾಡಿರೋ ...ನಿಂತ್ರೆ ಮುಂದೆ ತಲೆ ನಪ್ಪಾಯ್ತವೆ. ಇದಾದ್ರೆ ಹೇಳಿದ್ದ ಕೇಳಿಕಂಡು ...ತ."
...ದೇನಾರ ಆಗ್ಲಿ, ಹಿಂಗೆ ಆದ್ರೆ ಮುಂದಕ್ಕೆ ವಳ್ಳೆ ಲೀಡ್ರು ಬರದಿಲ್ಲ

...ಳ್ಳೆ ಲೀಡ್ರು ಯಾರಿಗೆ ಬೇಕೊ ಉಗ್ರಿ? ಅದರಲ್ಲು ಜೆಡಿಎಸ್ ...ಂತೂ ವಳ್ಳೆ ಲೀಡ್ರ ಆವಶ್ಯಕತೆಯಿಲ್ಲ, ಆಕಸ್ಮಾತ್ ಇದ್ದಿದ್ರೆ ಆ ಸಿಂಧ್ಯಾ ...ಯ್ಯ ಪ್ರಕಾಶ್ ಯಲ್ಲಾ ಇಲ್ಲೇ ಇರತಿದ್ರು.
...ಪ ವಳ್ಳೆ ಮನ್ಸು ಕಂಡ್ರ" ಎಂದಳು ಜುಮ್ಮಿ.
...ಮ್ಮ ಜುಮ್ಮಕ್ಕ ಯರ್‍ನಾರ ವಳ್ಳೆ ಮನ್ಸ ಅಂದ್ರೆ ದ್ಯಪನೆಟ್ಟ ಅವುನು ವಳ್ಳೆ ...ಕಾಶ ವಳ್ಳೆ ಮನ್ಸ ಆದ್ರೇನು ಮಾಡೀ ಅನ್ನೋತರದ ಮನ್ಸ ಅದಿರ್ಲಿ ...ಚಿಗೆ ಇಂಡಿಯಾದೇಸದ ಬಗ್ಗೆ ಯೋಚನೆ ಮಾಡುವಾಗ ಯಾಕೋ ...ದ್ರು ಗೆಪ್ತಿಗೆ ಬಂದ್ರು ಕಣಕ್ಕ."
...ವ್ಯಾಕ್ಲ?"
...ಡಿಯಾ ದೇಸದ ಡ್ರೈಜೇಶನ್ ಪವರ್‍ರುದಲ್ಲಕ್ಕ, ಇಟೀಸ್ ರಿಯಲಿ ...ಕ್. ಪಾಕೀಸ್ತಾನದ ಸಾಬರು ಬಂದು ಬಂಬಾಯಿಲಿ ಇನ್ನೂರು ಜನ ... ಹೋದ್ರು. ಯರಡದಿನ ಬುಟ್ಟು ಮದ್ವಂಗಿದ್ದೊ ಅಂಗೆ ಆದೊ. ...ಮಿಗೆ ಮೈಸೂರಲ್ಲಿ ಹಾಸ್ಯೋತ್ಸವ ಮಾಡಿಕಂಡು ಜನ ನಗಾಡಿದ್ರು. ...ದ್ರು. ಹಿಂಗೆ ನಮ್ಮ ದೇಶದ ಜೀರ್ಣ ಶಕ್ತಿನೆ ಅದ್ಭುಬುತ. ಅದೇ ತರ ... ಅಧ್ಯಕ್ಷ ಮಿರಾಜುದ್ದೀನ್ ಗ್ಪಟಿಕ್ ಅಂದ ದ್ಯಾವೇಗೌಡ ಕುಮಾರಸ್ವಾಮಿನೆ ...ಂದ. ಲಕ್ಷಾಂತರ ಜನ ತಂದು ಸುರಕಂಡು ಬೆಂಗಳೂರನೆ ಏಳುಗಂಟೆ ... ಮದ್ದೂರ ಸಿದ್ದರಾಜು ಸತ್ತ, ಅವುನೆಡ್ತಿನೆ ಕ್ಯಾಂಡೇಟ್ ಅಂದ. ಅಂಗೆ ...ಲಿ ಪಾರ್ಟಿ ಲೀಡ್ರ್ನಲ್ಲ ಚೆನ್ನಿಗಪ್ಪನಂಗೆ ಕಂಡ್ರು. ಅದ್ಕೆ ತನ್ನ ಸೊಸೆನ ...ಕ್ ಅಂದ. ಇದನ್ನೆಲ್ಲ ನೋಡಿದ್ರೆ, ಗೌಡ್ರು ಡ್ರೈಜೇಶನ್ ಪವರ್‍ರು, ...ದೇಶದ ಡ್ರೈಜೇಶನ್ ಪವರ್ ಒಂದೇ ತರ ಕ್ಯಲಸಮಾಡ್ತ ಅದೇನೋ ...ನುಮಾನ ನನಿಗೆ. ಅಲವೆ ದ್ವಡಪ್ಪ?"
... ಉಗ್ರಿ, ಬಾಯಿ ಮ್ಯಾಲೊಂದ ವಡಿಲ ಅವುನಿಗೆ."
...ರಿ ದ್ವಡಪ್ಪ." ■

...ನಾಯಿಯೂ ಆ ಮನೆಯ ಹತ್ತಿರ ಸುಳಿಯುತ್ತಿರಲಿಲ್ಲ ಎಂಬುದಾಗಿ ...ಮುಗಾಗಿದ್ದ ಅಪಮಾನಕ್ಕೆ ತಿರುಗೇಟು ನೀಡಿದರು. ಆದರೆ ಅಯ್ಯೋ ...ವರಿಗೆ ತಿರುಗಬಾಣವಾಗಬೇಕೆ.

...ಳ ವಿಧಾನಸಭೆಯಲ್ಲಿ ಇದು ಮರುಕಳಿಸಿತು. ಕರಿನಾಯಿ ಕೊರಳಿಗೆ ...ಂದನ್ ಹೆಸರಿನ ಬೋರ್ಡು ನೇತಾಡಿಸಿದರು! ಕರಿನಾಯಿಯನ್ನೇ ...ಂದರೆಂದು ತಿಳಿದುಬಂದಿಲ್ಲ, ಕಂದು, ಬಿಳಿನಾಯಿಗಳಿಗಿಂತ ಇದು ...ಂದಿರಬಹುದು! ಅಚ್ಯುತಾನಂದನ್ ಇದನ್ನು ಪ್ರಶ್ನಿಸಿಲ್ಲ, ಆದರೂ ...ದ ಮೇಲೆ ಕ್ಷಮೆಯಾಚಿಸಿದರು. ಮಾಧ್ಯಮಗಳು ನನ್ನ ಹೇಳಿಕೆಯನ್ನು ... ಎಂಬುದನ್ನು ಹೇಳುವುದನ್ನು ರಾಜಕಾರಣಿಗಳ ಬುದ್ಧಿ ಬಿಡಲಿಲ್ಲ. ... ಗಾಯಕ್ಕೆ ಮುಲಾಮು ಹಚ್ಚಲೋ ಏನೋ ಕೇರಳ ಸರ್ಕಾರ ಉನ್ನಿ ...ಕುಟುಂಬಕ್ಕೆ ಹದಿನೈದು ಲಕ್ಷ ರೂಪಾಯಿ ಪರಿಹಾರ ಘೋಷಿಸಿ ...ಕುಕೊಂಡಿದೆ.

...ಕೂ ಈ ರಾಜಕಾರಣಿಗಳ ಪಾಡು ನಾಯಿ ಪಾಡಾಗಿದೆ.

ಕಿಸ್ಸಾಕುರ್ಸೀ ಕಾ

...ಊರು ಯಾವುದಕ್ಕೆ ಪ್ರಸಿದ್ಧಿ?

...ನ ಕಾಯಿಗೆ.

... ಹುಡುಗನೂ ಹೇಳುವ ಉತ್ತರ ಇದು.

...ರೆ ಇದು ಸುಳ್ಳು!

... ಜ್ಯೋತಿಷಿಗಳಿಗೆ ಪ್ರಸಿದ್ಧಿ!

...ಮಾನವಿದ್ದರೆ ಸಂಪರ್ಕಿಸಿ: ಡಿ.ಕೆ. ಶಿವಕುಮಾರ್ ಯಾ ವಿಲಾಸ್‌ರಾವ್ ...ಖ.

...ಪೂರ್ತಿ ಕುರ್ಚಿಯಲ್ಲಿ ಕುಳಿತಿರಬೇಕು.

...ನು ಮಾಡಬೇಕು?

...ಊರಿನ ಬಳಿ ಹಳ್ಳಿಯ ಜ್ಯೋತಿಷಿ ಕೇಳಿ. ಅವನು ಕೊಟ್ಟ ತಾಯಿತ ... ಆತ ಸೂಚಿಸಿದ ಪೂಜೆ ನೆರವೇರಿಸಿ!

...ಗೆ ಮುಗಿಯಿತು. ನೀವು ನಿಶ್ಚಿಂತರಾಗಿರಬಹುದು.

...ಶ್ ರಾವ್ ಮಾಡಿದ್ದೂ ಅದನ್ನೇ.

...ದು ಸಲ ಭೇಟಿ ಮಾಡಿದರು. ಹಣ ಸುರಿದರು.

...ಜೆ ನೆರವೇರುತ್ತಲೇ ಇತ್ತು, ತಾಯಿತ ಗಟ್ಟಿಯಾಗಿತ್ತು,

...ದೆ...

...ರ್ ಉಳಿಯಲಿಲ್ಲ!

... ಸಮಯವನ್ನ ಅಧಿಕಾರದಲ್ಲಿ ತೊಡಗಿಸಿದ್ದರೆ...

...ಕಾರಣಿಗಳಿಗೆ ಇದನ್ನು ಹೇಳುವವರು ಯಾರು? ■

ಮರೆಯುವ ಮುನ್ನ



■ ಪಿ. ಲಂಕೇಶ್ ಮಾರ್ಚ್ 17, 1991


ಸತ್ಯ ಅಭಿಪ್ರಾಯ ಮತ್ತು ಟೀಕೆ

ಈತ ನನಗೆ ಹೇಳಿದ, "ನಿಮ್ಮನ್ನು ಟೀಕಿಸಲು ಎಲ್ಲರೂ ಹೆದರುತ್ತಾರೆ. ಆದ್ದರಿಂದ ನೀವು ಟೀಕಿಸಿದರೂ ಟೀಕಿಸಿಕೊಂಡವರು ಸೊಲ್ಲೆತ್ತುವುದಿಲ್ಲ, ನನಗೂ ನಿಮ್ಮನ್ನು ಕಂಡರೆ ಹೆದರಿಕೆ, ನಿಮ್ಮದು ತುಂಬಾ ಸುರಕ್ಷಿತ ಸ್ಥಿತಿ."

"ಹೌದ? ನನ್ನ ಕಾದಂಬರಿ 'ಮುಸ್ಸಂಜೆಯ ಕಥಾ ಪ್ರಸಂಗ' ಹೊರಬಂದಾಗ ಅದು ಕಾದಂಬರಿಯೇ ಅಲ್ಲ, ಕಚಡಾ ಪುಸ್ತಕ ಎಂದು ಬರೆದವರು, ಬರೆಸಿದವರು ಇವತ್ತಿಗೂ ಇದ್ದಾರೆ; ನನ್ನ ಕವನ ಸಂಕಲನವೊಂದು ಪ್ರಕಟವಾದಾಗ ನಿಷ್ಕಾರಣವಾಗಿ ಅಲ್ಲಿರುವ ಪದ್ಯಗಳು ಕವನಗಳೇ ಅಲ್ಲ ಎಂದು ಬರೆದರು. ಅದೆಲ್ಲ 'ಪತ್ರಿಕೆ' ಹೊರಬರುವ ಮುನ್ನ. ಇತ್ತೀಚೆಗೆ ನನ್ನಿಂದ ಯಾವುದೇ ಪ್ರಚೋದನೆಯೂ ಇಲ್ಲದೆ ನನ್ನನ್ನು ಏನೇನೆಂದು ಕರೆದರು, ಟೀಕಿಸಿದರು ಎಂಬುದನ್ನು ನೀವು ಗಮನಿಸಿದ್ದೀರಿ. ನನ್ನಿಂದ ಪ್ರೀತಿ, ವಿಶ್ವಾಸವನ್ನೆಲ್ಲ ಪಡೆದು ನಮ್ಮ ಕಚೇರಿಯಲ್ಲಿ ಅನೇಕ ವರ್ಷ ಇದ್ದವರು ಏನೇನು ಅಪಪ್ರಚಾರ ಮಾಡಿದರು ಎಂಬುದು ಅನೇಕ ಪತ್ರಿಕೆಗಳಲ್ಲಿ ಬಂದಿದೆ. ಮೊನ್ನೆ 'ಚಿಕವೀರ ರಾಜೇಂದ್ರ' ಕಾದಂಬರಿಯನ್ನು ಕುರಿತು ಮೋಜಿನ ಸಂಗತಿಯೊಂದು ಆಯಿತು. ನಾನು ಹಿಂದೆ ಅವಸರದಲ್ಲಿ ಓದಿದ ಕಾದಂಬರಿ; ಈಚೆಗೆ ಅದಕ್ಕೆ ಪೂರ್ಣವಾಗಿ ಸ್ಪಂದಿಸಿದಾಗ ಮಾಸ್ತಿಯವರ ದಾಕ್ಷಿಣ್ಯ, ನ್ಯಾಯವಂತಿಕೆ ನೋಡಿ ಖುಷಿಗೊಂಡೆ. ಯಾವುದೇ ಜನಾಂಗವನ್ನು ಅವಮಾನಗೊಳಿಸಲು ಬಿಡದ ದಾಕ್ಷಿಣ್ಯ ಅದು; ಸೂಕ್ಷ್ಮಜ್ಞತೆಯಿಂದ ಬಂದ ನ್ಯಾಯವಂತಿಕೆ, ಅದನ್ನು ಬರೆದೆ. ಮಾಸ್ತಿಯವರು ಈ 'ಚಿಕವೀರ ರಾಜೇಂದ್ರ'ದಲ್ಲಿ ಲಿಂಗಾಯತರಿಗಾಗಲಿ, ಮತ್ತಾರಿಗಾಗಲಿ ಅವಮಾನ ಮಾಡಿಲ್ಲ ಎಂದು ಬರೆದೆ. ಆದರೆ ಈಗಾಗಲೇ ಆ ಕಾದಂಬರಿಯಲ್ಲಿ ಜಾತೀಯತೆ ಕಂಡುಕೊಂಡು ಹುಯಿಲೆಬ್ಬಿಸಿದ ಪಟ್ಟಭದ್ರರಿಗೆ ನನ್ನ ಮಾತಿನಿಂದ ನಿರಾಶೆ, ಸಿಟ್ಟು ಎರಡೂ ಉಂಟಾದವು–ನನಗೆ ಕೊಳಕು ಪತ್ರಗಳನ್ನು ಬರೆದು ಮನನೋಯಿಸಲು ಯತ್ನಿಸಿದರು; ತಮ್ಮ ಸ್ಥಳೀಯ ಪತ್ರಿಕೆಗಳಲ್ಲಿ ಈ ಸಣ್ಣತನದ ಮಾತುಗಳನ್ನು ಅಚ್ಚು ಮಾಡಿದರು. ನಾನು ನಕ್ಕು ಸುಮ್ಮನಾದೆ.

ನಮ್ಮಲ್ಲಿ ಸಾಹಿತ್ಯ ರಾಜಕೀಯ ಎಲ್ಲದರಲ್ಲೂ ತಿಪ್ಪೆ ಸಾರಿಸುವ ಕೆಲಸ ನಡೆಯುತ್ತಲೇ ಇದೆ. ಒಬ್ಬ ಕವಿ ತನ್ನ ಉದ್ದೇಶವೇನು, ತನ್ನ ಮೇಲಿನ ಪ್ರಭಾವಗಳೇನು ಎಂಬುದನ್ನು ಬರೆಯುತ್ತ ಸ್ವಪ್ರತಿಷ್ಠೆಯ ಮಾತು ಬರೆಯುತ್ತಾನೆ; ಗೆಳೆಯರ ಪತ್ರದಿಂದ ಅಚ್ಚುಮಾಡಿಕೊಂಡು ಓದುಗರ ದಾರಿತಪ್ಪಿಸಲು ಯತ್ನಿಸುತ್ತಾನೆ; ಭಾರತದ ಮಟ್ಟದಲ್ಲಿ 'ಸಾಹಿತ್ಯ ರಾಜಕೀಯ' ಮಾಡಿ ಕವನಗಳಿಗೆ ಪ್ರಚಾರ ಗಿಟ್ಟಿಸಲು ಯತ್ನಿಸುತ್ತಾನೆ. ಇಂಥವರಿಗೆ ಅವರ ಮಾತುಗಳಲ್ಲಿ ನಡವಳಿಕೆಯಲ್ಲಿ ಇರುವ ಸಹಜಗುಣ ಅವರ ಕಾವ್ಯದಲ್ಲೂ ಹೇಗೆ ನೆಲೆಸಿದೆ ಎಂದು ತೋರುವುದು ಅಗತ್ಯ. ಇನ್ನೊಬ್ಬ ಕುಕವಿ ಏಟ್ಸ್ ಕವನಗಳನ್ನು ಅನುವಾದಿಸಲೆತ್ನಿಸಿ ತನ್ನ 'ಪದ್ಯ'ದ ವಿಶೇಷ ರಕ್ಷಣೆಗಾಗಿ ಅಂತರಾಷ್ಟ್ರೀಯ 'ಖ್ಯಾತಿ'ಯ ಸಾಹಿತಿಗಳಿಂದ ಶಿಫಾರಸ್ಸು ಮಾತು, ಮುನ್ನುಡಿ ಪ್ರಕಟಿಸಿಕೊಂಡು ಓದುಗರಲ್ಲಿ ಗೊಂದಲ, ದಿಗಿಲು ಹುಟ್ಟಿಸಲು ಯತ್ನಿಸುತ್ತಾನೆ. ಇಂಥವರಿಗೆ ಏನೆನ್ನುವುದು? ಇಲ್ಲಿ ಒಂದು ಮಾತು ಹೇಳಬೇಕು, ನನ್ನನ್ನು ಟೀಕಿಸುವವರಾಗಲಿ, ನನ್ನಿಂದ ಟೀಕಿಸಲ್ಪಟ್ಟವರಾಗಲಿ ಇದನ್ನು ನೆನಪಿಡಬೇಕು. ಹಗಲನ್ನು ರಾತ್ರಿ ಮಾಡಲಾಗುವುದಿಲ್ಲ, ರಾತ್ರಿಯನ್ನು ಹಗಲಾಗಿಸಲು ಸಾಧ್ಯವಿಲ್ಲ, ನಮ್ಮ ಪ್ರಾಮಾಣಿಕತೆ–ಮತ್ತು ಅರ್ಥವಂತಿಕೆ ಮಾತ್ರ ಎಲ್ಲ ಅಭಿಪ್ರಾಯಗಳನ್ನು ಎದುರಿಸಿ ನಿಲ್ಲಬಲ್ಲವು. ಇದನ್ನು ನನಗೆ ನಾನೇ ಹೇಳಿಕೊಳ್ಳುವಂತೆಯೇ ಇತರರಿಗೂ ಸೂಚಿಸುತ್ತಿದ್ದೇನೆ.

ನಮ್ಮ ಜೀವನ ವಿಧಾನ!



ಇದನ್ನು ಜಾತಿಯ, ಗುಂಪಿನ ನಿಟ್ಟನಲ್ಲಿ ಕಂಡು ವಿವರಿಸುವವರಿದ್ದಾರೆ. ಪುಢಾರಿಗಳಂತೆ "ನಮ್ಮೋರು ಬರೆದಿದ್ದು" ಎಂದು ಎದೆ ಉಬ್ಬಿಸುವವರುಂಟು. ಇದರಲ್ಲಿ ಸತ್ಯವಿಲ್ಲ ಎಂದು ಹೇಳುವುದೂ ಕಷ್ಟ. ಮೊನ್ನೆ ಎರಡು ಆತ್ಮಚರಿತ್ರೆಗಳನ್ನು ನೋಡಿದೆ. ಒಂದು ತ.ಸು. ಶಾಮರಾಯರದು, ಇನ್ನೊಂದು ಎ.ಎನ್. ಮೂರ್ತಿರಾವ್‌ರದು. ಇಬ್ಬರೂ ಎಷ್ಟು ಒಳ್ಳೆಯವರು, ಸುಸಂಸ್ಕೃತರು ಮತ್ತು ಬುದ್ಧಿವಂತರು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಯೇ ಇಲ್ಲ. ತ.ಸು. ಶಾಮರಾಯರು ಉತ್ತಮ ಅಧ್ಯಾಪಕರು, ವಿಮರ್ಶಕರು ಆಗಿದ್ದವರು; ಮೂರ್ತಿರಾಯರು ನಮ್ಮ ಶ್ರೇಷ್ಠ ಪ್ರಬಂಧಕಾರರಲ್ಲಿ ಒಬ್ಬರು ಮಾತ್ರವಲ್ಲ, ಅತ್ಯಂತ ಸೂಕ್ಷ್ಮಮತಿಯುಳ್ಳವರು, ಶಾಮರಾಯರ ಆತ್ಮಚರಿತ್ರೆ 'ಭಕ್ತ ಕುಂಬಾರ' ಕತೆಯನ್ನು ನೆನಪಿಗೆ ತಂದರೆ ಮೂರ್ತಿರಾಯರ ಆತ್ಮಚರಿತ್ರೆ ಮಧ್ಯಮ ವರ್ಗದ ಉತ್ತಮ ವ್ಯಕ್ತಿಯೊಬ್ಬರ ನೆನಪುಗಳನ್ನು ಮಂಡಿಸುತ್ತದೆ. ಎರಡೂ ಪುಸ್ತಕಗಳಲ್ಲಿನ ವೈಶಿಷ್ಟ್ಯ–ಇವರು ಇಡೀ ಜೀವನದುದ್ದಕ್ಕೆ ಕಂಡ, ವ್ಯವಹರಿಸಿದ ವ್ಯಕ್ತಿಗಳ ಜಾತಿ, ಹಿನ್ನೆಲೆ ನೋಡಿದರೆ ಸುಮಾರು ಶೇಕಡಾ ತೊಂಭತ್ತೈದು ಭಾಗ ಅವರ ಜಾತಿಯವರೇ! ಇದನ್ನು ಟೀಕಿಸುವುದಕ್ಕಾಗಿ ಅಲ್ಲ, ಕುತೂಹಲಕ್ಕೆ ಹೇಳುತ್ತಿದ್ದೇನೆ.

ಭಯೋತ್ಪಾದಕ



■ ಡಾ.ಡಿ.ಸಿ. ರಾಜಪ್ಪ

ಎಲ್ಲಿ ಹುಟ್ಟಿದೆ ನೀನು
ನಿನ್ನಾರು ಹೆತ್ತವರು
ಮಾತಾಡು ಮೌನ ಮುರಿದು
ಈ ಜಗದ ಶಾಂತಿಯು
ನಿನಗಿಂತ ಹಿರಿದು

ಎಲ್ಲಿ ನೋಡಿದರಲ್ಲಿ
ನಿನ್ನ ಕರಾಳ ರಕ್ಕಸಸೆರಗು
ಹಿಂಸೆ ಕ್ರೌರ್ಯವ ತೋರಿ
ಅಶಾಂತಿಯ ಮುಗುಳ್ನಗೆ ಬೀರಿ
ಎಲ್ಲೆಂದರಲ್ಲಿ ಮುಗ್ಧರನ್ನು ಕೊಲ್ಲುತ್ತಾ
ರಕ್ತದೋಕುಳಿಯ ಹರಿಸಿ
ಅಟ್ಟಹಾಸಗೈದು ಮೆರೆವ
ನೀನಾರು? ಹೇ ಮುಸುಕುಧಾರಿ
ಮಾತಾಡು ಮೌನವ ಮುರಿದು
ಈ ಜಗದ ಶಾಂತಿಯು
ನಿನಗಿಂತ ಹಿರಿದು

ಕಾಶ್ಮೀರ ಕಣಿವೆಗಳಲ್ಲಿ ಮೈದಾನಗಳಲ್ಲಿ
ಹರಿದಾಡುವ ಬಸ್ಸುಗಳಲ್ಲಿ
ಓಡಾಡುವ ರೈಲುಗಳಲ್ಲಿ
ಹಾರಾಡುವ ವಿಮಾನದಲ್ಲಿ
ಮಸೀದಿ, ಚರ್ಚ್, ದೇಗುಲಗಳಲ್ಲಿ
ಹೋಟೆಲ್‌ಗಳ ಸಮುಚ್ಚಯದಲಿ
ಬಹುಮಹಡಿ ಕಟ್ಟಡಗಳ
ನೆಲದಡಿಯಲ್ಲಿ
ಸಾಲು ಸಾಲು ಹೆಣಗಳ ಕೆಡವಿ
ಅಟ್ಟಹಾಸಗೈವ
ಹೇ ಮುಸುಕುಧಾರಿ

ನೀನಾರು? ನೀನಾರು?
ಮಾತಾಡು ಮೌನ ಮುರಿದು
ಈ ಜಗದ ಶಾಂತಿಯು
ನಿನಗಿಂತ ಹಿರಿದು

ಅಧರ್ಮ ನಿನ್ನ ತಂದೆಯೇ, ದುಡ್ಡು
ನಿನ್ನ ತಾಯಿಯೇ ಅಥವಾ ಇವರಿಬ್ಬರ
ಅಕ್ರಮ ಮಿಲನದೊಳುದ್ಭವಿಸಿದ
ಪಾಪದ ಪಿಂಡವು ನೀನೇ?
ನೀನಾರು? ಮುಸುಕುಧಾರಿ
ಮಾತಾಡು ಮೌನ ಮುರಿದು
ಈ ಜಗದ ಶಾಂತಿ
ನಿನಗಿಂತ ಹಿರಿದು


ಯಾರಿಗಾಗಿ ನಿನ್ನ ಈ ಹೋರಾಟ
ಮನುಕುಲದ ಒಳಿತಿಗಾಗಿಯೇ?
ವಿಶ್ವಶಾಂತಿಗಾಗಿಯೇ?
ಹೇಳು ಮುಸುಕುಧಾರಿ
ನೀನಾರು? ನೀನಾರು?
ಮಾತಾಡು ಮೌನ ಮುರಿದು
ಈ ಜಗದ ಶಾಂತಿ
ನಿನಗಿಂತ ಹಿರಿದು

ಹಿಂಸೆ ಮಾನವತೆಯ ಮೇಲೆ
ಮಾಡುವ ನೇರ ಅಪರಾಧ
ಮರೆಯದಿರು ಮುಸುಕುಧಾರಿ
ಮಾತಾಡು ಮೌನ ಮುರಿದು
ಈ ಜಗದ ಶಾಂತಿ
ನಿನಗಿಂತ ಹಿರಿದು ■





ಕನಕಪುರದಲ್ಲಿ ಕಂಡ ಮನುಷ್ಯ ವ್ಯಾಪಾರ!



ಬಿಡಿ ಚಿತ್ರಗಳು

• ಈಶ

"ಇದು ಭೂಕಂಪದಿಂದ ಆದ ಧ್ವಲ್ಲ;

ಕನಕಪುರವೆಂಬ ಪುರಾತನ ಪಟ್ಟಣದ ಪೇಟೆ ಬೀದಿಯಲ್ಲಿ ಬುಲ್ಡೋಜರ್‌ಗಳು ಕೆಡವಿ ಹಾಕಿರುವ ನೂರಾರು ಮನೆಗಳು, ಅಂಗಡಿ, ಹೋಟೆಲ್, ಪೆಟ್ಟಿ ಅಂಗಡಿಗಳ ಅವಶೇಷಗಳಿವು. ಕಳೆದ ವಾರ ಒಂದು ಕೆಲಸಕ್ಕಾಗಿ ಕನಕಪುರಕ್ಕೆ ಹೋದ ನಾನು ಕಕ್ಕಾಬಿಕ್ಕಿಯಾಗುವಂತೆ ಈ ನನ್ನ ನೆಚ್ಚಿನ ಊರಿನ ರೂಪ ಬದಲಾಗಿ ಹೋಗಿತ್ತು. ಹಾಗೆ ನೆಲಸಮವಾದ ಕಟ್ಟಡಗಳ ಪೈಕಿ ನಾನು ಕನಕಪುರದಲ್ಲಿದ್ದಾಗ ನಮ್ಮ ಗೆಳೆಯರ ಗುಂಪಿನ ಫೇವರೇಟ್ ಅಡ್ಡೆಯಾಗಿದ್ದ ತೆಂಗಿನ ಮರದ ಹೋಟೆಲ್ಲೂ ಒಂದಾಗಿತ್ತು. ನಿತ್ಯ ಸಂಜೆ ಐದಾಯಿತೆಂದರೆ ನಾವೊಂದೈದು ಹುಡುಗರು ಊರೆಲ್ಲಾ ಒಂದು ರೌಂಡು ಹೊಡೆದು ಆರು ಗಂಟೆ ಸುಮಾರಿಗೆ ತೆಂಗಿನ ಮರದ ಹೋಟೆಲ್ ಹೊಕ್ಕೆವೆಂದರೆ ರಾತ್ರಿ ಹತ್ತಾದರೂ ಆಚೆ ಬರುತ್ತಿರಲಿಲ್ಲ. ಅದೊಂದು ಹಳೆಯ ಕಟ್ಟಡ. ಮೊದಲಿಗೆ ಒಂದು ದೊಡ್ಡ ಹಾಲ್ ತರಹದ ಜಾಗ, ಆಮೇಲೆ ಮುಂದಕ್ಕೆ ಕೋಣೆ. ಆ ಕೋಣೆಯೊಳಗೊಂದು ಕೋಣೆ, ಅಲ್ಲಿಂದಾಚೆಗೆ ಇನ್ನೊಂದು ಕೋಣೆ... ಹೀಗಿತ್ತು ಅದರ ಆಕೃತಿ. ಅದರ ಪೈಕಿ ಅತೀ ಹಿಂದಿನ ಕೋಣೆಯಲ್ಲಿ ಅಡ್ಡೆ ಹಾಕುತ್ತಿದ್ದ ನಾವು ಅಂದರೆ ನಾನು, ಸಿದ್ದೇಗೌಡ (ಈಗ ಪ್ರಜಾವಾಣಿಯಲ್ಲಿ ಉಪ ಸಂಪಾದಕ), ಎಂ.ಸಿ. ನಾಗರಾಜ (ರಂಗ ಕಲಾವಿದ), ಲಕ್ಷ್ಮೀಪತಿ (ಬರಹಗಾರ), ಮುನಿ ಚೌಡಪ್ಪ (ಈಗ NGO ನಲ್ಲಿದ್ದಾನೆ) ಮಾತಾಡದ ವಿಷಯಗಳೇ ಇರಲಿಲ್ಲ. ಗಂಟೆಗೆ ನಾಲ್ಕು ಸಲ ಟೀ ಆರ್ಡರ್ ಮಾಡುತ್ತಾ, ಕೈಲಿಡಿದ ಸಿಗರೇಟು ಉರಿದು ಮುಗಿಯುತ್ತಿದ್ದಂತೆ ಇನ್ನೊಂದಕ್ಕೆ ಬೆಂಕಿ ತಾಗಿಸಿ ಅದರ ಹೊಗೆಯ ರಾಶಿಯಲ್ಲೇ ಚೆಗವೇರಾನಿಂದ ಹಿಡಿದು ನಕ್ಸಲ್ಬಾರಿತನಕ, ಭೈರಪ್ಪ ಕುವೆಂಪು, ಲಂಕೇಶ್, ತೇಜಸ್ವಿ ಹೀಗೆ ಯಾರನ್ನೂ ಬಿಡದೆ, ಏನನ್ನೂ ಉಳಿಸವೆಂಬ ಒಂದೇ ಧಾವಂತದಲ್ಲಿ ನಮ್ಮ ಮಾತು ನಡೆದಿರುತ್ತಿತ್ತು.

ಬಹುಶಃ 1995 ರ ಆಜುಬಾಜಿನ ಅವಧಿ ಅದು. ಕರೆಕ್ಟಾಗಿ ಹೇಳಬೇಕೆಂದರೆ ತೇಜಸ್ವಿಯವರ 'ಚಿದಂಬರ ರಹಸ್ಯ' ನಾವೆಲ್‌ನ ಕೆಸರೂರಿನ ಕ್ರಾಂತಿಕಾರಿಗಳಿದ್ದರಲ್ಲ, ನಮ್ಮದೂ ಅದೇ ತರದ ಗುಂಪಾಗಿತ್ತು. ಇನ್ನೊಂದು ಗುಟ್ಟಿನ, ದುಃಖದ ವಿಚಾರ ಹೇಳಬೇಕೆಂದರೆ ಕೆಸರೂರಿನ ಕ್ರಾಂತಿಕಾರಿಗಳಂತೆಯೇ ನಮ್ಮ ಆ ಪ್ರಜ್ವಲಿಸುತ್ತಿದ್ದ ರಭಸದ ಬದುಕಿನ ದಿನಗಳಲ್ಲೂ ಹುಡುಗಿಯರಿರಲಿಲ್ಲ. ನೋಡಲು ಸ್ಮಾರ್ಟಾಗಿದ್ದ, ನಿತ್ಯ ಜಿಮ್ ಮಾಡಿ ಕಟ್ಟುಮಸ್ತಾಗಿದ್ದ ನಮ್ಮ ಗುಂಪಿನ ಯಾರನ್ನು ಕನಕಪುರದ ಹುಡುಗಿಯರು ತಿರುಗಿ ಸೈತ ನೋಡುತ್ತಿರಲಿಲ್ಲ. ಹಾಗೊಂದು ದಿನ ನಮ್ಮ ತೆಂಗಿನ ಮರದ ಹೋಟೆಲ್ಲಿನ ಹರಟೆ ಸೆಷನ್ನಿಗೆ ಗೆಸ್ಟ್ ಆಗಿ ಬಂದಿದ್ದ ಬಂಜಗೆರೆ ಜಯಪ್ರಕಾಶ್ ಈ ಒಗಟನ್ನು ಸರಳವಾಗಿ ಬಿಡಿಸಿಟ್ಟರು.

"ದುಡಿದು ಬದುಕುತ್ತಾನೆ ಅನ್ನಿಸದೆ ಹೋದರೆ ಹುಡುಗಿಯರು ನಿಗಾ ಮಾಡಲ್ಲ" ಎನ್ನುವುದೇ ಜೆಪಿಯ ಸಂಶೋಧನೆಯಾಗಿತ್ತು. ಅದು ನಿಜವಿರಲೂಬಹುದು.

ಅದು ಹೋಗಲಿ ಬಿಡಿ ಕತ್ತೇ ಬಾಲ... ಅಸಲಿಗೆ ನಾನಿಲ್ಲಿ ಹೇಳಹೊರಟಿರುವುದು ಇನ್ನೊಂದು ಬೇರೆ ವಿಚಾರ.

ಅಭಿವೃದ್ಧಿಯೆಂಬುದು ತನ್ನ ಪಾಡಿಗೆ ತಣ್ಣಗೆ ಮಲಗಿದ್ದ ಪುಟ್ಟ ಊರನ್ನು ಏನೆಲ್ಲಾ ಅವಾಂತರಗಳಿಗೆ, ನಾವು ಕಲ್ಪಿಸಿಕೊಳ್ಳಲೂ ಆಗದ ಮನುಷ್ಯ ವ್ಯಾಪಾರವೆಂಬ ಅಗೋಚರ ನಡವಳಿಕೆಗಳಿಗೆ ದಾರಿ ಮಾಡಿಕೊಡುತ್ತದಲ್ಲ ಎಂಬ ವಿಚಾರ ಅದು.

ಈ ಕನಕಪುರ ಕನಿಷ್ಠ ಐದು ಶತಕಗಳ ಇತಿಹಾಸವಿರುವ ಊರು, ಮೊದಲು ಇದನ್ನು ಕಾನಕಾನಹಳ್ಳಿ ಎನ್ನುತ್ತಿದ್ದರು. ಹಳೆಯ ಊರಾದ್ದರಿಂದ ಅಲ್ಲಿನ ರಸ್ತೆಗಳೆಲ್ಲಾ ಕಿರಿದೋ ಕಿರಿದು. ಆದರೆ ಊರು ಬೆಳೆದಂತೆ; ವ್ಯಾಪಾರ ವ್ಯವಹಾರ ಜನಸಂಖ್ಯೆ ಜಾಸ್ತಿಯಾದಂತೆ, ಬಸ್ಸು-ಲಾರಿ-ಕಾರು ಆಟೋಗಳ ಓಡಾಟವೂ ಜಾಸ್ತಿಯಾಗಿತ್ತು. ಈ ಊರಿನ ಪೇಟೆ ಬೀದಿಯ ಯಾವ ರಸ್ತೆಯೂ ಹನ್ನೆರಡಡಿಗಿಂತ ಅಗಲವಿರಲಿಲ್ಲ . ಈಗ್ಗೆ ಐವತ್ತು ವರ್ಷದಿಂದಲೂ ಅಂಗಡಿ, ಮನೆಗಳನ್ನು ಕೆಡವಿ ರಸ್ತೆ ಅಗಲಿ ಮಾಡುವ ಪ್ರಯತ್ನ ನಡೆದೇ ಇತ್ತು. ಆದರೆ ಕೆಲಸ ಆಗಿರಲಿಲ್ಲ. ಆದರೆ ಮೊನ್ನೆ ಬುಲ್ಡೋಜರ್‌ಗಳು ಬೀದಿಗಿಳಿದೇ ಬಿಟ್ಟವು. ಯಾವ ಸರ್ಕಾರದ ತೀರ್ಮಾನವೋ, ಇಲ್ಲಾ ಕೋರ್ಟು ಆದೇಶವೋ ಒಟ್ಟನಲ್ಲಿ ಈಗ ಕರ್ನಾಟಕದ ಸುಮಾರು ಊರು, ಕೇರಿ, ನಗರ ಪಟ್ಟಣಗಳಲ್ಲಿ ಬುಲ್ಡೋಜರ್‌ಗಳು ರಸ್ತೆ ಅಗಲ ಮಾಡಲು ಊರು ಕೆಡುವುವ ಕೆಲಸ ಮಾಡುತ್ತಿದೆ. ಕಳೆದ ವಾರ ಕನಕಪುರದಲ್ಲಿ ಆಗಿದ್ದೂ ಇದೇನೆ.

ಗೆಳೆಯ ಎಂಸಿಯ ಬೈಕ್ ತೆಗೆದುಕೊಂಡು ಕೆಡವಲ್ಪಟ್ಟಿದ್ದ ಊರಿನ ಒಂದೂವರೆ ಕಿಲೋಮೀಟರ್ ಉದ್ದಕ್ಕೂ ನೋಡಿಕೊಂಡು ಬಂದ ನಾನು ಕೊನೆಗೆ "ಜನ ಏನಂದ್ರು, ಅವರ ಮನೆ, ಅಂಗಡಿ ಎಲ್ಲಾ ಉದುರಿ ಬೀಳೋವಾಗ ಏನ್ ಮಾಡ್‌ತಿದ್ರು... ಮಸಿ ಹೇಳಯ್ಯ" ಅಂದೆ. ಆವಾಗ ಮಿತ್ರ ಹೇಳಿದ ಘಟನೆಗಳನ್ನೇ ಇಲ್ಲಿ ನಿಮಗೆ ತಲುಪಿಸುತ್ತಿದ್ದೇನೆ. ಯಾಕೆಂದರೆ ರಸ್ತೆ ಅಗಲಿ ಮಾಡುವುದೋ ಇಲ್ಲಾ ಕಿರಿದು ಮಾಡುವುದೊ ಒಟ್ಟನಲ್ಲಿ ಇದು ಮನುಷ್ಯ ಜಗತ್ತಿನ ವ್ಯಾಪಾರ ತಾನೆ! ಎಷ್ಟೋ ವರ್ಷಗಳಿಂದ ಆಗದಿದ್ದ ಕೆಲಸ ಈಗೆಲ್ಲಿ ಮಾಡ್ತಾರೆ, ಯಾರೋ ಲೀಡರ್, ಇನ್ಯಾವುದೋ ಕೋರ್ಟ್ ಸ್ಟೇ ತಮ್ಮನ್ನು ಕಾಪಾಡುತ್ತೆ ಅಂತ ಕನಕಪುರದ ಜನಾನು ನಂಬಿಕೊಂಡಿದ್ದರಂತೆ. ಆದರೆ ಅದೊಂದು ಬುಧವಾರ ಸಂಜೆ ಜಿಲ್ಲಾಧಿಕಾರಿಯೊಬ್ಬ ಸೀದಾ ಬಂದವನೆ 'ಶನಿವಾರ ಬೆಳ್ಳಂ ಬೆಳಗಿನ ಜಾವಾ ಬುಲ್ಡೋಜರ್‌ಗಳು ಬರ್ತವೆ, ರಸ್ತೆಗಾಗಿ ಗುರುತು ಮಾಡಿರೋಷ್ಟು ಜಾಗದಲ್ಲಿ ಏನೇ ಇದ್ದರೂ ಡೆಮಾಲೀಶ್ ಮಾಡ್ತೀವಿ, ಬೆಲೆ ಬಾಳೋದನ್ನೆಲ್ಲಾ ಸಾಗಿಸಿಬಿಡಿ' ಅಂದನಂತೆ.

ಅಂದರೆ ಕರೆಕ್ಟಾಗಿ ಅರವತ್ತು ಗಂಟೆಗಳ ultimatum ಅದು. ಅತ್ತ ದೂರದ ಮುಂಬೈನಲ್ಲೂ ಮಿಲಿಟೆಂಟ್ ಉಗ್ರರು ತಾಜ್, ಓಬೇರಾಯ್, ನಾರಿಮನ್ ಹೌಸ್‌ಗಳನ್ನು ಹೊಕ್ಕು ಜನರನ್ನು ಒತ್ತೆಸೆರೆಯಾಗಿಟ್ಟುಕೊಂಡು ಆ ಕಟ್ಟಡಗಳನ್ನೆಲ್ಲಾ ಉಡಾಯಿಸುವ ಕಟ್ಟಕಡೆಯ ವಾರ್ನಿಂಗ್ ಕೊಟ್ಟ ಗಳಿಗೆ ಇರಬೇಕು ಅದು. ಇತ್ತ ಕನಕಪುರದ ಸಾವಿರಾರು ಜನರಿಗೂ ಡಿಸಿಯ ಆದೇಶದಲ್ಲಿ ಒತ್ತೆಸೆರೆಯಾದ ಮನಸ್ಥಿತಿ. ಈ ಅಧಿಕಾರಿ ಜನರಲ್ಲಿ ಭೀತಿ ಹುಟ್ಟಿಸಲು ಸಿನಿಮಾ ಟಾಕೀಸ್‌ನಲ್ಲಿ ಸೈಡ್ ರೀಲ್ ತೋರಿಸೋ ಥರ ಡೆಮಾಲಿಷನ್‌ನ ಸ್ಯಾಂಪಲ್ ತೋರಿಸಲು ಒಂದು ಬುಲ್ಡೋಜರ್ ತರಿಸಿ ಅದೇ ಬುಧವಾರ ರಾತ್ರಿಯೇ ಒಂದು ಕಟ್ಟಡಕ್ಕೆ ತಿವಿಸಿ ಬೀಳಿಸಿದರಂತೆ.

ಮುಂಬೈನಲ್ಲಿ ಉಗ್ರರು ಕೆಡವಬೇಕಾದ್ದನ್ನೆಲ್ಲಾ ಕೆಡವಿ ತಾವೂ ನಾಶರಾದರಲ್ಲವೆ. ಅವರನ್ನು ನಾವೆಲ್ಲಾ ಭಯೋತ್ಪಾದಕರೆಂದು ಬ್ರಾಂಡ್ ಮಾಡಿ ಬೈದುಕೊಂಡೆವು. ಆದರೆ ಕನಕಪುರದಲ್ಲೊ ಅಥವಾ ಬೇರೆ ಹತ್ತಾರು ಕಡೆ ಬೇರೊಂದು ರೀತಿಯಲ್ಲಿ ಕೆಡವುವವರನ್ನು ಅಭಿವೃದ್ಧಿಯ ಹರಿಕಾರರು ಎಂದು ಕರೆದು ಸಮಾಧಾನ ಮಾಡಿಕೊಳ್ಳುತ್ತಿದ್ದೇವಲ್ಲ... ಮನುಷ್ಯನ ಮರ್ಕಟ ಬುದ್ಧಿಗೆ ಮಿತಿಯುಂಟೆ?

ಆಗ ಶುರುವಾಯಿತು ನೋಡಿ ಹಾಹಾಕಾರ!

ತಾವೇ ಮುಂದೆ ನಿಂತು ತಮ್ಮ ಮನೆ-ಅಂಗಡಿಗಳನ್ನು ಕಟ್ಟಿಸಿಕೊಂಡಿದ್ದ ಜನ ಈಗ ತಾವೇ ಮೊದಲಾಗಿ ಮನೆ ಕೆಡವಲು ಹೊರಟುಬಿಟ್ಟರು. ಕೈಲಿ ಹಾರೆ, ಸುತ್ತಿಗೆ, ಉಳಿ ಇರುವ ಪ್ರತಿಯೊಬ್ಬರನ್ನು ಹುಡುಕಿ ಕರೆತಂದು ಕಿಟಕಿ, ಬಾಗಿಲು, ಶಟರ್ಸ್‌ಗಳನ್ನು ಕೀಳಿಸಲು ಶುರುವಿಟ್ಟುಕೊಂಡರು. ಕೆಡವುವುದೇ ಗ್ಯಾರಂಟಿ ಅಂತಾದ ಮೇಲೆ ಕನಿಷ್ಠ ಪಕ್ಷ ಬೆಲೆಬಾಳುವ ವಸ್ತುಗಳನ್ನಾದರೂ ಉಳಿಸಿಕೊಳ್ಳೋಣವೆಂಬ ಸಣ್ಣ ಲೆಕ್ಕಾಚಾರ ಅದು. ಈ ಕೆಲಸ ಯಾವಾಗ ಶುರುವಾಯಿತೋ ಅದ್ಯಾವ ಮಾಯದಿಂದಲೋ ಏನೋ ಪೇಟೆಬೀದಿಯಲ್ಲಿ ಹಳೇ ಮರದ ವ್ಯಾಪಾರಿಗಳು ಪ್ರತ್ಯಕ್ಷರಾದರು. ಜನ ಕಿತ್ತಿಟ್ಟುಕೊಂಡ ಕಿಟಕಿ, ಬಾಗಿಲು, ವಾಸ್‌ಕಲ್‌ಗಳ ವ್ಯಾಪಾರ ರಾತ್ರೋ ರಾತ್ರಿ ಚಾಲೂ ಆಯಿತು. ಈ ಗದ್ದಲ ಗೌಜುಗಳ ಮಧ್ಯೆ ದಿಢೀರನೆ ಗ್ಯಾಸ್ ಕಟ್ಟರ್‌ಗಳಿಗಾಗಿ ಜನ ಹುಡುಕಿ "ನಿನ್ ದಮ್ಮಯ್ಯ, ಬಾರಯ್ಯ" ಎಂದು ಕರೆತರಲಾರಂಭಿಸಿದರು.

ಇದು ಯಾಕೆ ಗೊತ್ತಾ?

ರಸ್ತೆಗಾಗಿ ಒಂದು ಬಿಲ್ಡಿಂಗ್‌ನ ಎಷ್ಟು ಭಾಗ ಡೆಮಾಲಿಷ್ ಮಾಡಬೇಕೆಂದು ಸರ್ಕಾರದವರೇನೊ ಕೆಂಪು ಬಣ್ಣದಲ್ಲಿ ಮಾರ್ಕ್ ಹಾಕಿರುತ್ತಾರೆ ಸರಿ. ಆದರೆ ಛಾವಣಿ RCC ಯದ್ದಾದರೆ ಅಲ್ಲಿ ಮೇಲೆ ಕಬ್ಬಿಣದ ಸರಳುಗಳ ಬಲೆ ಹರಡಿಕೊಂಡಿರುತ್ತದಲ್ಲ, ಬುಲ್ಡೋಜರ್ ಅಲ್ಲಿಗೆ ಮೂತಿ ಚಾಚಿ ಕೆಡುವುವಾಗ ಸೆಂಟ್ರಿಂಗ್ ಇರುವ ಕಟ್ಟಡದ ಇಡೀ ಛಾವಣಿಯೇ ಸೆಳೆಯಲ್ಪಡುತ್ತದೆ. ಆಗ ಡೆಮಾಲಿಷನ್ ಆಗಬೇಕಿರದ ಬಿಲ್ಡಿಂಗ್‌ನ ಛಾವಣಿ-ಗೋಡೆಗಳೂ ಉದುರಿ ಹೋಗುವ ಅಪಾಯ ಇರುತ್ತೆ ತಾನೆ? ಅದಕ್ಕೆ ಜನ ಸ್ಥಳದಲ್ಲೇ ಒಂದು ಪರಿಹಾರ ಕಂಡುಕೊಂಡರು!

ಸಿಂಪಲ್ ಪರಿಹಾರ ಅದು. ಎಲ್ಲೆಲ್ಲಿ ಕೆಂಪು ಮಾರ್ಕ್ ಹಾದು ಹೋಗುತ್ತದೆಯೋ ಅಲ್ಲಿರುವ ಕಬ್ಬಿಣದ ರಾಡ್‌ಗಳನ್ನು ಗ್ಯಾಸ್ ಕಟರ್ ಮೂಲಕ ಬೆಂಕಿ ಶಾಖ ಕೊಟ್ಟು ಕಟ್ ಮಾಡಿಸಿಬಿಡುವುದು. ಆಗ ಉರುಳಬೇಕಾದ ಕಟ್ಟಡದ ಭಾಗ ಹಾಗೂ ಉಳಿಯಬೇಕಾದ ಕಟ್ಟಡದ ಭಾಗಗಳ ಮಧ್ಯೆ ಸಂಪರ್ಕ ಕಟ್ ಆಗುತ್ತದೆ; ಬುಲ್ಡೋಜರ್ ಬಂದ ರೂನು ಡೆಮಾಲಿಷನ್ ಸಾವಿನೇಟನಿಂದ ರಿಯಾಯಿತಿ ಪಡೆದಿರುವ ಭಾಗ ಸೇಫ್ ಆಗೇ ಇರುತ್ತದೆಂಬ ಪ್ಲಾನ್ ಅದು.

ಉಳಿದಿರುವ ಅರವತ್ತು ಗಂಟೆಗಳಲ್ಲಿ ಕನಿಷ್ಠ ಐದು-ಆರು ನೂರರಷ್ಟು ಮನೆ ಅಂಗಡಿಗಳ ಭಾಗ ಸಪರೇಟ್ ಮಾಡಲು ಎಷ್ಟು ಜನ ಗ್ಯಾಸ್ ಕಟ್ಟರ್‌ಗಳು ಪರಿಕರಗಳು ಬೇಕಾಗಬಹುದು ಯೋಚಿಸಿ ನೋಡಿ?

ಆದರೆ ಅಂತ ಕೆಡವುವ ಜನರೂ ಎಲ್ಲೆಲ್ಲಿಂದಲೋ ರಾತ್ರೋರಾತ್ರಿ ದೊಡ್ಡ ಸಂಖ್ಯೆಯಲ್ಲೇ ನಗುನಗುತ್ತಾ ಬಂದಿಳಿದರಂತೆ.

ನಿಂತ ಹೆಜ್ಜೆಯಲ್ಲೇ ಕೂಲಿ ರೇಟಿನ ಮಾತು, ಚೌಕಾಸಿ ನಡೆದು ಕೆಲ ಹೊತ್ತಿನಲ್ಲೇ ವಾತಾವರಣ ಪೂರ್ತಿ ಗ್ಯಾಸ್ ವಾಸನೆ, ಬೆಂಕಿಯ ಶಾಖಮಯವಾಗಿ ಹೋಗಿದೆ. ಈ ಕೆಲಸಗಾರರ ಕುಡಿತದ ಚಟ ತೀರಿಸಲು ಕನಕಪುರದ ವೈನ್ ಸ್ಟೋರ್‌ಗಳು ಹಗಲುರಾತ್ರಿಯೆನ್ನದೆ ಬಾಗಿಲು ತೆರೆದಿದ್ದು ಅಳಿಲು ಸೇವೆ ಮಾಡಿದ್ದಾರೆ. ತಳ್ಳೋಗಾ[illegible] ಊಟ-ತಿಂಡಿ ಮಾರುವವರು ತರಾತುರಿಯಲ್ಲಿ ಅನ್ನ ಬ[illegible] ತಂದು ಕೆಡವುವ ಜನರಿಗೆ ಉಣಬಡಿಸಿ ಕಾಸಿಸಿ[illegible] "ಖುಶ್ ವ್ಯಾಪಾರ ಇವತ್ತು" ಅಂದುಕೊಂಡು ಹೋ[illegible]

ಇದನ್ನ ಏನಂತ ಅರ್ಥ ಮಾಡಿಕೊಳ್ಳುತ್ತೀರಿ[illegible] ಬೆಳಗಾದರೆ ಒಬ್ಬರ ಮುಖ ಇನ್ನೊಬ್ಬರು ನೋ[illegible] ಇದ್ದ ಜನ. ವ್ಯಾಪಾರವೋ, ವ್ಯವಹಾರವೋ ಒ[illegible] ಒಂದು ತರದ ಹೊಕ್ಕೂಬಳಕೆಯಿದ್ದ ಸಣ್ಣ ಊ[illegible] ತಲೆ ತಲಾಂತರದಿಂದ ಬದುಕುತ್ತಿದ್ದ ಜನ ಯಾಕೆ[illegible] ಬದಲಾಗಿ ಬಿಡುತ್ತಾರೆ?

ಅಲ್ಲಿ ಒಬ್ಬನ ಮನೆ ಹಾಳಾಗುತ್ತಾ ಇದ್ದಾಗ ಇ[illegible] ಅದರಿಂದಲೇ ತನ್ನ ವ್ಯಾಪಾರದ ತಾತ್ಕಾಲಿಕ [illegible] ಹೆಚ್ಚಾಯಿತು ಅಂತ ಹಿಗ್ಗುವುದನ್ನು ನೀವು ಯಾವ [illegible] ಗೋಲಿಟ್ಟು ವಿವರಿಸುತ್ತೀರಿ ಹೇಳಿ?

ಇದೇನು ಜಾತಿ ವ್ಯವಸ್ಥೆಗೊ, ವರ್ಗ ವಿಶ್ಲೇಷ[illegible] ನಿಲುಕುವ ವಿಚಾರಾನಾ? ಅಥವಾ ಮನುಷ್ಯನೆಂಬ [illegible] ಕಾಲಿನ ವಿಚಿತ್ರ ಪ್ರಾಣಿಯ ಮನಸ್ಸನ್ನು ಹೀಗೆ m[illegible] ಮಾಡುತ್ತಿರುವ ಲಾಭಬಡುಕ ಸಮಾಜದ ದುರಂ[illegible]

ಗೆಳೆಯ ಎಂಸಿ ನನಗೆ ವಿವರಿಸಿದ ಘಟನೆಗಳು [illegible] ಮುಗಿಯಲಿಲ್ಲ. ಸರ್ಕಾರ ಕೊಟ್ಟಿದ್ದ 60 ಗಂಟೆಗಳ [illegible] ಲೈನ್ ಮುಗಿದು ಶನಿವಾರ ಬೆಳಗ್ಗೆ ಬುಲ್ಡೋಜರ[illegible] ಹೂಂಕರಿಸಲು ಶುರು ಮಾಡಿದೇಟಿಗೆ ಯಾವ್ಯಾವ[illegible] ಊರುಗಳಿಂದ ಗುಜರಿ ವ್ಯಾಪಾರಿಗಳ ಆಗಮನವ[illegible] ಜೊತೆಗೆ ಕಬ್ಬಿಣ-ಮರದ ಸಾಮಾನು ತುಂಬಿಕೊ[illegible] ಹೋಗಲು ಡಜನ್‌ಗಟ್ಟಲೆ ಲಾರಿಗಳೂ ಬಂದಿವೆ[illegible]

ನೀವು ಹಳ್ಳಿಯ ಬದುಕು ಬದುಕಿದ್ದರೆ [illegible] ಹಸು ಸತ್ತರೆ ಮರುಕ್ಷಣ ಏನಾಗುತ್ತದೆಂಬುದನ್ನು ಕಂಡಿರು[illegible] ಯಾರೋ ಅರ್ಜೆಂಟಾಗಿ ಬರುವಂತೆ ಟೆಲಿ[illegible] ಕೊಟ್ಟಿದ್ದರೇನೊ ಎನ್ನುವಂತೆ ರಣಹದ್ದುಗಳು ಮಿಂಚ[illegible] ಹಸುವಿನ ಕಳೇಬರದ ಸುತ್ತಾ ಪ್ರತ್ಯಕ್ಷವಾಗಿರುತ್ತವೆ. ಊರು ಕೆಡವುವ ತಯಾರಿ ಆರಂಭವಾಗುತ್ತಿರುವಂತೆ ಬಾಗಿಲು ಕೀಳುವವರು, ಮನೆ ಕೆಡವುವವರು, ಗ[illegible] ವ್ಯಾಪಾರಿಗಳು ಆಣೆ ನೆರೆಯುವುದು ಅದಕ್ಕಿಂತ [illegible] ಭಿನ್ನ ಹೇಳಿ?

ಕೇಜಿಗೆ ಹತ್ತು ರೂಪಾಯ್ ಅಂತ ಗುಜರಿ ಸಾ[illegible] ನಡುಬೀದಿಯಲ್ಲೇ ವ್ಯಾಪಾರ ಶುರು ಮಾಡಿದ್ದಾರೆ. [illegible] ಕಳಕೊಂಡ ಜನರಿರಲಿ ಸಂಬಂಧವೇ ಇರದಿದ್ದ ಜ[illegible] ಬೀಳಿಸಿದ್ದ ಮನೆಗಳ ಸುತ್ತ ಠಳಾಯಿಸುತ್ತಾ ಕೈಗೆ [illegible] ಸಾಮಾನುಗಳನ್ನು ಎತ್ತಿಕೊಂಡು (ಕಳವು ಮಾಡಿ) [illegible] ಕೊಂಡರಂತೆ. ಎಂದೂ ವ್ಯಾಪಾರ ಮಾಡದಿದ್ದ ಜನ[illegible] ಅವತ್ತು ಕಂಡವರ ಮನೆ ವಸ್ತು ಮಾರಿ ವ್ಯಾಪಾರ ನ[illegible] ರಂತೆ. ಬ್ರೆಕ್ಟ್ ನಾಟಕದ ದೃಶ್ಯಗಳಂತೆ ಭಾಸವಾಗುವ[illegible] ರುದ್ರ ಭಯಾನಕ ಮನುಷ್ಯ ವ್ಯಾಪಾರ ಸಿಮೆಂಟಿನ ಧ[illegible] ಇಟ್ಟಿಗೆ, ಕಲ್ಲು, ಗಾರೆಗಳ ರಾಶಿಯ ನಡುವೆ ಸಾಗಿದ್ದಾ[illegible]

ಇನ್ನೊಂದು ಕ್ಲೈಮ್ಯಾಕ್ಸ್ ದೃಶ್ಯ!


ಕನಕಪುರ ಹಾಗೂ ಸುತ್ತಲಿನ ಸಕಲೆಂಟು ಹ[illegible] ಜನ ಪಿಕ್‌ನಿಕ್ಕಿಗೆ ಬರುವಂತೆ ಸಂಸಾರ ಸಮೇತ ಬ[illegible] ಕೆಡವಲ್ಪಟ್ಟ ಊರನ್ನು ಒಂದು ಥರದ ಥ್ರಿಲ್ ಹ[illegible] ಬೆರಗಿನಿಂದ ನೋಡಿಕೊಂಡು ಹೋಗಿದ್ದಾರೆ. "ಓ [illegible] ಹೊ... ಇದು ವಾಸು ಓಟ್ಲಲ್ವೆ! ಅದೆ ಅಲ್ವೆ ಗ[illegible] ಜಯಣ್ಣನ ಅಂಗಡಿ' ಅನ್ನೋ ಸಂಶೋಧನೆ ಬೇರೆ ಅವ[illegible] ಒಳ್ಳೆ ಪಳೆಯುಳಿಕೆ ತಜ್ಞರ ಥರ!

ಈ ಮಧ್ಯೆ ಕನಕಪುರದ ರೂರಲ್ ಕಾಲೇಜಿನ[illegible] ಇನ್ನೊಂದು ತಂತ್ರ ಮಾಡಿದರು. ಮಹಾತ್ಮಾಗ[illegible] ರೋಡಿನಲ್ಲೇ ಇವರ ಬಹುದೊಡ್ಡ ಶಾಪಿಂಗ್ ಕಾಂ[illegible] ಇತ್ತು. ಆದರೆ ಬಾಡಿಗೆದಾರರೆಲ್ಲಾ ಯಾವುದ[illegible] ಶತಮಾನದಲ್ಲಿ ಆಗಿದ್ದ ಒಪ್ಪಂದದಂತೆ ಕೊಡುತ್ತಿದ್ದ ಬಾ[illegible] ಜುಜುಬಿ 75 ರೂಪಾಯಿ ಮಾತ್ರ! ಡೆಮಾಲಿಷನ್[illegible] ಅರ್ಧ ಭಾಗ ಉರುಳಿ ಇನ್ನರ್ಧ ಉಳಿಯುತ್ತದೆ [illegible] ಗೊತ್ತಾದಾಗ ಗಾಬರಿಯಾದ ಕಾಲೇಜ್ ಮ್ಯಾನೆ[illegible] ಮೆಂಟಿನವರು "ಅದೇನೂ ಬೇಡ, ಒಂಚೂ[illegible] ಉಳಿಸಬೇಡಿ, ಪೂರಾ ಕಿತ್ತು ಬಿಸಾಡಿ" [illegible] ಹಚ್ಚಿಕೊಟ್ಟು ಹಳೇ ಸೇಡನ್ನು ಬೇರೊ[illegible] ರೀತಿ ತೀರಿಸಿಕೊಂಡಿದ್ದಾರೆ. ಹೊಸ ರಸ್ತೆ ಬ[illegible] ಮೇಲೂ ಅವರಿಗೆ ಹೊಸ ಕಾಂಪ್ಲೆಕ್ಸ್ ಕ[illegible] ಜಾಗ ಇದೆ. ಬಾಡಿಗೇನೂ ಜಾಸ್ತಿ ಬರು[illegible] ಯಾವನಿಗೋ ಆಗುವ ನಷ್ಟ ಮತ್ಯಾರಿಗ[illegible] ಬಂಪರ್ ಲಾಭ!

ಕೊನೆಯದಾಗಿ ಮುಂಬೈನಲ್ಲಿ ಉಗ್ರರು ಕೆಡವಬೇ[illegible] ದ್ದನೆಲ್ಲಾ ಕೆಡವಿ ತಾವೂ ನಾಶರಾದರಲ್ಲವೆ. ಅವ[illegible] ನಾವೆಲ್ಲಾ ಭಯೋತ್ಪಾದಕರೆಂದು ಬ್ರಾಂಡ್ ಮಾಡಿ ಬೈ[illegible] ಕೊಂಡೆವು. ಆದರೆ ಕನಕಪುರದಲ್ಲೊ, ಅಥವಾ ಬೇ[illegible] ಹತ್ತಾರು ಕಡೆ ಬೇರೊಂದು ರೀತಿಯಲ್ಲಿ ಕೆಡವುವವ[illegible] ಅಭಿವೃದ್ಧಿಯ ಹರಿಕಾರರು ಎಂದು ಕರೆದು ಸಮಾ[illegible] ಮಾಡಿಕೊಳ್ಳು ತ್ತಿದ್ದೇವಲ್ಲ...

ಮನುಷ್ಯನ ಮರ್ಕಟ ಬುದ್ಧಿಗೆ ಮಿತಿಯುಂಟೆ?

ಲಗೋರಿ ಆರಂಭಕ್ಕೆ ಮೊದಲೇ ಗೋರಿ!



ಬಾಂಬೆ ಮೇಲೆ ಬಾಂಬ್ ಬಿದ್ದಂತೆ ಗಾಂಧಿನಗರದ ಮೇಲೂ ಬಾಂಬ್ ಬಿದ್ದಿದೆ. ಕನ್ನಡದ ಚಿತ್ರರಂಗದ ಇತಿಹಾಸದಲ್ಲೇ ಅತ್ಯಂತ ಅದ್ಧೂರಿ ಚಿತ್ರವಾಗಲಿದೆ ಎಂದೇ ಬಿಂಬಿಸಲ್ಪಟ್ಟಿದ್ದ 'ಲಗೋರಿ' ಚಿತ್ರ ತನ್ನ ಮುಹೂರ್ತದ ಎರಡು ದಿನ ಮುನ್ನ ರದ್ದಾಗಿದೆ ಎಂಬ ಸುದ್ದಿ ಗಾಂಧಿನಗರದ ಮೇಲೆ ಬಾಂಬ್ ಬಿದ್ದಂತೆ ಎಗರಿದೆ. ಈ ಸುದ್ದಿಯನ್ನು ಮೊದಲಿಗೆ ಸುದ್ದಿ ಎಂದು ಕೆಲವರು ಅಲ್ಲಗಳೆದರು. ...ನ್-ಪುನೀತ್-ಯೋಗರಾಜ್ ಭಟ್ ಸಂಗಮದ ಈ ಚಿತ್ರ ...ು ಹೇಗೆ ತಾನೆ ಸಾಧ್ಯ? ಈ ಚಿತ್ರದ ಹಾಡುಗಳ ಸಂಯೋಜನೆ ...ದೆ. ಲೊಕೇಶನ್ನುಗಳನ್ನೂ ಫೈನಲೈಸ್ ಮಾಡಲಾಗಿದೆ. ಈ ...ಲ್ಲಿ ಇದು ಹೇಗೆ ರದ್ದಾಗುತ್ತದೆ? ಎಂದು ಅವರೆಲ್ಲ ...ುವಾಗಲೇ ಈ ಸುದ್ದಿ ನಿಜ ಎಂದು ಸ್ವತಃ ಯೋಗರಾಜ್ ಮತ್ತು ರಾಕ್‌ಲೈನ್ ವೆಂಕಟೇಶ್ ಒಪ್ಪಿಕೊಂಡಿದ್ದಾರೆ. ಅಲ್ಲಿಗೆ ...ಗರದಲ್ಲಿ 'ಲಗೋರಿ' ರದ್ದಾಗಿದ್ದು ಏಕೆ ಎಂಬುದರ ಸುತ್ತ ...ದು ಹೊಸ ತರ್ಕ ಕೇಳಿಬರುತ್ತಿದೆ.








...ದಲ ತರ್ಕ: ಪಾರ್ವತಮ್ಮ ಬೈದರೇ?

"...ಚಿತ್ರದ ಕಥೆ ಚೆನ್ನಾಗಿಲ್ಲವಂತೆ, ಅದಕ್ಕೆ ಪಾರ್ವತಮ್ಮನವರು ...ನ್ನ ಯದ್ವಾತದ್ವಾ ಬೈದು ಬೆವರಿಳಿಸಿದರಂತೆ...." ಎಂದು ...ಸುತ್ತಿನ ತರ್ಕ ಎಲ್ಲೆಡೆ ಹರಡಿತು. ಆದರೆ ಸ್ವತಃ ರಾಘವೇಂದ್ರ ...ಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಚಿತ್ರದ ಕಥೆ ...ಭಟ್ಟರ ಡೈಲಾಗ್‌ಅನ್ನು ಸಿಕ್ಕಾಪಟ್ಟೆ ಮೆಚ್ಚಿ ಎಲ್ಲರ ಮುಂದೆ ...ದ್ದರು. ಆದ್ದರಿಂದ ಈ ತರ್ಕ ಸರಿ ಅಲ್ಲ ಎಂಬ ನಿರ್ಧಾರಕ್ಕೆ ...ು ಜನ ಬಂದರು.

...ನೇ ತರ್ಕ: ಮತ್ತೆ ಗಣೇಶ ಬರ್ತಾನಾ?

"...ಪುನೀತ್‌ಗೂ, ಯೋಗರಾಜ ಭಟ್ಟರಿಗೂ ಕೂಡಿಬರೋದೇ ...ಸುರೂ...." ಎಂಬುದು ಗಾಂಧಿನಗರದವರ ಕೆಲವರ ಅಭಿಪ್ರಾಯ. ಈ ಹಿಂದೆ 'ಮುಂಗಾರು ಮಳೆ' ಮತ್ತು 'ಗಾಳಿಪಟ' ಚಿತ್ರಗಳಿಗೆ ಭಟ್ಟರು ಪುನೀತ್ ಕಾಲ್‌ಶೀಟ್‌ಗಾಗಿ ಪ್ರಯತ್ನಿಸಿ ವಿಫಲರಾಗಿದ್ದರು. ಮೂರನೇ ಪ್ರಯತ್ನದಲ್ಲಿ ಇವರಿಬ್ಬರ ಸಂಗಮವಾಯಿತು ಎಂದುಕೊಳ್ಳುವಷ್ಟರಲ್ಲಿ ಈಗ 'ಲಗೋರಿ'ಯೂ ರದ್ದಾಗಿದೆ. ಆದ್ದರಿಂದ "ಈ ಹಿಂದಿನಂತೆ ಈ ಬಾರಿಯೂ ಗಣೇಶ್‌ನನ್ನು ಹಾಕಿಕೊಂಡೇ ಭಟ್ಟರು 'ಲಗೋರಿ' ಆಡುತ್ತಾರೆ ನೋಡ್ತಿರಿ" ಎಂದು ಕೆಲವರು ಈಗಾಗಲೇ ಭವಿಷ್ಯ ನುಡಿಯಲಾರಂಭಿಸಿದ್ದಾರೆ.

ಮೂರನೇ ತರ್ಕ: ರಾಕ್ ಮೇಲೆ ರಿವೇಂಜ್?!



"ರಾಕ್‌ಲೈನ್ ವೆಂಕಟೇಶ್ ಅವರು ಯೋಗರಾಜ ಭಟ್ಟರನ್ನು ಛೇಂಬರ್‌ಗೆ ಕರೆಸಿಕೊಂಡು ಅವರ ಮೇಲೆ ಒತ್ತಾಯ ತಂದು ಅವರ ಕಾಲ್‌ಶೀಟ್ ಪಡೆದಿದ್ದರು. ಅಷ್ಟೇ ಅಲ್ಲ, 'ಗಾಳಿಪಟ'ದ ನಿರ್ದೇಶನಕ್ಕೆ ಒಂದು ಕೋಟಿ ಸಂಭಾವನೆ ಪಡೆದಿದ್ದ ಭಟ್ಟರಿಗೆ 'ಲಗೋರಿ'ಗೆಂದು ವೆಂಕಟೇಶ್ ನೀಡಲು ಒಪ್ಪಿದ್ದು ಕೇವಲ ಇಪ್ಪತ್ತೈದು ಲಕ್ಷ ಮಾತ್ರ. ಆ ಒಂದು ಕಾರಣವನ್ನೇ ಮನಸ್ಸಿನಲ್ಲಿಟ್ಟುಕೊಂಡು ಯೋಗರಾಜ ಭಟ್ಟರು ಚಿತ್ರದ ಬಜೆಟ್‌ಅನ್ನು 12 ಕೋಟಿಗೆ ಏರಿಸಿದರು. 'ನನಗೆ ಹಣ ಕೊಡದಿದ್ದರೂ ಪರವಾಗಿಲ್ಲ, ಚಿತ್ರಕ್ಕೆ ಹಣ ಸುರಿಯಿರಿ' ಎಂಬ ಭಟ್ಟರ ಲೆಕ್ಕಾಚಾರದಿಂದಾಗಿ ರಾಕ್‌ಲೈನ್ ಅಪ್ಸೆಟ್ ಆಗಿದ್ದಾರೆ ಎಂಬುದು ಕೆಲವರು ಮಂಡಿಸುತ್ತಿರುವ ತರ್ಕ. ಆದರೆ ಪುನೀತ್‌ಗಾಗಿ ಎಷ್ಟೇ ಕೋಟಿ ರೂ. ಸುರಿಯಲೂ ರಾಕ್‌ಲೈನ್ ಹಿಂದೆಮುಂದೆ ನೋಡುವುದಿಲ್ಲ ಎಂಬ ಅಂಶ ಈ ಗಾಂಧಿನಗರಿಗಳಿಗೆ ಗೊತ್ತಿರುವಂತಿಲ್ಲ.

ನಾಲ್ಕನೇ ತರ್ಕ: ರಾಕ್ ಹಿಂಜರಿದದ್ದು ಯಾಕೆ?

"ರಾಕ್‌ಲೈನ್ ವೆಂಕಟೇಶ್ ಎಷ್ಟೇ ದೊಡ್ಡ ನಿರ್ಮಾಪಕರಾದರೂ ಅವರಿಗೂ, ಸ್ವಮೇಕ್ ಚಿತ್ರಕ್ಕೂ ಅಷ್ಟಕ್ಕಷ್ಟೇ. ಅವರು ಸ್ವಮೇಕ್ ಚಿತ್ರಕ್ಕೆ ಹಣ ಸುರಿಯಲು ಹಿಂದೆಮುಂದೆ ನೋಡುತ್ತಾರೆ. ಆದರೆ ಅದೇ ರಿಮೇಕ್ ಚಿತ್ರಕ್ಕಾದರೆ, ಎಷ್ಟು ಕೋಟಿ ಸುರಿಯಲೂ ಸಿದ್ಧ" ಎನ್ನುತ್ತಾರೆ ಗಾಂಧಿನಗರದ ಗಾಸಿಪ್ ಜನ. ಆದಕ್ಕೆ ಅವರು ಹಲವಾರು ಉದಾಹರಣೆಗಳನ್ನು ಕೊಡುತ್ತಾರೆ: ಉಪೇಂದ್ರ ಮತ್ತು ವಿಷ್ಣುವರ್ಧನ್‌ರನ್ನು ಹಾಕಿಕೊಂಡು ನಾಗಾಭರಣ ನಿರ್ದೇಶಿಸಬೇಕಿದ್ದ 'ಯುಗೇ ಯುಗೇ' ಚಿತ್ರ ಮೂರು ವರ್ಷದಿಂದ ಸೆಟ್ಟೇರಿಲ್ಲ, ಈ ಮಧ್ಯೆ ಅರುಣ್ ಸಾಗರ್ ನಿರ್ದೇಶಿಸಬೇಕಿದ್ದ ರಾಕ್‌ಲೈನ್ ಅವರ 'ಮುಲ್ಲಗಂಬ' ಚಿತ್ರ ಕೂಡಾ ಅನಿರ್ದಿಷ್ಟಕಾಲಾವಧಿಗೆ ಮುಂದೂಡಲ್ಪಟ್ಟಿದೆ. ಈಗ ಭಟ್ಟರ 'ಲಗೋರಿ'ಗೂ ಅದೇ ಗತಿಯಾಗಿದೆ. ಈ ಮೂರೂ ಚಿತ್ರಗಳು ಸ್ವಮೇಕ್ ಎಂಬುದೇ ವಿಶೇಷ.

ಐದನೇ ತರ್ಕ: ಜಾರ್ಜ್ ಬುಷ್ ಕಾರಣ!!

ಜಗತ್ತಿನಾದ್ಯಂತ ಆರ್ಥಿಕ ಕುಸಿತದ ಪರಿಣಾಮದಿಂದಾಗಿ 'ಲಗೋರಿ' ರದ್ದಾಗಿದೆ ಎಂಬುದು ಇನ್ನೊಂದು ತರ್ಕ. ಇದನ್ನು ಸ್ವತಃ ಯೋಗರಾಜ ಭಟ್ ತಮಾಷೆಯಾಗಿ ಹೇಳಿದ್ದಾರೆ. "ಈ ಚಿತ್ರಕ್ಕಾಗಿ ಸುಮಾರು ಐವತ್ತು ದಿನ ಅಮೆರಿಕದಲ್ಲಿ ಚಿತ್ರೀಕರಣ ಮಾಡಬೇಕಾಗಿತ್ತು, ಈಗ ರೂಪಾಯಿ ಅಪಮೌಲ್ಯಗೊಂಡಿರುವುದರಿಂದ ಇದು ದುಬಾರಿ ಹೂಡಿಕೆ" ಎಂದೂ ಅವರು ಸೇರಿಸಿದ್ದಾರೆ.

ಭಟ್ಟರ ಈ ತರ್ಕಕ್ಕೆ ರಾಕ್‌ಲೈನ್ ವೆಂಕಟೇಶ್ ಸ್ಪಂದಿಸಿದ ರೀತಿಯೂ ಅಷ್ಟೇ ತಮಾಷೆಯಾಗಿದೆ. "ಭಟ್ಟರು ಹೇಳಿದ್ದನ್ನೇ ಬರೆಯಿರಿ. ಕನಿಷ್ಟ ನನ್ನ ಮನೆಯ ಮೇಲೆ ಆದಾಯ ತೆರಿಗೆ ದಾಳಿಯಾಗುವುದಾದರೂ ತಪ್ಪುತ್ತದೆ" ಎಂದು ಅವರು ವ್ಯಂಗ್ಯವಾಡಿದ್ದಾರೆ. ಅಂದರೆ ಇಬ್ಬರೂ ಪರಸ್ಪರ ಹಾಸ್ಯಮಾಡುತ್ತಾ ನೋವನ್ನು ಮರೆಯುವ ಪ್ರಕ್ರಿಯೆಯಲ್ಲಿದ್ದಾರೆ. ಅದೃಷ್ಟವಶಾತ್ ಯಾರೂ ಇದುವರೆಗೂ ಗಾಂಧಿನಗರದ ಭಾಷೆ ಬಳಸಿಲ್ಲ ಎಂಬುದು ಸಮಾಧಾನ.


ಫೈನಲ್ ಕಟ್: ಪರಿಸ್ಥಿತಿಯೇ ಕಾರಣ

ಹೀಗೆ ಒಂದು ಚಿತ್ರ ರದ್ದಾಗಿರುವುದಕ್ಕೆ ಗಾಂಧಿನಗರದ ಜನ ಹಲವಾರು ಕಾರಣಗಳನ್ನು ನೀಡುತ್ತಿರುವಾಗ "ಚಿತ್ರ ರದ್ದಾಗಿರುವುದು ನಿಜ. ಆದರೆ ಅದಕ್ಕೆ ಕಾರಣ ಪರಿಸ್ಥಿತಿಯೇ ವಿನಃ ವ್ಯಕ್ತಿಗತವಾಗಿ ಯಾರೂ ಅಲ್ಲ. ಈ ಚಿತ್ರ ಹನ್ನೆರಡು ಕೋಟಿ ಬಜೆಟ್‌ಅನ್ನು ದಾಟುತ್ತಿತ್ತು. ಈ ಹಂತದಲ್ಲಿ ಯಾವುದೇ ನಿರ್ಮಾಪಕ ಇಂತಹ ನಿರ್ಣಯವನ್ನು ಕೈಗೊಳ್ಳುವುದು ಸಹಜ. ಈ ಚಿತ್ರಕ್ಕಾಗಿ ಈಗಾಗಲೇ ಒಂದೂವರೆ ಕೋಟಿ ರುಪಾಯಿ ಸುರಿದ ನಿರ್ಮಾಪಕ ರಾಕ್‌ಲೈನ್ ಬಗ್ಗೆ ನನಗೆ ಅನುಕಂಪವಿದೆ... " ಎಂದರು ಭಟ್ಟರು ಪ್ರತಿಕ್ರಿಯಿಸಿದ್ದಾರೆ.

ಕಾರಣ ಏನೇ ಇರಲಿ, ಕನ್ನಡ ಚಿತ್ರರಂಗದಲ್ಲೇ ಒಂದು ಅದ್ಧೂರಿ ಚಿತ್ರವಾಗಲಿದ್ದ 'ಲಗೋರಿ' ಆರಂಭವಾಗುವ ಮೊದಲೇ ಗೋರಿ ಸೇರಬಾರದಿತ್ತಲ್ಲವೆ?

■ ಶೆಣೈ








...ಪರಮೇಶಿ' ಮೋಸ, 'ಗೆಳತಿ' ಗೋತಾ, ಗೆಲುವಿನ 'ಅಕ್ಕ ತಂಗಿ'!

...ದಿನೇಶ್ ಬಾಬು ಎಂಬ ಮಲಯಾಳಿ ಮನುಷ್ಯನ 'ಜನುಮದ ಗೆಳತಿ', ...ನೆ ಜನಾರ್ದನ ಮಹರ್ಷಿ ಬರೆದ ಕಥೆ ಆಧರಿಸಿರುವ ...ಮೇಶಿ ಪಾನ್‌ವಾಲಾ' ಮತ್ತು ಅಪ್ಪಟ ಕನ್ನಡಿಗರಾದ ...ಂದರ್ ಮತ್ತು ರಮೇಶ್ ಯಾದವ್ ಜೊತೆಗೂಡಿ ಬರೆದ ...ತಂಗಿ'... ಈ ವಾರ ತೆರೆಕಂಡ ಮೂರು ಚಿತ್ರಗಳು.

'ಗೆಳತಿ'ಗೆ ಕೈಕೊಟ್ಟ ಬಾಬು



...ಯಾವುದೋ ಒಂದು ಫ್ರೆಂಚ್ ಕವನದಿಂದ ಸ್ಫೂರ್ತಿ ಪಡೆದು ...ಮದ ಗೆಳತಿ' ಮಾಡಿದ್ದೇನೆ ಎಂದು ಬಾಬು ಬುರುಡೆ ...ರು. ಆದರೆ 'ಗೆಳತಿ' ನೋಡುವಾಗ ಬಾಲು ಮಹೇಂದರ್ 'ಯಾತ್ರ' ಚಿತ್ರ ಅಲ್ಲಲ್ಲಿ ನೆನಪಾಗುತ್ತದೆ. ದಿನೇಶ್ ಬಾಬು ...ದರೆ ಕನಿಷ್ಟ ಕಣ್ಣಿಗೆ ಹಬ್ಬವಿರುತ್ತದೆ ಎಂಬುದು ಒಂದು ... ಆದರೆ ಆ ನಂಬಿಕೆಯೂ ಹುಸಿಯಾಗುವಷ್ಟು ಈ ಚಿತ್ರದಲ್ಲಿ ...ರಾ ಕೆಲಸ ಕಳಪೆಯಾಗಿದೆ. ದಿನೇಶ್ ಬಾಬು ಇತ್ತೀಚಿನ ದಿನಗಳಲ್ಲಿ ...ಂದು ನಿರ್ಲಕ್ಷ್ಯದಿಂದ ಯಾವುದೇ ಚಿತ್ರವನ್ನೂ ಮಾಡಿಲ್ಲ ಎಂದು ...ತ್ತದೆ. ಎಷ್ಟೋ ಕಡೆ ಚಿತ್ರದ ವೇಗ ಕುಂಟುತ್ತದೆ; ದೃಶ್ಯಗಳು ...ವರ್ತನೆಯಾಗುತ್ತವೆ; ದಿಢೀರನೆ ಹಾಡುಗಳು ಬರುತ್ತವೆ.... ನಿಜಕ್ಕೂ ...ತ್ರ ದಿನೇಶ್‌ಬಾಬು ಅವರೇ ನಿರ್ದೇಶಿಸಿದ್ದಾರಾ? ಎಂಬ ಸಂಶಯವಂತೂ ...ಡುತ್ತದೆ. ನಾಯಕ ಕಿಟ್ಟಿ ಮತ್ತು ನಾಯಕಿ ಪೂಜಾ ಗಾಂಧಿ ಸಪ್ಪೆ ಸಪ್ಪೆ.

ಮುಂದುವರಿದ ಮಹರ್ಷಿ ದಾಳಿ!



...ಹಿಂದೆ ಜನಾರ್ದನ ಮಹರ್ಷಿ ಚಿತ್ರ ಕತೆ ಬರೆದಿದ್ದ ...ಬಾಸ್' ಮತ್ತು 'ಬೊಂಬಾಟ್' ನೆಲಕಚ್ಚಿದ್ದವು. ಈಗ ಅವರು ...ನದು ತೋಪು ಚಿತ್ರಗಳ ಕತೆಗೆ ಕೆಲ ಹೊಸ ದೃಶ್ಯಗಳನ್ನು ... 'ಪರಮೇಶಿ ಪಾನ್ ವಾಲ' ಎಂಬ ಕತೆ ಹೆಣೆದು ...ನಿಗೆ ನೀಡಿದ್ದಾರೆ.

...ವಾಗಿಸ ಜನಾರ್ದನ ಮಹರ್ಷಿ ಕನ್ನಡ ಚಿತ್ರರಂಗದ ಒಬ್ಬೊಬ್ಬ ...ಟರು ಮತ್ತು ನಿರ್ದೇಶಕರನ್ನು ಮುಗಿಸಬೇಕೆಂದು ಸಂಚು ...ದಂತಿದೆ. 'ಬಿಂದಾಸ್'ನಲ್ಲಿ ಪುನೀತ್‌ನನ್ನೂ, 'ಬೊಂಬಾಟ್' ...ಗಣೇಶನನ್ನೂ ಮುಗಿಸಿದ ಮಹರ್ಷಿ ಈಗ ಶಿವರಾಜ್ ...ರ್ ಅವರಿಗೆ ಪರಮೇಶಿ ಎಂಬ ಪಾನ್ ನೀಡಿ ಅವರನ್ನೂ ಮುಗಿಸಲು ...ಹಾಗಿದ್ದಾರೆ ಅನ್ನಿಸುತ್ತದೆ.

ಯುವ ನಿರ್ದೇಶಕರಲ್ಲಿ ಮಹೇಶ್ ಬಾಬು ಹೊಸ ಭರವಸೆಯನ್ನು ಹುಟ್ಟಿಸಿದವರು. ಆದರೆ 'ಪಾನ್‌ವಾಲ'ನನ್ನು ನೋಡಿದಾಗ ಇವರೂ ಹಾದಿ ತಪ್ಪಿದಂತೆ ಕಾಣಿಸುತ್ತಾರೆ. ಇಡೀ ಚಿತ್ರದಲ್ಲಿ ನಿರ್ದೇಶಕನ ಜಾಣ್ಮೆ, ಕುಸುರಿತನ ಎಲ್ಲೂ ಕಾಣಿಸುವುದಿಲ್ಲ. ಈ ಮಹರ್ಷಿಯನ್ನು ನಂಬಿಕೊಂಡು 'ಮೆರವಣಿಗೆ'ಯಲ್ಲಿ ಮುಗ್ಗರಿಸಿದ್ದ ಮಹೇಶ್ ಬಾಬು ಮತ್ತೆ ಆತನನ್ನೇ ಅವಲಂಬಿಸಿ ಎಡವಿ ಬಿದ್ದಿದ್ದಾರೆ. ಇನ್ನಾದರೂ ಮಹರ್ಷಿಯ ಸಹವಾಸ ಬಿಟ್ಟರೆ ಬಾಬು ಬದುಕುಳಿಯಬಹುದು.


ಮುದ ನೀಡಿದ ಮಹೇಂದರ್!

ಇಬ್ಬರು ಸ್ಟಾರ್ ನಿರ್ದೇಶಕ ಬಾಬುಗಳು ಮುಗ್ಗರಿಸಿದ್ದನ್ನು ನೋಡಿದ ನಂತರ ನಿಜವಾಗಿಯೂ ಮನಸ್ಸಿಗೆ ಮುದ ನೀಡಿದ್ದು ಗಾಂಧಿನಗರದ ಜನ ಮರೆತುಹೋಗಿದ್ದ ನಿರ್ದೇಶಕ ಮಹೇಂದರ್ ಅವರ 'ಅಕ್ಕ ತಂಗಿ'.

ಚಿತ್ರದ ಹೆಸರೇ ಹೇಳುವಂತೆ ಇದು ಅಕ್ಕತಂಗಿಯರಿಗೆ ಸಂಬಂಧಪಟ್ಟ ಕಥಾವಸ್ತು, ಆದರೆ ಅಕ್ಕ ತಂಗಿಯರ ನಡುವಿನ ಪ್ರೀತಿ ಮತ್ತು ಅನ್ಯೋನ್ಯತೆಯನ್ನು ಹೇಳುವಾಗ ಈ ಮಣ್ಣಿನ ಸಂಸ್ಕೃತಿ ಮತ್ತು ನಮ್ಮ ಭಾಷೆಯ ಸೊಗಡನ್ನು ಹೇಳುತ್ತಾ ಹೋಗುತ್ತಾರೆ. ಹೀಗಾಗಿ ಈ ಚಿತ್ರ ನಿಮ್ಮ ಹೃದಯಕ್ಕೆ ಅಲ್ಲಲ್ಲಿ ತಟ್ಟುತ್ತಾ ಹೋಗುತ್ತದೆ. ಕೊನೆಗೊಮ್ಮೆ ನಿಮಗರಿವಿಲ್ಲದೇ ನಿಮ್ಮ ಕಣ್ಣಂಚಿನ ತುದಿಯಲ್ಲಿ ನೀರಹನಿ ತೊಟ್ಟಿಕ್ಕಿದರೂ ಆಶ್ಚರ್ಯವಿಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ, ಪುಣ್ಯ ಕೋಟಿ ಗೋವಿನ ಹಾಡಿನ ಕಥಾವಸ್ತುವನ್ನೇ ಮಹೇಂದರ್ ಈ ಚಿತ್ರದ ಕತೆಯೊಂದಿಗೆ ಬೆರೆಸಿದ್ದಾರೆ. ಶೃತಿ, ಮೋಹನ್, ಶರಣ್, ಕಿಶೋರ್ ಹಾಗೂ ಬಿರಾದಾರ್... ಇವರೆಲ್ಲರ ಅಭಿನಯ ಸೂಪರ್ಬ್. ಚಿತ್ರದ ಸಂಭಾಷಣೆ (ಮಳವಳ್ಳಿ ಸಾಯಿಕೃಷ್ಣ)ಯಂತೂ ವಾಹ್! ಎನ್ನುವಷ್ಟು ಸೊಗಸಾಗಿದೆ. ಸಂಗೀತ, ಛಾಯಾಗ್ರಹಣ, ಸಂಕಲನ ಎಲ್ಲವೂ ಅಚ್ಚುಕಟ್ಟು. ಇಂತಹ ಸುಂದರ ಮತ್ತು ಸಂದೇಶವುಳ್ಳ ಚಿತ್ರ ನಿರ್ಮಿಸಿದ ನಿರ್ಮಾಪಕ ರಮೇಶ್ ಯಾದವ್‌ಗೆ ಒಂದು ಥ್ಯಾಂಕ್ಸ್. ಹೊಡಿ, ಬಡಿ, ಕಡಿ ಚಿತ್ರ ನೋಡಿ ರೋಸಿಹೋದವರೊಮ್ಮೆ 'ಅಕ್ಕ ತಂಗಿ'ಯರನ್ನು ನೋಡಿಬನ್ನಿ! ಅವರಿಬ್ಬರೂ ನಿಮಗೆ ಮೋಸ ಮಾಡಲಾರರು! ■

ಟೀವಿ ಟಿಪ್ಸ್

'ಕನ್ನಡವೇ ಸತ್ಯ ಕನ್ನಡವೇ ನಿತ್ಯ' ಎಂಬ ಹೊಸ ಕಾರ್ಯಕ್ರಮವನ್ನು ಕಸ್ತೂರಿ ಚಾನೆಲ್‌ನವರು ಆರಂಭಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ಐದು ಪ್ರಾಕಾರಗಳಾದ ಜನಪದ, ಭಾವಗೀತೆ, ಭಕ್ತಿಗೀತೆ, ಚಿತ್ರಗೀತೆ, ಕನ್ನಡದ ಕವಿಗಳ ಕಾವ್ಯಗಳನ್ನು ಮಾತ್ರ ಹಾಡುತ್ತಾರಂತೆ. ಅದಕ್ಕಿಂತಲೂ ವಿಶೇಷವೆಂದರೆ, ತೀರ್ಪುಗಾರರಾಗಿರುವ ರತ್ನಮಾಲಾ ಪ್ರಕಾಶ್, ಮ್ಯಾಂಡೊಲಿನ್ ವಾದಕ ಪ್ರಸಾದ್, ಯಶವಂತ ಹಳಬಂಡಿ, ನರಸಿಂಹನಾಯಕ್, ಶ್ರೀಮತಿ ಸುನಿತಾ ಮತ್ತು ಜೆನ್ನಿ, ಮೊದಲಾದವರು ತೀರ್ಪು ನೀಡುವಾಗ ಅಪ್ಪಟ ಕನ್ನಡದ ಪದಗಳನ್ನೇ ಬಳಸುತ್ತಾರಂತೆ. ಇದೊಂದು ನಿಜಕ್ಕೂ ಮೆಚ್ಚಬೇಕಾದ ವಿಷಯ.



ಹೀಗಾಗಿ ನಿಮ್ಮ ಎನರ್ಜಿ ಲೆವೆಲ್ ಕಡಿಮೆ ಮಾಡಿ, ಶ್ರುತಿ ಡ್ರಾಪ್ ಆಗ್ತಿದೆ, ವಾಯ್ಸ್ ಬ್ರೇಕ್ ಆಗ್ತಾಇದೆ, ವಾಯ್ಸ್ ಕಲ್ಚರ್ ಡೆವಲಪ್ ಮಾಡಿ, ಎಕ್ಸ್‌ಪ್ರೆಶನ್ ಇಂಪ್ರೂವ್ ಮಾಡ್ಕೊಬೇಕು... ಮೊದಲಾದ ಅಸಂಬದ್ಧ ಕಂಗ್ಲಿಷ್ ಕೇಳಿಕೇಳಿ ಬೇಸತ್ತುಹೋದವರಿಗೆ ಕಸ್ತೂರಿಯವರ ಈ ಕನ್ನಡದ ಕಂಪು ತಂಪು ನೀಡಬಹುದು. ಒಟ್ಟು ಮೂವತ್ತೆರಡು ಮಂದಿ ಹಾಡುಗಾರರು ಈ ಕಾರ್ಯಕ್ರಮಕ್ಕಾಗಿ ಈಗಾಗಲೇ ಆಯ್ಕೆಯಾಗಿದ್ದಾರೆ.

* * * * * *

ಈಗಾಗಲೇ ಕೋಮುದಳ್ಳುರಿಯಿಂದ ನಲುಗಿರುವ ಕರ್ನಾಟಕದಲ್ಲಿ 'ಶ್ರೀ ಶಂಕರ' ಎಂಬ ಧಾರ್ಮಿಕ ಚಾನೆಲ್‌ವೊಂದು ವಕ್ಕರಿಸಿಕೊಳ್ಳುತ್ತಿದೆ. ಇದೇ ತಿಂಗಳ 21ನೇ ತಾರೀಖು ಬೆಂಗಳೂರಿನ ಅರಮನೆ ಆವರಣದಲ್ಲಿ ದೊಡ್ಡ ಸಮಾರಂಭವೊಂದನ್ನು ಮಾಡುವ ಮೂಲಕ ಆರಂಭವಾಗುತ್ತಿರುವ ಈ ಚಾನೆಲ್ ಕಿರುತೆರೆಯ ಮೂಲಕವೂ ತನ್ನ ಹಿಂದುತ್ವದ ಅಜೆಂಡಾವನ್ನು ಸಾರಲು ಸಿದ್ಧವಾಗಿದೆ.

ಆಂಧ್ರದಲ್ಲಿರುವ 'ವೆಂಕಟೇಶ್ವರ ಡಿವೋಷನಲ್ ಚಾನೆಲ್' ಎಂಬುದೊಂದು ಧಾರ್ಮಿಕ ಚಾನೆಲ್ ಬಿಟ್ಟರೆ ಭಾರತದಲ್ಲಿ ಬೇರಾವುದೇ ಹಿಂದುತ್ವವಾದಿಗಳ ಪರವಾದ ಚಾನೆಲ್ ಇರಲಿಲ್ಲ, ಆದರಲ್ಲೂ ಕರ್ನಾಟಕಕ್ಕಂತೂ ಇದು ಹೊಸ ಪ್ರವೇಶ. ಸದ್ಯಕ್ಕೆ ಕಂಚಿ ಮತ್ತದರ ಶಾಖಾಮಠಗಳಲ್ಲಿ ಬೇನಾಮಿಯಾಗಿ ಕೊಳೆಯುತ್ತಿರುವ ಹತ್ತಾರುಕೋಟಿ ಹಣವನ್ನು ತಂದು 'ಕಾಮಧೇನು ಮೀಡಿಯಾ ಹೌಸ್' ಸಂಸ್ಥೆಯ ಹೆಸರಲ್ಲಿ ಈ ಚಾನೆಲ್ ಆರಂಭಿಸಲಾಗುತ್ತಿದೆ. ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿ ಇದಕ್ಕಾಗಿ ಭವ್ಯವಾದ ಕಟ್ಟಡವನ್ನೂ ನಿರ್ಮಿಸಲಾಗಿದೆ.

ಇಡೀ ದೇಶ ಹಿಂದುತ್ವ ಟೆರರಿಸ್ಟರ ಮತ್ತು ಮುಸ್ಲಿಂ ಭಯೋತ್ಪಾದಕರ ಹಿಂಸಾಕೃತ್ಯದಿಂದಾಗಿ ವಿಲವಿಲನೆ ಒದ್ದಾಡುತ್ತಿದ್ದರೆ, ಕರ್ನಾಟಕದಲ್ಲಿ ಧರ್ಮದ ಹೆಸರಿನಲ್ಲಿ ವಾಹಿನಿಯೊಂದು ಆರಂಭವಾಗುತ್ತಿರುವುದು ಇನ್ನೆಷ್ಟು ಅಭಾಸಗಳಿಗೆ ಕಾರಣವಾಗುತ್ತದೋ? ಯಾರು ಬಲ್ಲರು?

R B P LANKESH, Kannada Weekly Price Rs. 12/- 17-12-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B




ಕವಿತಾ ಲಂಕೇಶ್‌ರ 'ಹಾದಿ' ಬದಲಾದ ಸಮಯದಲ್ಲಿ!

ಸೆಪ್ಟೆಂಬರ್ 8ರಿಂದ ಸಂಜೆ 4.30ಕ್ಕೆ ಪ್ರಸಾರವಾಗುತ್ತಿದ್ದ ಕವಿತಾ ಲಂಕೇಶ್ ನಿರ್ದೇಶನದ 'ನೀ ನಡೆವ ಹಾದಿಯಲಿ' ಧಾರಾವಾಹಿಯು ಇದೇ ಡಿಸೆಂಬರ್ 8ರಿಂದ ಮಧ್ಯಾಹ್ನ 1.30ಕ್ಕೆ ಪ್ರಸಾರವಾಗುತ್ತದೆ. ಈಗಾಗಲೇ 50ಕ್ಕೂ ಹೆಚ್ಚು ಕಂತುಗನ್ನು ಯಶಸ್ವಿಯಾಗಿ ಪೂರೈಸಿರುವ 'ನೀ ನಡೆವ ಹಾದಿಯಲಿ' ಈಗಾಗಲೇ ತನ್ನದೇ ಆದ ಪ್ರೇಕ್ಷಕ ವಲಯವನ್ನು ಸೃಷ್ಟಿಸಿಕೊಂಡಿದೆ.

ಕವಿತಾ ಲಂಕೇಶ್ ನಿರ್ದೇಶಿಸಿದ್ದ 'ಪ್ರೀತಿ, ಪ್ರೇಮ, ಪ್ರಣಯ' ಚಿತ್ರವು ಅದರ ಸುಂದರ ಕಥಾವಸ್ತು ಹಾಗೂ ಲವಲವಿಕೆಯ ನಿರೂಪಣೆಯಿಂದಲೇ ಎಲ್ಲಾ ವಯೋಮಾನದವರ ಮೆಚ್ಚುಗೆಯನ್ನು ಗಳಿಸಿತ್ತು. ಆ ಚಿತ್ರದಲ್ಲಿನ ವೃದ್ಧಾಪ್ಯದ ಏಕಾಂಗಿತನ, ಸಂಗಾತಿಯ ಅರಸುವಿಕೆ, ಬದುಕಿನ ಆಶೆ ಮತ್ತು ಆಕಾಂಕ್ಷೆಗಳು ಈ ಧಾರಾವಾಹಿಯಲ್ಲೂ ಒಂದು ಎಳೆಯಾಗಿ ಮೂಡಿಬಂದಿದೆ. ಈ ಕಾರಣದಿಂದಲೇ ಹದಿಹರೆಯದವರಿಂದ ಹಿಡಿದು ಬದುಕಿನ ಸಂಜೆಯಲ್ಲಿರುವವರ ತನಕ ಎಲ್ಲರಿಗೂ 'ಇದು ನನ್ನದೇ ಕಥೆ' ಎನಿಸುವಷ್ಟರ ಮಟ್ಟಿಗೆ ಆಸಕ್ತೆಯನ್ನು ಸೃಷ್ಟಿಸಿದೆ.

ಚೂಯಿಂಗಮ್ಮಿನಂತೆ ಕಂತುಗಳನ್ನು ಎಳೆದಾಡುವ ಇಂದಿನ ಧಾರಾವಾಹಿಗಳ ಮಧ್ಯೆ ಬಿರುಸಿನಿಂದ ಸಾಗುವ 'ನೀ ನಡೆವ ಹಾದಿಯಲಿ' ವಿಭಿನ್ನವಾಗಿ ಕಾಣಿಸುತ್ತಿದೆ.





ನಾನೇ ರಾಜಕುಮಾರ!

ಎಳೂವರೆ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಈ ವರ್ಷ ಅದ್ದೂರಿಯಾಗಿ ನಿರ್ಮಾಣಗೊಂಡು ಅಮೋಘವಾಗಿ ನೆಲಕಚ್ಚಿದ 'ಸತ್ಯ ಇನ್ ಲವ್' ಚಿತ್ರದ ನಿರ್ದೇಶಕ ರಾಘವ್ ಲೋಕಿ ಮತ್ತೊಂದು ಸಿನಿಮಾ ಮಾಡಲು ಮುಂದೆ ಬಂದಿದ್ದಾರೆ. ತನ್ನ ಎರಡನೇ ಚಿತ್ರಕ್ಕೂ ಶಿವರಾಜ್‌ಕುಮಾರ್‌ರನ್ನೇ ನಾಯಕನನ್ನಾಗಿಸಿಕೊಂಡಿರುವ ಲೋಕಿ ಈ ಹೊಸ ಚಿತ್ರಕ್ಕೆ 'ನಾನೇ ರಾಜಕುಮಾರ' ಎಂದು ಹೆಸರಿಟ್ಟಿದ್ದಾರೆ.



ಪ್ರೇಮ್ ನಿರ್ದೇಶನದ 'ರಾಜ್' ಚಿತ್ರದಲ್ಲಿ ಪುನೀತ್ ನಟಿಸುತ್ತಿದ್ದರೆ, ಅದೇ ಪ್ರೇಮ್ ಗರಡಿಯಿಂದ ಬಂದ ರಾಘವ್ ಲೋಕಿ ಕೂಡ ಶಿವಣ್ಣನ ಜೊತೆ 'ನಾನೇ ರಾಜಕುಮಾರ' ಮಾಡಲು ಮುಂದಾಗಿರುವುದು ವಿಚಿತ್ರವಾಗಿ ಕಾಣಿಸುತ್ತಿದೆ.

ಒಟ್ಟಿನಲ್ಲಿ ಪುನೀತ್-ಶಿವಣ್ಣ ಸಹೋದರರಿಬ್ಬರೂ ತಮ್ಮ ತಂದೆಯ ಹೆಸರಿನ ಚಿತ್ರದಲ್ಲಿ ಏಕಕಾಲದಲ್ಲಿ ಕಾಣಿಸಿಕೊಳ್ಳುತ್ತಿರುವುದು ಮಾತ್ರ ವಿಶೇಷವಾಗಿದೆ.



ಪುತ್ರ ಶೋಕದಲ್ಲಿ ಪ್ರಭುದೇವ

ನೃತ್ಯಗಾರನಾಗಿ, ನಟನಾಗಿ, ಈಗ ನಿರ್ದೇಶಕನಾಗಿ ಅಪಾರ ಯಶಸ್ಸು ಮತ್ತು ಖ್ಯಾತಿ ಗಳಿಸಿರುವ ಪ್ರಭುದೇವ ಅವರು ಮೊನ್ನೆ ತಮ್ಮ 13 ವರ್ಷದ ಪುತ್ರ ವಿಶಾಲ್‌ನನ್ನು ಕಳೆದುಕೊಂಡು ಈಗ ಪುತ್ರಶೋಕದಲ್ಲಿದ್ದಾರೆ. ವಿಶಾಲ್‌ನ ಇನ್ನೊಂದು ಹೆಸರು ಬಸವರಾಜು ಆಗಿದ್ದು ಆತ ಕೆಲ ವರ್ಷಗಳಿಂದ ಮೆದುಳಿನ ಕ್ಯಾನ್ಸರ್‌ನಿಂದ ಬಳಲುತ್ತಿದ್ದ. ಆತನಿಗೆ ಉನ್ನತ ಮಟ್ಟದ ಚಿಕಿತ್ಸೆಯನ್ನು ಕೊಡಿಸಲಾಗಿತ್ತಾದರೂ ಕಳೆದ ವಾರ ಆತನ ಪರಿಸ್ಥಿತಿ ಹದಗೆಟ್ಟಿತು.

ಪ್ರಭುದೇವ ಮತ್ತು ಅವರ ಪತ್ನಿ ಲತಾಗೆ ತಮ್ಮ ಮೊದಲನೆ ಪುತ್ರ ತಮ್ಮೊಂದಿಗೆ ಬಹಳ ದಿನ ಇರುವುದಿಲ್ಲ ಎಂದು ಗೊತ್ತಿತ್ತು, ಆದ್ದರಿಂದ ಆತ ಸಾಧ್ಯವಾದಷ್ಟು ಸಂತೋಷವಾಗಿರುವಂತೆ ನೋಡಿಕೊಳ್ಳುತ್ತಿದ್ದರು. ಈಗ 'ವಿಲ್ಲಿ' ಎಂಬ ಚಿತ್ರವನ್ನು ನಿರ್ದೇಶಿಸುತ್ತಿರುವ ಪ್ರಭುದೇವ ಅವರು ತಮ್ಮ ಮಗ ವಿಶಾಲ್‌ನನ್ನು ವಿದೇಶದಲ್ಲಿ ನಡೆಯಲಿದ್ದ ಚಿತ್ರೀಕರಣಕ್ಕೂ ಕರೆದುಕೊಂಡು ಹೋಗಿದ್ದರು. ಮೊನ್ನೆ ಆತನ ಆರೋಗ್ಯ ಕೆಡಲಾರಂಭಿಸಿದಾಗ ಚಿತ್ರೀಕರಣವನ್ನು ನಿಲ್ಲಿಸಿ ತಮ್ಮ ಮಗನ ಜೊತೆ ಕೊನೆಯವರೆಗೂ ಇದ್ದರು.

ಆದರೆ ವಿಧಿಯನ್ನು ಗೆದ್ದವರುಂಟೆ. ತಂದೆ ತಾಯಿಯ ಪ್ರೀತಿಯನ್ನು ಮೂಲೆಗಟ್ಟಿ ವಿಧಿ ಗೆದ್ದಿದೆ. ಅವರಿಬ್ಬರಿಂದ ಅವರ ಪ್ರೀತಿಯ ಪುತ್ರನನ್ನು ಕಸಿದುಕೊಂಡಿದೆ. "ವಿಶಾಲ್ ಬಹಳ ವರ್ಷ ನಮ್ಮ ಜೀವನದಲ್ಲಿ ಇರುವುದಿಲ್ಲ ಎಂದು ಗೊತ್ತಿತ್ತು. ಆದರೆ ಅದು 13ನೇ ವರ್ಷಕ್ಕೆ ಮುಗಿಯುತ್ತದೆಂದು ಭಾವಿಸಿರಲಿಲ್ಲ. ಆತ ಇನ್ನಷ್ಟು ದಿನ ನಮ್ಮೊಂದಿಗಿದ್ದಿದ್ದರೆ ಚೆನ್ನಾಗಿರುತ್ತಿತ್ತು" ಎಂದು ಪ್ರಭುದೇವ ಕಣ್ಣೀರಿಟ್ಟಿದ್ದಾರೆ.



ಈ ದುಃಖವನ್ನು ತಡೆಯುವ, ಪ್ರೀತಿಯ ಪುತ್ರನ ಅಗಲಿಕೆಯ ನೋವನ್ನು ಮೀರುವ ಶಕ್ತಿ ಪ್ರಭುದೇವ ಮತ್ತು ಅವರ ಸಂಸಾರದವರಿಗೆ ಸಿಗಲೆಂದು ಆಶಿಸುತ್ತೇವೆ.

ಸರ್ಕಸ್
ಅರ್ಚನಾಗುಪ್ತ



ಕನ್ನಡಕ್ಕೆ ಬಂದ ರಾಜಾಮಾಣಿಕ



ಕೆ. ಮಂಜು ಕ್ಯಾಂಪ್‌ನಿಂದ ಮತ್ತೊಂದು ಬಿಸಿಬಿಸಿ ಸುದ್ದಿ ಬಂದಿದೆ. ಮೊನ್ನೆತಾನೆ 'ನಾನೇ ಬೇರೆ ನನ್ನ ಸ್ಟೈಲೇ ಬೇರೆ' ಎಂಬ ವಿಷ್ಣು ಅಭಿನಯದ, ಮಂಜು ನಿರ್ಮಾಣದ ತಮಾಷೆಯ ಚಿತ್ರದ ಕತೆಯನ್ನು ಬದಲಾಯಿಸಿ ಅದನ್ನು ಸಂಪೂರ್ಣವಾಗಿ ಮಸಾಲೆ ಚಿತ್ರವಾಗಿಸಲು ಹೊರಟದ್ದಾರೆ ಎಂಬ ಸುದ್ದಿಯನ್ನು ವರದಿಮಾಡಿದ್ದೆವು. ಆದರೆ ಲೇಟೆಸ್ಟ್ ಸುದ್ದಿ ಏನೆಂದರೆ, ಕಿರುತೆರೆಯ ಹಾಸ್ಯ ಚಕ್ರವರ್ತಿ ಸಿಹಿಕಹಿ ಚಂದ್ರು ನಿರ್ದೇಶಿಸಬೇಕಿದ್ದ ಈ ಚಿತ್ರ ಅನಿರ್ದಿಷ್ಟಾವಧಿಗೆ ಮುಂದೂಡಲ್ಪಟ್ಟಿದೆ ಎಂಬುದು. ಅಷ್ಟೇ ಅಲ್ಲ, ಅದರ ಬದಲಿಗೆ ರಿಮೇಕ್ ಚಿತ್ರವನ್ನು ಇಷ್ಟಪಡುವ ವಿಷ್ಣುವರ್ಧನ್‌ಗಾಗಿ ಮಂಜು ಮಲೆಯಾಳಂನಿಂದ ರಾಜಾಮಾಣಿಕ್ಯ ಎಂಬ ಚಿತ್ರದ ಹಕ್ಕನ್ನು ತಂದಿದ್ದು, ಅದನ್ನು ವಿಷ್ಣು ಅವರ ಫೇವರಿಟ್ ನಿರ್ದೇಶಕ, ಮೂಲತಃ ಮಲೆಯಾಳಿಯಾಗಿರುವ ದಿನೇಶ್ ಬಾಬು ನಿರ್ದೇಶಿಸಲಿದ್ದಾರೆ ಎಂಬುದು!!



ಈ ಎಲ್ಲ ಬದಲಾವಣೆಗಳ ಬಗ್ಗೆ ಅಚ್ಚಕನ್ನಡದ ಪ್ರತಿಭೆ ಸಿಹಿಕಹಿ ಚಂದ್ರುಗೆ ಗೊತ್ತೋ ಇಲ್ಲವೋ; ಅವರು ಮಾತ್ರ ಮಸಾಲೆ ಸಿನಿಮಾಗೆಂದು ಹೊಸ ಕಥೆ ಬರೆಯುವುದರಲ್ಲಿ ಮಗ್ನರಾಗಿದ್ದಾರಂತೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangal...